Swabhimani Sahakari

Pages : 32 / 12₹

# ಸ್ವಾಭಿಮಾನಿ ಸಹಕಾರಿ

ಸೌಹಾರ್ದ ಸಹಕಾರಿ ಚಳವಳಿಯ
ಅಭಿವೃದ್ಧಿಗೆ ಮೀಸಲಾಗಿರುವ ಏಕೈಕ ಮಾಸಪತ್ರಿಕೆ

Volume - 19
Issue - 08
August - 2022

ಸ್ವಾಯತ್ತತೆ
ಸ್ವಯಂ ಆಡಳಿತ
ಸ್ವಯಂ ನಿಯಂತ್ರಣ
ನಮ್ಮ ಧ್ಯೇಯ






ದ್ರೌಪದಿ ಮುರ್ಮು ದೇಶದ
15ನೇ ನೂತನ ರಾಷ್ಟ್ರಪತಿ



ಜಗದೀಪ್ ಧನಕರ್ ದೇಶದ
14ನೇ ನೂತನ ಉಪರಾಷ್ಟ್ರಪತಿ

ವಿಶ್ವ ವಿನೂತನ ವಿದ್ಯಾ ಚೇತನ
ಸರ್ವ ಹೃದಯ ಸಂಸ್ಕಾರಿ ಜಯ ಭಾರತಿ ॥
ವಿಶ್ವ ಭಾರತಿಗೆ ಕನ್ನಡದಾರತಿ
ಮೊಳಗಲಿ ಮಂಗಲ ಜಯಭೇರಿ ॥ ವಿಶ್ವ ॥

ಜಯ ಭಾರತಿ ॥
ಜಯ ಭಾರತಿ ॥

– ಚನ್ನವೀರ ಕಣವಿ



ಶ್ರೀ ಜಿ ನಂಜನಗೌಡ
ನೂತನ ಅಧ್ಯಕ್ಷರು



ಶ್ರೀ ಎ.ಆರ್. ಪ್ರಸನ್ನಕುಮಾರ್
ನೂತನ ಉಪಾಧ್ಯಕ್ಷರು



ಸೌಹಾರ್ದ ಸಹಕಾರಿಗಳ
ಸಂಖ್ಯೆ : 5630

ಇ-ಸ್ಟಾಂಪಿಂಗ್
ಕೇಂದ್ರಗಳ ಸಂಖ್ಯೆ : 1528



ಜಿ. ನಂಜನಗೌಡ

75ನೇಯ ಸ್ವಾತಂತ್ರ್ಯದ ಸಂಭ್ರಮಾಚರಣೆಯ ಸಂದರ್ಭದಲ್ಲಿ ವರಲಕ್ಷ್ಮೀ ಮಹಾಪೂಜೆ, ಕೃಷ್ಣಾಷ್ಟಮಿ, ರಕ್ಷಾ ಬಂಧನ, ಶ್ರೀ ಗಣೇಶ ಚತುರ್ಥಿ ಹಾಗೂ ಮೊಹರಂ ಹಬ್ಬಗಳ ಆಚರಣೆ ಇವುಗಳು ತಮಗೆ ಸುಖ ಸಮೃದ್ಧಿಯನ್ನು ನೀಡಲಿ. ಬಾಳಿನಲ್ಲಿ ನೆಮ್ಮದಿಯನ್ನು ತರಲಿ. ಉತ್ತರೋತ್ತರ ಅಭಿವೃದ್ಧಿಯಾಗಲಿ. ನಮ್ಮ ಸೌಹಾರ್ದ ಸಹಕಾರಿಗಳು ಉತ್ತಮವಾಗಿ ಮಾದರಿಯಾಗಿ ಕಾರ್ಯನಿರ್ವಹಿಸುವಂತೆ ಸಾಧ್ಯವಾಗಲು ಶಕ್ತಿಯನ್ನು ನೀಡಲಿ ಎಂದು ದೇವರಲ್ಲಿ ಪ್ರಾರ್ಥಿಸುತ್ತ ಎಲ್ಲರಿಗೂ ಶುಭ ಹಾರೈಸುತ್ತೇನೆ.

# ಸೌಹಾರ್ದ ಸಹಕಾರಿ ಕಾಯ್ದೆಯ ಆಶಯ, ಸಹಕಾರಿಗಳ ನಿರೀಕ್ಷೆಯಂತೆ ಕಾರ್ಯನಿರ್ವಹಣೆ : ಸಂಯುಕ್ತ ಸಹಕಾರಿಯ ಬೆಳವಣಿಗೆಗೆ, ಸೌಹಾರ್ದ ಸಹಕಾರಿಗಳ ಗುಣಮಟ್ಟ ನಿರ್ವಹಣೆಗೆ ಪ್ರಥಮ ಆದ್ಯತೆ ಸೌಹಾರ್ದ ಸಹಕಾರಿಗಳ ಸಂಪೂರ್ಣ ಸಹಕಾರದ ಅಪೇಕ್ಷೆ.

**ಆತ್ಮೀಯ ಸಹಕಾರಿ ಬಂಧುಗಳಿಗೆ ಹೃತ್ಪೂರ್ವಕ ನಮಸ್ಕಾರಗಳು.**

75ನೇಯ ಸ್ವಾತಂತ್ರ್ಯದ ಸಂಭ್ರಮಾಚರಣೆಯ ಸಂದರ್ಭದಲ್ಲಿ ವರಲಕ್ಷ್ಮೀ ಮಹಾಪೂಜೆ, ಕೃಷ್ಣಾಷ್ಟಮಿ, ರಕ್ಷಾ ಬಂಧನ, ಶ್ರೀ ಗಣೇಶ ಚತುರ್ಥಿ ಹಾಗೂ ಮೋಹರಂ ಹಬ್ಬಗಳ ಆಚರಣೆ ಇವುಗಳು ತಮಗೆ ಸುಖ ಸಮೃದ್ಧಿಯನ್ನು ನೀಡಲಿ. ಬಾಳಿನಲ್ಲಿ ನೆಮ್ಮದಿಯನ್ನು ತರಲಿ. ಉತ್ತರೋತ್ತರ ಅಭಿವೃದ್ಧಿಯಾಗಲಿ. ನಮ್ಮ ಸೌಹಾರ್ದ ಸಹಕಾರಿಗಳು ಉತ್ತಮವಾಗಿ ಮಾದರಿಯಾಗಿ ಕಾರ್ಯನಿರ್ವಹಿಸುವಂತೆ ಸಾಧ್ಯವಾಗಲು ಶಕ್ತಿಯನ್ನು ನೀಡಲಿ ಎಂದು ದೇವರಲ್ಲಿ ಪ್ರಾರ್ಥಿಸುತ್ತ ಎಲ್ಲರಿಗೂ ಶುಭ ಹಾರೈಸುತ್ತೇನೆ.

ಆತ್ಮೀಯರೆ ಸೌಹಾರ್ದ ಸಹಕಾರಿ ಕ್ಷೇತ್ರದ ನೇತೃತ್ವ ವಹಿಸಿರುವ ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯ 5ನೇ ಆಡಳಿತ ಮಂಡಳಿಗೆ ದಿನಾಂಕ 27.07.2022 ರಂದು ಚುನಾವಣೆ ನಡೆದಿರುವುದು ತಮಗೆ ತಿಳಿದಿದೆ. ಈ ಚುನಾವಣೆ ಅತ್ಯಂತ ಪಾರದರ್ಶಕವಾಗಿ, ಶಾಂತಿ ಹಾಗು ಶಿಸ್ತಿನಿಂದ ನಡೆದಿರುವುದು ಅತ್ಯಂತ ಸಂತೋಷದ ವಿಷಯ. ಚುನಾವಣೆಯಲ್ಲಿ ಭಾಗವಹಿಸಿದ ರಾಜ್ಯದ ಎಲ್ಲ ಸೌಹಾರ್ದ ಸಹಕಾರಿಗಳಿಗೆ ಚುನಾವಣೆಯನ್ನು ಅತ್ಯಂತ ವ್ಯವಸ್ಥಿತವಾಗಿ ನಡೆಸಿಕೊಟ್ಟ ಚುನಾವಣಾಧಿಕಾ–ರಿಗಳಿಗೆ ಸಂಯುಕ್ತ ಸಹಕಾರಿಯ ಎಲ್ಲ ಸಿಬ್ಬಂದಿಯವರಿಗೆ ಹಾಗು ಈ ಪ್ರಕ್ರೀಯೆಯಲ್ಲಿ ಸಹಕರಿಸಿದ ಎಲ್ಲರಿಗೂ ಸಂಯುಕ್ತ ಸಹಕಾರಿ ಆಡಳಿತ ಮಂಡಳಿ ತನ್ನ ಕೃತಜ್ಞತೆಯನ್ನು ಸಲ್ಲಿಸುತ್ತದೆ.

ನೂತನವಾಗಿ ಆಯ್ಕೆಯಾಗಿರುವ ಆಡಳಿತ ಮಂಡಳಿಗೆ ಸ್ವಾಗತವನ್ನು ಬಯಸುತ್ತ ರಾಜ್ಯದ ಸೌಹಾರ್ದ ಸಹಕಾರಿ ಕಾಯ್ದೆಯ ಆಶಯ, ಸೌಹಾರ್ದ ಸಹಕಾರಿಗಳ ಮಾರ್ಗದರ್ಶನದಂತೆ ಸೌಹಾರ್ದ ಸಹಕಾರಿ ಕ್ಷೇತ್ರದ ಗುಣಮಟ್ಟ ನಿರ್ವಹಣೆಗೆ ಪ್ರಥಮ ಆದ್ಯತೆಯನ್ನು ನೀಡಬೇಕು. ಸೌಹಾರ್ದ ಸಂಯುಕ್ತ ಸಹಕಾರಿಯ ಬೆಳವಣಿಗೆಗೆ ಆಸಕ್ತಿವಹಿಸಿ ಕೆಲಸ ನಿರ್ವಹಿಸಬೇಕೆಂದು ಈ ಮೂಲಕ ವಿನಂತಿಸಿಕೊಳ್ಳುತ್ತೇನೆ. ಪ್ರಸಕ್ತ ಆಡಳಿತ ಮಂಡಳಿಯ 21 ಸ್ಥಾನಗಳಲ್ಲಿ 11 ಹಳಬರು ಇದ್ದರೆ 10 ಜನರು ಹೊಸಬರು ಇರುವುದು ದ್ವಿತೀಯ ಸಾಲಿನ ಸಹಕಾರಿ ನಾಯಕತ್ವದ ಬೆಳವಣಿಗೆಗೆ ನಮ್ಮ ಹಿರಿಯರು ರಾಜ್ಯದ ಸೌಹಾರ್ದ ಸಹಕಾರಿಗಳು ಆಶಿರ್ವಾದ ಮಾಡಿರುವುದು ಸ್ವಾಗತಾರ್ಹ. ಸೌಹಾರ್ದ ಸಹಕಾರಿ ಕ್ಷೇತ್ರದ ಹಾಗೂ ಸಂಯುಕ್ತ ಸಹಕಾರಿಯ ಬೆಳವಣಿಗೆಗೆ ಹಿರಿಯ ಸಹಕಾರಿಗಳ ಹಾಗೂ ರಾಜ್ಯದ ಸೌಹಾರ್ದ ಸಹಕಾರಿಗಳ ಸಲಹೆ ಸಹಕಾರ ಹಾಗೂ ಮಾರ್ಗದರ್ಶನಗಳನ್ನು ಹೃದಯಪೂರ್ವಕವಾಗಿ ಸ್ವಾಗತಿಸುತ್ತೇನೆ. ಸಂಯುಕ್ತ ಸಹಕಾರಿಯ ಕಾರ್ಯಚಟುವಟಿಕೆಗಳಲ್ಲಿ ತಮ್ಮ ಸಂಪೂರ್ಣ ಸಹಕಾರವನ್ನು ಅಪೇಕ್ಷಿಸುತ್ತೇನೆ.

ಈ ಚುನಾವಣೆ ಪ್ರಕ್ರೀಯೆಯು ಶಾಂತಿಯುತವಾಗಿ ಹಾಗೂ ಪಾರದರ್ಶಕವಾಗಿ ನಡೆಯಲು ಸಹಕರಿಸಿದ ಎಲ್ಲರಿಗೂ ಮತ್ತೊಮ್ಮೆ ಕೃತಜ್ಞತೆಗಳು.

ಸಂಯುಕ್ತ ಸಹಕಾರಿಯ ಅಧ್ಯಕ್ಷ ಸ್ಥಾನವನ್ನು ಸಮರ್ಪಕವಾಗಿ ನಿರ್ವಹಿಸಲು ಆಡಳಿತ ಮಂಡಳಿಯ, ರಾಜ್ಯದ ಎಲ್ಲಾ ಸೌಹಾರ್ದ ಸಹಕಾರಿಗಳ ಹಾಗೂ ಸಿಬ್ಬಂದಿಯವರ ಸಂಪೂರ್ಣ ಸಹಕಾರವನ್ನು ಆಪೇಕ್ಷಿಸುತ್ತೇನೆ.

## ಸ್ವಾಭಿಮಾನಿ ಸಹಕಾರಿ ಸಂಪಾದಕ ಮಂಡಳಿ

ಶ್ರೀ ಜಿ. ನಂಜನಗೌಡ
ಗೌರವ ಅಧ್ಯಕ್ಷರು

ಶ್ರೀ ಎ.ಆರ್. ಪ್ರಸನ್ನಕುಮಾರ
ಗೌರವ ಸದಸ್ಯರು

ಶ್ರೀ ಶರಣಗೌಡ ಜಿ ಪಾಟೀಲ
ಸಂಪಾದಕರು

ಶ್ರೀ ವಿ.ಜೆ. ಕಾರಕೂನ
ಸಂಚಾಲಕರು

ಶ್ರೀ ರಘುನಂದನ ಕೆ.
ಸದಸ್ಯರು

ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ.,
"ಸೌಹಾರ್ದ ಸಹಕಾರಿ ಸೌಧ" ನಂ.68, ಒಂದನೇ ಮಹಡಿ, 17 & 18ನೇ ಅಡ್ಡರಸ್ತೆ ಮಧ್ಯೆ, ಮಾರ್ಗೋಸಾ ರಸ್ತೆ, ಮಲ್ಲೇಶ್ವರಂ, ಬೆಂಗಳೂರು – 560055
ದೂರವಾಣಿ/ ಫ್ಯಾಕ್ಸ್ :
080–23378375–80, 23474408,23573291
ಇ–ಮೇಲ್ : souharda@souharda.coop
swabhimani@souharda.coop
ವೆಬ್‌ಸೈಟ್ : www.souharda.coop

## ಒಳಪುಟಗಳಲ್ಲಿ. . .

ಅಧ್ಯಕ್ಷರ ನುಡಿ........................................ 2
ಸಂಪಾದಕೀಯ........................................ 3
ಜ್ಞಾನ ಜ್ಯೋತಿ........................................ 4
ಸಂಯುಕ್ತ ಸಹಕಾರಿಗಳ ಸಮಾಚಾರಗಳು .... ........................................ 05–19
ಸೌಹಾರ್ದ ಸಹಕಾರಿಗಳ ಸಮಾಚಾರಗಳು .... ........................................ 20–23
ಲೇಖನಗಳು :
ಸಹಕಾರ ಸಂಸ್ಥೆಗಳಲ್ಲಿ ಪ್ರಜಾಪ್ರಭುತ್ವ, ಪ್ರಾಮಾಣಿಕತೆ ಮತ್ತು ಪಾರದರ್ಶಕತೆ ........... 24
ದೃಷ್ಠಿ ಬದಲಾದರೆ ಭಾವನೆ ಬದಲಾಯಿತು..... 30
ಸಹಕಾರ ಸಂಸ್ಥೆಗಳ ಮಂಡಳಿ ರಚನೆ ನಿಬಂಧಕರ ಜವಾಬ್ದಾರಿ .................. 31–32

# ಸಂಪಾದಕೀಯ

## 75ನೇ ಸ್ವಾತಂತ್ರ್ಯ ದಿನದ ಅಮೃತಮಹೋತ್ಸವ : ಹರ್ ಘರ್ ತಿರಂಗಾ ಅಭಿಯಾನ
## ಪ್ರತಿಯೊಂದು ಮನೆ ಮೇಲೆ ಹಾರಾಡಲಿ ರಾಷ್ಟ್ರ ಧ್ವಜ : ಸಹಕಾರ ಸಂಸ್ಥೆಗಳು ಸಕ್ರೀಯವಾಗಿ ಪಾಲ್ಗೋಳಲಿ.

ರಾಷ್ಟ್ರದ 75ನೇ ಸ್ವಾತಂತ್ರ್ಯೋತ್ಸವ ಅಮೃತ ಮಹೋತ್ಸವದ ಅಂಗವಾಗಿ ಈ ದೇಶದ ಪ್ರತಿಯೊಬ್ಬ ನಾಗರಿಕರು ತಮ್ಮ ಮನೆಯ ಮೇಲೆ ಹಾಗೂ ಸಂಘ ಸಂಸ್ಥೆಗಳು ತಮ್ಮ ಸಂಸ್ಥೆಗಳ ಮೇಲೆ ರಾಷ್ಟ್ರಧ್ವಜವನ್ನು ಹಾರಾಡಿಸಬೇಕು. ಈ ಅಭಿಯಾನ ದಿನಾಂಕ 13.08.2022 ರಿಂದ ಪ್ರಾರಂಭವಾಗಿ 15.08.2022 ರ ವರೆಗೆ 3 ದಿನಗಳ ಕಾಲವೂ ರಾಷ್ಟ್ರಧ್ವಜ ಹಾರಾಡಬೇಕು. ತಾಯಿ ಭಾರತಾಂಬೆಗೆ ಎಲ್ಲರೂ ಶ್ರಧ್ಧಾ ಭಕ್ತಿಯಿಂದ ನಮನಗಳನ್ನು ಸಲ್ಲಿಸಬೇಕು. ಇದು ನಾವುಗಳು ತಾಯಿ ಭಾರತಾಂಬೆಗೆ ಸಲ್ಲಿಸುವ ಗೌರವ. ಕೇಂದ್ರದ ಈ ಕರೆ ಹಾಗೂ ಅಭಿಯಾನ ದೇಶದ ಎಲ್ಲ ನಾಗರಿಕರಲ್ಲೂ ದೇಶ ಭಕ್ತಿಯನ್ನು ಸಾರುವ ಕಾರ್ಯವಾಗಿದೆ. ಇದು ಸ್ವಾಗತಾರ್ಹ. ಈ ದೇಶಕ್ಕೆ ಸ್ವಾತಂತ್ರ್ಯವನ್ನು ಪಡೆಯಲು ಹೋರಾಡಿದ ಮತ್ತು ತನು ಮನ ಧನಗಳನ್ನು ಈ ದೇಶದ ಸ್ವಾತಂತ್ರಕ್ಕಾಗಿ ಅರ್ಪಿಸಿದ ಲಕ್ಷಾಂತರೆ ಸ್ವಾತಂತ್ರ ಸೇನಾನಿಗಳಿಗೆ ನಾವು ಸಲ್ಲಿಸುವ ಗೌರವ ಇದಾಗಿದೆ.

ಭಾರತಕ್ಕೆ ಸ್ವಾತಂತ್ರ್ಯ ಬಂದು 75 ವರ್ಷಗಳಲ್ಲಿ ನಮ್ಮ ದೇಶ ಅದ್ಭುತ ಪ್ರಗತಿಯನ್ನು ಸಾಧಿಸಿದೆ. ಆಹಾರ ಉತ್ಪಾದನೆಯಲ್ಲಿ ಸ್ವಾವಲಂಬನೆಯನ್ನು ಕಂಡುಕೊಂಡಿದೆ. ಹೈನುಗಾರಿಕೆಯಲ್ಲಿ ಉತ್ತಮ ಪ್ರಗತಿ ಸಾಧಿಸಿದೆ. ಶಿಕ್ಷಣ, ಆರೋಗ್ಯ, ನೀರಾವರಿ, ಕೈಗಾರಿಕೆ, ವಸತಿ, ಸಹಕಾರ, ವಿಜ್ಞಾನ, ವೈದ್ಯಕೀಯ ತಂತ್ರಜ್ಞಾನ ರಸ್ತೆಗಳ ಅಭಿವೃದ್ಧಿ, ಗ್ರಾಮೀಣ ಅಭಿವೃದ್ಧಿ ಹೀಗೆ ಎಲ್ಲಾ ಕ್ಷೇತ್ರಗಳಲ್ಲೂ ಉತ್ತಮ ಪ್ರಗತಿಯನ್ನು ಸಾಧಿಸಿ ಅಭಿವೃದ್ಧಿ ಹೊಂದುತ್ತಿರುವ ದೇಶಗಳ ಸಾಲಿನಲ್ಲಿ ಮುಂಚೂಣಿಯಲ್ಲಿದೆ. ಇದಕ್ಕೆಲ್ಲ ಕಾರಣ ನಮ್ಮ ಪೂರ್ವಜರು ನಮಗೆ 1947 ರಲ್ಲಿ ತಂದು ಕೊಟ್ಟ ಸ್ವಾತಂತ್ರವೆಂಬುದನ್ನು ನೆನೆಯುತ್ತ ಅವರಿಗೆ ಭಕ್ತಿಪೂರ್ವಕ ನಮನಗಳನ್ನು ಸಲ್ಲಿಸಿ ನಮ್ಮ ಸ್ವಾತಂತ್ರವನ್ನು ಆನಂಧಿಸುವುದು ಸಂಭ್ರಮಿಸುವುದು ಈ ಅಭಿಯಾನದ ಧ್ಯೇಯವಾಗಿದೆ. ಇದರ ಜೊತೆಗೆ ನಮ್ಮ ಮುಂದಿನ ಪೀಳೀಗೆಗೆ ಒಂದು ಉತ್ತಮ ಸಂದೇಶವನ್ನು ಮಾರ್ಗದರ್ಶನ ಮಾಡುವ ಅಭಿಯಾನ ಇದಾಗಿದೆ ಆದ್ದರಿಂದ ಎಲ್ಲ ನಾಗರಿಕರು ಇದನ್ನು ಅತ್ಯಂತ ಹೆಚ್ಚಿನ ಆಸಕ್ತಿ ಹಾಗೂ ಭಕ್ತಿಯಿಂದ ಆಚರಿಸಬೇಕು.

ಈ ನಿಟ್ಟಿನಲ್ಲಿ ರಾಷ್ಟ್ರೀಯ ಸಹಕಾರಿ ಯೂನಿಯನ್ ನವದೆಹಲಿ, ಕರ್ನಾಟಕ ಸರಕಾರ, ಸಹಕಾರ ಇಲಾಖೆ ರಾಜ್ಯದ ಎಲ್ಲ ಸಹಕಾರಿ ಸಂಸ್ಥೆಗಳಿಗೆ ಮನವಿ ಮಾಡಿದೆ. ಕರ್ನಾಟಕ ರಾಜ್ಯದ ಸೌಹಾರ್ದ ಸಂಯುಕ್ತ ಸಹಕಾರಿಯ ಆಡಳಿತ ಮಂಡಳಿಯು ಎಲ್ಲ ಸೌಹಾರ್ದ ಸಹಕಾರಿಗಳಿಗೆ ಈ ಮೂಲಕ ಮನವಿ ಮಾಡುತ್ತದೆ. ತಮ್ಮ ಎಲ್ಲ ಸಹಕಾರಿ ಸಂಸ್ಥೆಗಳ ಮೇಲೆ 3 ದಿನಗಳು ತಪ್ಪದೆ ತ್ರಿವರ್ಣದ ರಾಷ್ಟ್ರ ಧ್ವಜಾರೋಹಣವನ್ನು ಮಾಡುವುದರ ಮೂಲಕ ಪ್ರತಿಯೊಂದು ಸಹಕಾರಿ ಸಂಸ್ಥೆಯು ಈ ಅಭಿಯಾನದಲ್ಲಿ ಸಕ್ರೀಯವಾಗಿ ಪಾಲ್ಗೋಳ್ಳಬೇಕು. ತಮ್ಮ ಸಹಕಾರಿಯ ಎಲ್ಲ ನಿರ್ದೇಶಕರುಗಳ ಮನೆ ಮೇಲೆ ಎಲ್ಲ ಸದಸ್ಯರ ಮನೆಗಳ ಮೇಲೂ ಈ ರಾಷ್ಟ್ರಧ್ವಜ ಹಾರಿಸಬೇಕೆಂಬುದರ ತಿಳುವಳಿಕೆಯನ್ನು ಮಾಹಿತಿಯನ್ನು ಅಗತ್ಯವಾದರೆ ನೆರವನ್ನು ನೀಡುವ ವ್ಯವಸ್ಥೆಗಳನ್ನು ಸಹಕಾರಿಗಳು ಮಾಡಬೇಕು.

ರಾಷ್ಟ್ರೀಯತೆಯನ್ನು ಹಾಗೂ ರಾಷ್ಟ್ರಧ್ವಜವನ್ನು ಗೌರವಿಸುವ ಅಭಿಯಾನದಲ್ಲಿ ಸಹಕಾರಿ ಸಂಸ್ಥೆಗಳು ಮುಂಚೂಣಿಯಲ್ಲಿರಬೇಕು ಎಂಬುದು ಸಂಯುಕ್ತ ಸಹಕಾರಿಯ ಅಪೇಕ್ಷೆ.

# ಜ್ಞಾನ ಜ್ಯೋತಿ



– ಮಾಧುರಿ ದೇಶಪಾಂಡೆ, ಬೆಂಗಳೂರು

## "ಸಹಕಾರ ತತ್ವದ ಮೂಲವೂ ಕೂಡ ಭಗವದ್ಗೀತೆಯೇ"

ಇಂದಿನ ಯುಗದಲ್ಲಿ ಭಗವದ್ಗೀತೆ ಬಹು ಪ್ರಸ್ತುತವಾಗಿದೆ. ಯಾವುದೇ ಒಂದು ಕ್ಷೇತ್ರದಲ್ಲಿ ಅಥವಾ ಸಂಸ್ಥೆಯಲ್ಲಿ ಅಲ್ಲದೇ ಪ್ರತಿ ಕ್ಷೇತ್ರದಲ್ಲಿ ಅದರ ಮಹತ್ವ ದಿನೇ ದಿನೇ ಹೆಚ್ಚುತ್ತಿದೆ. ನಮ್ಮ ಮಾನ್ಯ ಪ್ರಧಾನ ಮಂತ್ರಿಗಳು ದೇಶಕ್ಕೆ ಬರುವ ವಿಶೇಷ ಅತಿಥಿಗಳಿಗೆ ಮತ್ತು ಗಣ್ಯರಿಗೆ ಭಗವದ್ಗೀತೆಯನ್ನು ಉಡುಗೊರೆಯಾಗಿ ಕೊಡುತ್ತಾರೆ. ಅನೇಕ ವಿದೇಶಿಯರು ಭಗವದ್ಗೀತೆಯಿಂದ ಪ್ರೇರಣೆಯನ್ನು ಪಡೆಯುತ್ತಿದ್ದಾರೆ. ಏಕೆಂದರೆ ಜೀವನದ ಸ್ರ್ವಾಂಗೀಣ ಏಳಿಗೆಗೆ ಮಾರ್ಗದರ್ಶನ ನೀಡ ಬಹುದಾದ ಗ್ರಂಥವಾಗಿದೆ. ಭಗದ್ಗೀತೆಯು ವಿಶ್ವ ವಿದ್ಯಾಲಯವಿದ್ದಂತೆ, ನಮ್ಮ ದಿನ ನಿತ್ಯದ ಜೀವನದಲ್ಲಿ ಪ್ರತಿಯೊಂದು ಕಾರ್ಯಗಳಲ್ಲಿ ನಮಗೆ ಪ್ರೇರಕವಾದುದು ಭಗವದ್ಗೀತೆ. ಜೀವನದ ಮೌಲ್ಯಗಳು, ಸಂದಿಗ್ಧಗಳು, ಸಮಸ್ಯೆಗಳು ಎಲ್ಲ ಪರಿಸ್ಥಿತಿಗೂ ಭಗವದ್ಗೀತೆಯಲ್ಲಿ ಉತ್ತರವಿದೆ.

ಸಹಕಾರ ತತ್ವದ ಮೂಲವೂ ಕೂಡ ಭಗವದ್ಗೀತೆಯೇ ಭಗವದ್ಗೀತೆಯ 3ನೇ ಅಧ್ಯಾಯ ಕರ್ಮ ಯೋಗದಲ್ಲಿ ಒಂದು ಶ್ಲೋಕ ಬರುತ್ತದೆ.

"ದೇವಾನ್ ಭಾವಯತಾನೇನ ತೇ ದೇವಾ ಭಾವಯಂತು ವಃ।
ಪರಸ್ಪರಂ ಭಾವಯಂತಃ ಶ್ರೇಯಃ ಪರಮವಾಪ್ಸ್ಯಥ॥

"ಇಲ್ಲಿ ದೇವತೆಗಳನ್ನು ನೀವು ಸಂತೋಷ ಪಡಿಸಿರಿ ಆ ದೇವತೆಗಳು ನಿಮ್ಮನ್ನು ಸಂತೋಷ ಪಡಿಸಲಿ ಒಬ್ಬರನ್ನೊಬ್ಬರು ಸಂತೋಷ ಪಡಿಸಿ ಇಬ್ಬರೂ ಹೆಚ್ಚಿನ ಶ್ರೇಯಸ್ಸು ಪಡೆಯಿರಿ ಎಂದು ಶ್ರೀ ಕೃಷ್ಣ ಪರಮಾತ್ಮನು ಹೇಳುತ್ತಾನೆ."

ಸಹಕಾರ ಎಂದರೆ ಒಬ್ಬರಿಗೊಬ್ಬರು ನೆರವಾಗುವುದು ಎಂಬುದೇ ಅರ್ಥವಾಗಿದೆ. ದೇವತೆಗಳ ಪ್ರೀತಿಗಾಗಿ ಯಜ್ಞ ಯಾಗಾದಿಗಳನ್ನು ಮಾಡುವುದು ಅದರಿಂದ ಮಳೆ ಬೆಳೆ ಕಾಣುವುದು ಅಂದಿನ ಸಹಕಾರ ತತ್ವವಾಗಿದ್ದರೆ. ಇಂದು ಸಹಕಾರ ತತ್ವದಲ್ಲಿ ಅವಶ್ಯಕತೆ ಇರುವ ಧನ ಸಹಾಯ ಮಾಡುವುದು ಅದರಿಂದ ಸಂಘ ಅಥವಾ ಸಂಸ್ಥೆಗೆ ಲಾಭವು ಏಳಿಗೆಯೂ ಆಗುತ್ತದೆ. ಇಂದು ಸಹಕಾರಿ ಸಂಸ್ಥೆಗಳಲ್ಲಿ "ಪರಸ್ಪರಂ ಭಾವಯಂತಃ" ಸರಿಯಾಗಿ ಹೊಂದುತ್ತದೆ.

ಸಹಕಾರಿ ತತ್ವ ನಮ್ಮ ದೇಶದಲ್ಲಿ ಎಂದಿನಿಂದಲೂ ಇದೆ. ಆದರೆ ಒಂದು ಸಂಸ್ಥೆಯ ರೂಪವನ್ನು ವಿದೇಶಿಯರಿಂದ ಪಡೆದು ಇಂದು ಅಸಂಖ್ಯಾತ ಸಹಕಾರ ಸಂಸ್ಥೆಗಳು ಸಂಘಗಳು ದೇಶದಲ್ಲಿ ಹುಟ್ಟಿ ಜನರ ಸಹಾಯಕ್ಕೆ ಸೇವೆಗೆ ಮುಂದೆ ಬಂದು ನಿಂತಿವೆ.


ಹೇಗೆ ಭಗವದ್ಗೀತೆಯ ಉಪದೇಶವನ್ನು ಕೃಷ್ಣ ಪರಮಾತ್ಮನು ಅರ್ಜುನನಿಗೆ ಯುದ್ಧ ಭೂಮಿಯಲ್ಲಿ ಮಾಡಿದನು ಅದೇ ರೀತಿ ಆರ್ಥಿಕ ಸಮಸ್ಯೆಗಳು ಸಂಕಷ್ಟಗಳು ಉಂಟಾದಾಗ ರೈತರಿಗೆ ಗ್ರಾಮೀಣ ಪ್ರದೇಶದ ಜನರಿಗೆ ಮತ್ತು ನಿರುದ್ಯೋಗಿಗಳಿಗೆ ಸಹಕಾರ ಸಂಸ್ಥೆಗಳು ತಮ್ಮ ಯೋಜನೆಗಳ ಮೂಲಕ ಪರಿಹಾರವನ್ನು ನೀಡುತ್ತಲಿವೆ. ರೈತರಿಗೆ ಬೆಳೆಗಳಿಗೆ ಸಾಲ ವಿಮೆ ಮೊದಲಾದ ಸೌಲಭ್ಯ ನೀಡಿದರೆ ಹೊಸದಾಗಿ ಉದ್ಯಮ ಆರಂಭಿಸುವವರಿಗೂ ಕೂಡ ನೆರವು ನೀಡುತ್ತವೆ. ಅರ್ಜುನನ ಮನದಲ್ಲಿ ಬಂದ ಗೊಂದಲವು ಪರಮಾತ್ಮನ ಗೀತೆಯಿಂದ ಪರಿಹಾರವಾದಂತೆ ಆರ್ಥಿಕ ಸಮಸ್ಯೆ ಅಥವಾ ಸವಾಲುಗಳನ್ನು ಎದುರಿಸುತ್ತಿರುವವರು, ಉಳಿತಾಯಕ್ಕೆ ಶ್ರಮಿಸುತ್ತಿರುವವರು, ಉದ್ಯೋಗ ಸ್ವಯಂ ಉದ್ಯೋಗ ಅರಸುತ್ತಿರುವವರು ಎಲ್ಲರಿಗೂ ಸಹಕಾರ ಸಂಸ್ಥೆಗಳು ಸಂಘಗಳ ಮೂಲಕ ಸರಕಾರವು ಸಹಾಯವನ್ನು ಮಾಡುತ್ತಿದೆ. ಅಂತಹ ಸಹಾಯವನ್ನು ಪಡೆದು ಮುನ್ನಡೆಯಬೇಕು.

## ಸೌಹಾರ್ದ ಸಹಕಾರಿಗಳ ನ್ಯಾಯಾಲಯದ ಸಮಾಚಾರಗಳು

**ದಾವಾ ದಾಖಲಾತಿಗಳು :** ಒಟ್ಟು ದಾಖಲಾದ ದಾವಾ ಪ್ರಕರಣಗಳ ಒಟ್ಟು 22,801 ಆಗಿರುತ್ತದೆ. ಇವುಗಳ ಪೈಕಿ 13,234 ಪ್ರಕರಣಗಳು ಇತ್ಯರ್ಥಗೊಂಡಿವೆ. ವಿಚಾರಣಾ ಹಂತದಲ್ಲಿರುವ ಪ್ರಕರಣಗಳು ಒಟ್ಟು 9,567

**ಜುಲೈ ತಿಂಗಳ ಪ್ರಕರಣಗಳು :** ದಾವಾಪ್ರಕರಣ 684 ಒಟ್ಟು ಇತ್ಯರ್ಥಗೊಂಡ ಪ್ರಕರಣಗಳು 314.

**ಅಮಲ್ಜಾರಿ ಪ್ರಕರಣಗಳು :** ಒಟ್ಟು 5,055 ಅಮಲ್ಜಾರಿ ಪ್ರಕರಣಗಳು ದಾಖಲಾಗಿದ್ದು, ಇವುಗಳ ಪೈಕಿ 748 ಪ್ರಕರಣಗಳು ಇತ್ಯರ್ಥಗೊಂಡಿದ್ದು, 4329 ಪ್ರಕರಣಗಳು ಪ್ರಗತಿಯಲ್ಲಿರುತ್ತದೆ. ಸಹಕಾರಿಗಳ ನಿಬಂಧಕರುಗಳ ಕಛೇರಿಗಳಲ್ಲಿ ದಾಖಲಾಗಿದ್ದ 1023 ಅಮಲ್ಜಾರಿ ಪ್ರಕರಣಗಳು ಸೌಹಾರ್ದ ಸಹಕಾರಿಗಳ ನ್ಯಾಯಾಲಯಕ್ಕೆ ವರ್ಗಾವಣೆಯಾಗಿದ್ದು ಇವುಗಳ ಪೈಕಿ 581 ಪ್ರಕರಣಗಳು ಇತ್ಯರ್ಥಗೊಂಡಿದ್ದು 442 ಪ್ರಕರಣಗಳು ಪ್ರಗತಿಯಲ್ಲಿರುತ್ತದೆ. ಜುಲೈ ತಿಂಗಳಿನಲ್ಲಿ 143 ಅಮಲ್ಜಾರಿ ಪ್ರಕರಣ ದಾಖಲಾಗಿರುತ್ತವೆ.



# ಸಹಕಾರ ಸಚಿವ ಶ್ರೀ ಎಸ್.ಟಿ ಸೋಮಶೇಖರ ರವರಿಂದ ಅಭಿನಂದನೆ

## ಸಂಯುಕ್ತ ಸಹಕಾರಿಯ ಚುನಾಯಿತ ನೂತನ ಆಡಳಿತ ಮಂಡಳಿಗೆ ಸಹಕಾರ ಸಚಿವ ಶ್ರೀ ಎಸ್.ಟಿ ಸೋಮಶೇಖರ ಅಭಿನಂದನೆ

### ಕರ್ತವ್ಯ ಹಾಗೂ ಜವಾಬ್ದಾರಿಗಳನ್ನು ಅರ್ಥಪೂರ್ಣವಾಗಿ ನಿರ್ವಹಿಸಲು ಕರೆ

ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯ ಆಡಳಿತ ಮಂಡಳಿ ಸದಸ್ಯರ ಚುನಾವಣೆ ದಿನಾಂಕ 24.07.2022 ರಂದು ನಡೆದು ಸಹಕಾರ ಭಾರತೀಯ ನೇತೃತ್ವದ 20 ಅಭ್ಯರ್ಥಿಗಳು ಹಾಗೂ ಒಬ್ಬ ಸ್ವತಂತ್ರ ಅಭ್ಯರ್ಥಿಯು ಆಯ್ಕೆಯಾಗಿರುವುದಕ್ಕೆ ಸಹಕಾರ ಸಚಿವ ಶ್ರೀ ಎಸ್.ಟಿ ಸೋಮಶೇಖರ ಎಲ್ಲರನ್ನೂ ಅಭಿನಂದಿಸಿದ್ದಾರೆ. ಸೌಹಾರ್ದ ಸಹಕಾರಿ ಕ್ಷೇತ್ರ ಉತ್ತಮವಾಗಿ ಬೆಳೆದಿದೆ. ಇದನ್ನು ಉತ್ತಮವಾಗಿ ಕಾರ್ಯನಿರ್ವಹಿಸುವಂತೆ ವಿಶೇಷವಾಗಿ ಯಾವುದೇ ಠೇವಣಿದಾರರಿಗೆ ಅವರ ಹಣ ಹಿಂದಿರುಗಿಸುವಲ್ಲಿ ತೊಂದರೆಗಳು ಇರದಿರುವಂತೆ ಸಂಯುಕ್ತ ಸಹಕಾರಿಯ ಆಡಳಿತ ಮಂಡಳಿಯವರು ಎಚ್ಚರಿಕೆಯಿಂದ ಕಾರ್ಯನಿರ್ವಹಿಸುವುದು ಅಗತ್ಯ. ಶೇಕಡಾ.99% ಸಹಕಾರಿ ಸಂಸ್ಥೆಗಳು ಉತ್ತಮವಾಗಿ ಕೆಲಸ ನಿರ್ವಹಿಸುವಾಗ ಕೇವಲ 1% ಸಂಸ್ಥೆಗಳು ಉತ್ತಮವಾಗಿ ಕಾರ್ಯನಿರ್ವಹಿಸದೆ ಠೇವಣಿದಾರರಿಗೆ ಹಾಗೂ ಸದಸ್ಯರಿಗೆ ಅನಾನುಕೂಲ ಮಾಡುತ್ತಿರುವ ಬಗ್ಗೆ ಹೆಚ್ಚು ಗಮನ ಹರಿಸಬೇಕೆಂದು ಕರೆ ನೀಡಿದರು.



## ಸಹಕಾರಿಗಳ ನಿಬಂಧಕರಾಗಿ ಕ್ಯಾಪ್ಟನ್ ಡಾ॥ ರಾಜೇಂದ್ರ.ಕೆ, ಭಾಆಸೇ ಅಧಿಕಾರ ಸ್ವೀಕಾರ

**ಬೆಂಗಳೂರು :** ಸಹಕಾರಿ ಇಲಾಖೆಯ ಸಹಕಾರಿಗಳ ನಿಬಂಧಕರಾಗಿ ಕ್ಯಾಪ್ಟನ್ ಡಾ.ರಾಜೇಂದ್ರ ಕೆ. ಭಾಆಸೇ ಇವರನ್ನು ಸರ್ಕಾರ ನೇಮಕ ಮಾಡಿದೆ.

## ಸಂಯುಕ್ತ ಸಹಕಾರಿಯ ಮುಂಬರುವ ತರಬೇತಿ ಕಾರ್ಯಕ್ರಮಗಳು

1. ಆಗಸ್ಟ್ ತಿಂಗಳ ಮೂರನೇ ವಾರದಲ್ಲಿ ರಾಜ್ಯದ ಸೌಹಾರ್ದ ಸಹಕಾರಿಗಳಿಗೆ 7 ದಿನಗಳ ಬೇಸಿಕ್ ಬ್ಯಾಂಕಿಂಗ್ ಸರ್ಟಿಫಿಕೇಟ್ ಕೋರ್ಸ್ ಕಾರ್ಯಕ್ರಮವನ್ನು ಆಯೋಜಿಸಲಾಗಿದೆ ಹಾಗೂ ನಾಲನೇ ವಾರದಲ್ಲಿ ವಿಷಯಾಧಾರಿತ ತರಬೇತಿ ಕಾರ್ಯಕ್ರಮವನ್ನು ಆಯೋಜಿಸಲಾಗಿದೆ.
2. ಸೆಪ್ಟೆಂಬರ್ ತಿಂಗಳಿನಲ್ಲಿ ಸಂಯುಕ್ತ ಸಹಕಾರಿಯ ನಿರ್ದೇಶಕರುಗಳಿಗೆ ತರಬೇತಿ ಕಾರ್ಯಕ್ರಮವನ್ನು ಆಯೋಜಿಸಲಾಗಿದೆ.

## "ಲೆಕ್ಕಪರಿಶೋಧನರ ವರದಿ ಸಿದ್ಧತೆ & ದಾಖಲೆಗಳ ಸಂಗ್ರಹ ಹಾಗೂ ಸಿಬ್ಬಂದಿಗಳ ಸಂವಹನ ಕಲೆ ಕುರಿತು ತರಬೇತಿ ಕಾರ್ಯಕ್ರಮ"

**ಚಾಮರಾಜನಗರ :** ದಿನಾಂಕ 09.07.2022 ರಂದು ಚಾಮರಾಜನಗರ ಜಿಲ್ಲಾ ಸೌಹಾರ್ದ ಸಹಕಾರಿಗಳಿಗೆ "ಲೆಕ್ಕಪರಿಶೋಧನರ ವರದಿ ಸಿದ್ಧತೆ & ದಾಖಲೆಗಳ ಸಂಗ್ರಹ ಹಾಗೂ ಸಿಬ್ಬಂದಿಗಳ ಸಂವಹನ ಕಲೆ" ವಿಷಯಗಳ ಕುರಿತು ತರಬೇತಿಯನ್ನು ಶ್ರೀ ಸ್ನೇಹಜ್ಯೋತಿ ಮಹಿಳಾ ಸೌಹಾರ್ದ ಸಹಕಾರಿ ನಿ., # 742/711, 2ನೇ ಮಹಡಿ, ಭ್ರಮರಾಂಭ ಬಡಾವಣೆ, 4ನೇ ಕ್ರಾಸ್ ಗಣಪತಿ ದೇವಸ್ಥಾನದ ಹತ್ತಿರ, ಚಾಮರಾಜನಗರ ಇಲ್ಲಿ ಆಯೋಜಿಸಲಾಗಿತ್ತು. ತರಬೇತಿ ಉದ್ಘಾಟನೆಯನ್ನು ಸಂಪನ್ಮೂಲ ವ್ಯಕ್ತಿಗಳಾದ ಶ್ರೀ ಶೈಲೇಂದ್ರರವರು, ಹಿರಿಯ ನಿರೀಕ್ಷಕರು, ಸಹಕಾರಿಗಳ ಲೆಕ್ಕಪರಿಶೋಧನೆ ಇಲಾಖೆ, ಚಾಮರಾಜನಗರ ಇವರು ಮಾಡಿದರು. ಈ ಸಂಧರ್ಭದಲ್ಲಿ ವೇದಿಕೆ ಮೇಲೆ ಶ್ರೀ ಎಂ. ಚಂದ್ರಶೇಖರಯ್ಯ, ಜಿಲ್ಲಾ ಸಂಯೋಜಕರು ಉಪಸ್ಥಿತರಿದ್ದರು. ಮದ್ಯಾಹ್ನದ ಅವಧಿಯನ್ನು ಶ್ರೀ ಶ್ರೀನಿವಾಸ್ ಕುಮಾರ್, ಪ್ರಾಂಶುಪಾಲರು (ನಿ) ಇವರು ನಡೆಸಿಕೊಟ್ಟರು.

ಸದರಿ ತರಬೇತಿಯಲ್ಲಿ 19 ಸಹಕಾರಿ & 02 ಉದ್ದೇಶಿತ ಸಹಕಾ–ರಿಗಳಿಂದ 27 ಪ್ರತಿನಿಧಿಗಳು ಸೇರಿ ಒಟ್ಟು 30 ಜನರು ಹಾಜರಿದ್ದರು.

# ಸಂಯುಕ್ತ ಸಹಕಾರಿಯ 2022 ರಿಂದ 2027 ಸಾಲಿನ ಅವಧಿಗೆ ನಡೆದ ಚುನಾವಣೆಯಲ್ಲಿ ಆಯ್ಕೆಯಾದ ಆಡಳಿತ ಮಂಡಳಿ ನಿರ್ದೇಶಕರು

## ಬೆಂಗಳೂರು ವಿಭಾಗ


ಶ್ರೀ ಬಿ ಹೆಚ್ ಕೃಷ್ಣಾರೆಡ್ಡಿ
ಕೋಲಾರ
ಮೊ : 9972089407


ಶ್ರೀ ಬಿ.ಸ್ ಗುಂಡುರಾವ್
ಬೆಂಗಳೂರು ನಗರ
ಮೊ : 9448491893


ಶ್ರೀ ಎ.ಆರ್ ಪ್ರಸನ್ನಕುಮಾರ್
ಶಿವಮೊಗ್ಗ
ಮೊ : 9482354391


ಶ್ರೀ ರಘುರಾಮ ರೆಡ್ಡಿ
ಚಿತ್ರದುರ್ಗ
ಮೊ : 9448491666


ಶ್ರೀ ಎ.ಆರ್ ಪ್ರಭುದೇವ್
ದಾವಣಗೆರೆ
ಮೊ : 9845261812


ಶ್ರೀ ವಿಜಯ್ ಸಿ.ಪಿ
ತುಮಕೂರು
ಮೊ : 9886365621

## ಮೈಸೂರು ವಿಭಾಗ


ಶ್ರೀ ಮಂಜುನಾಥ
ಉಡುಪಿ
ಮೊ : 9448348203


ಶ್ರೀಮತಿ ಭಾರತಿ ಜಿ ಭಟ್
ಮಂಗಳೂರು
ಮೊ : 9980830668

## ಬೆಳಗಾವಿ ವಿಭಾಗ


ಶ್ರೀ ಜಗದೀಶ ಮಲ್ಲಿಕಾರ್ಜುನ ಕವಟಗಿಮಠ
ಬೆಳಗಾವಿ
ಮೊ : 9448084177


ಶ್ರೀ ಗುರನಗೌಡ ನಿಂಗನಗೌಡ ಪಾಟೀಲ
ಬಾಗಲಕೋಟ
ಮೊ : 9448117966


ಶ್ರೀ ನಾಗರಾಜ ರಂಗಪ್ಪಯ್ಯ ದೇಶಪಾಂಡೆ
ಗದಗ
ಮೊ : 9481276666


ಶ್ರೀ ಮೋಹನದಾಸ ಜೆ ನಾಯಕ್
ಉತ್ತರ ಕನ್ನಡ
ಮೊ : 9611757789,


ಶ್ರೀ ಮಲ್ಲಿಕಾರ್ಜುನ ಅಜ್ಜಪ್ಪ ಹೊರಕೇರಿ
ಧಾರವಾಡ
ಮೊ : 9448326550


ಶ್ರೀ ಕೆ. ಶಿವಲಿಂಗಪ್ಪ
ಹಾವೇರಿ
ಮೊ : 9448112714


ಶ್ರೀ ರಾಮನಗೌಡ ಬ. ಪಾಟೀಲ
ವಿಜಯಪುರ
ಮೊ : 7760010546

## ಕಲಬುರಗಿ ವಿಭಾಗ


ಶ್ರೀ ಗುರುನಾಥ ಜ್ಯಾಂತಿಕರ
ಬೀದರ
ಮೊ : 9972322701


ಶ್ರೀ ಜಿ. ನಂಜನಗೌಡ
ವಿಜಯನಗರ
ಮೊ : 8095419712



ಶ್ರೀ ತಿಮ್ಮಯ್ಯ ಶೆಟ್ಟಿ
ರಾಯಚೂರು
ಮೊ : 9448489794


ಶ್ರೀ ಜಿ. ಶ್ರೀಧರ
ಕೊಪ್ಪಳ
ಮೊ : 9845256657


ಶ್ರೀ ಹೆಚ್.ಜೆ ಹನುಮಂತಯ್ಯ
ಬಳ್ಳಾರಿ
ಮೊ : 9448121023


ಶ್ರೀಮತಿ ಶೈಲಜಾ ತಪಲಿ
ಕಲಬುರಗಿ
ಮೊ : 94810 00400


## ದಿನಾಂಕ 04.08.2022 ರಂದು ನಡೆದ ಪ್ರಥಮ ಆಡಳಿತ ಮಂಡಳಿ ಸಭೆಯಲ್ಲಿ



# ಸಂಯುಕ್ತ ಸಹಕಾರಿಯ
# ನೂತನ ಅಧ್ಯಕ್ಷರಾಗಿ
# ಶ್ರೀ ಜಿ. ನಂಜನಗೌಡ ಹಾಗೂ
# ಉಪಾಧ್ಯಕ್ಷರಾಗಿ
# ಶ್ರೀ ಎ.ಆರ್ ಪ್ರಸನ್ನಕುಮಾರ
# ಅವಿರೋಧ ಆಯ್ಕೆ



## ನೂತನ ಅಧ್ಯಕ್ಷರಾದ ಶ್ರೀ ಜಿ. ನಂಜನಗೌಡ ಇವರ ವ್ಯಕ್ತಿ ಪರಿಚಯ



### ಶ್ರೀ ಜಿ. ನಂಜನಗೌಡ

ವೃತ್ತಿಯಲ್ಲಿ ಸನ್ನದು ಲೆಕ್ಕಪರಿಶೋಧಕರು (ಚಾರ್ಟೆರ್ಡ್ ಅಕೌಂಟೆಂಟ್), ಪ್ರವೃತ್ತಿಯಲ್ಲಿ ಸಹಕಾರಿಗಳು ಹಾಗೂ ಕೃಷಿಕರು. ಸಮಾಜದ ಹಿಂದುಳಿದ ವರ್ಗದ ಹಾಗೂ ದೀನದಲಿತರ ಬಗ್ಗೆ ಅಪಾರ ಕಾಳಜಿ ಇರುವ ಶ್ರೀಯುತರು ಸಹಕಾರ ಕ್ಷೇತ್ರ ಸಾಮಾನ್ಯ ಜನರನ್ನು ತಲುಪುವ ಏಕೈಕ ಮಾರ್ಗ, ಯಾವುದು ಬೇದಭಾವ ಹಾಗೂ ತಾರತಮ್ಯವಿಲ್ಲದೇ ಸಮಾಜದ ಕನಿಷ್ಠ ವರ್ಗದ ಜನರಿಗೆ ಸೇವೆ ಮಾಡಲು ಅವಕಾಶವಿರುವ ಕ್ಷೇತ್ರ ಇದಾಗಿದೆ. ದಾವಣಗೆರೆ ಜಿಲ್ಲೆಯ ಹರಪನಹಳ್ಳಿ ತಾಲ್ಲೂಕಿನ ಶೀರನಹಳ್ಳಿಯಲ್ಲಿ ದಿನಾಂಕ 01–06–1960ರಲ್ಲಿ ಜನಿಸಿದ ಶ್ರೀ ಜಿ.ನಂಜನಗೌಡ ಅವರು ಶೀರನಹಳ್ಳಿಯಲ್ಲಿ ಪ್ರಾಥಮಿಕ ಶಿಕ್ಷಣ, ನಾಗರತಟ್ಟೆಯಲ್ಲಿ ಪ್ರೌಢ ಶಿಕ್ಷಣ, ಸಿರಿಗೆರೆಯ ಕಾಲೇಜು ಶಿಕ್ಷಣ ಮುಗಿಸಿದರು.

ಶಿವಮೊಗ್ಗದ ಜಿ.ಕೆ. ಶೆಟ್ಟರ್ & ಸಿ.ಎ. ಇವರಲ್ಲಿ 1990ರಲ್ಲಿ ಸಿ.ಎ. ಆಗಿ ಪದವಿಯನ್ನು ಪೂರೈಸಿದ್ದಾರೆ. ಹರಪ್ಪನಹಳ್ಳಿಯಲ್ಲಿಯೇ ತಮ್ಮ ವೃತ್ತಿಯನ್ನು ಪ್ರಾರಂಭಿಸಿದರು. ಸನ್ನದು ಲೆಕ್ಕಪರಿಶೋಧಕರ ವೃತ್ತಿಯ ಜೊತೆಗೆ ಜನಸಾಮಾನ್ಯರಿಗೆ ಸಹಾಯವಾಗುವಂತಹ ಕಾರ್ಯಕ್ಷೇತ್ರವನ್ನು ಅರಸುತ್ತಾ ಸಹಕಾರ ಕ್ಷೇತ್ರದ ಬಗ್ಗೆ ಅಭಿಮಾನ ಮೂಡಿ ಸಹಕಾರ ತತ್ವಗಳ ಮೂಲಕ ಈ ಕಾರ್ಯ ಸಾಧ್ಯ ಎಂದು ಮನಗಂಡು 1997ರಲ್ಲಿ ಹರಪನಹಳ್ಳಿಯಲ್ಲಿ ಆದರ್ಶ ಪಟ್ಟಣ ಸಹಕಾರ ಬ್ಯಾಂಕ್ ಸ್ಥಾಪಿಸಿ ಸಂಸ್ಥಾಪಕ ಅಧ್ಯಕ್ಷರಾದರು.

ಸೌಹಾರ್ದ ಸಹಕಾರಿ ಕಾಯ್ದೆ ಜಾರಿಗೆ ಬಂದ ನಂತರ ಹೊಸ ಕಾಯ್ದೆಗೆ ಬ್ಯಾಂಕ್‌ನ್ನು ಪರಿವರ್ತನೆಗೊಳಿಸಿದೆ. ಉತ್ತಮವಾಗಿ ಕಾರ್ಯ ನಿರ್ವಹಿಸುತ್ತಿದ್ದಾರೆ. ಸಹಕಾರ ಕ್ಷೇತ್ರದ ಹಾಗೂ ಬೇರೆ ಕ್ಷೇತ್ರದಲ್ಲಿ ಕಾರ್ಯನಿರ್ವಹಿಸುತ್ತಿರುವ ಶ್ರೀಯುತರು ಹರಪ್ಪನಹಳ್ಳಿ ರೋಟರಿ ಕ್ಲಬ್‌ನ ಅಧ್ಯಕ್ಷರಾಗಿ, ಬಿಜೆಪಿ ಯುವಮೋರ್ಚಾ ಅಧ್ಯಕ್ಷರಾಗಿ, ದಾವಣಗೆರೆಯಲ್ಲಿ ಬಿಜೆಪಿ ಪಕ್ಷದ ಉಪಾಧ್ಯಕ್ಷರಾಗಿ, ರಾಜ್ಯ ಪರಿಷತ್ ಸದಸ್ಯರಾಗಿ ಹಾಗೂ ರಾಜ್ಯ ಬಿಜೆಪಿ ಕಾರ್ಯಕಾರಿಣಿ ಸದಸ್ಯರಾಗಿ ಮತ್ತು ಹರಪನಹಳ್ಳಿ ತಾಲ್ಲೂಕು ಬಿಜೆಪಿ ಅಧ್ಯಕ್ಷರಾಗಿ 3 ಅವಧಿಗೆ ಕಾರ್ಯ ನಿರ್ವಹಿಸಿದ್ದಾರೆ. ಸಹಕಾರ ಪ್ರಕೋಷ್ಠ ರಾಜ್ಯ ಸಹಸಂಚಾಲಕರಾಗಿ ಕಾರ್ಯ ನಿರ್ವಹಿಸುತ್ತಿದ್ದಾರೆ. ಪ್ರಸ್ತುತ ಸಂಯುಕ್ತ ಸಹಕಾರಿಯ ಆಡಳಿತ ಮಂಡಲಿಯ ನಿರ್ದೇಶಕರಾಗಿ 3ನೇ ಬಾರಿಗೆ ಸತತವಾಗಿ ಆಯ್ಕೆಯಾಗಿದ್ದಾರೆ.

## ನೂತನ ಉಪಾಧ್ಯಕ್ಷರಾದ ಶ್ರೀ ಎ.ಆರ್ ಪ್ರಸನ್ನಕುಮಾರ ಇವರ ವ್ಯಕ್ತಿ ಪರಿಚಯ



### ಶ್ರೀ ಎ ಆರ್ ಪ್ರಸನ್ನಕುಮಾರ್

ಶ್ರೀ ಎ ಆರ್ ಪ್ರಸನ್ನಕುಮಾರ್ ಇವರು ಮೂಲತಃ ತೀರ್ಥಹಳ್ಳಿಯವರಾಗಿದ್ದು, ದಿನಾಂಕ 19–06–1963ರಲ್ಲಿ ಶ್ರೀ ರಾಜಾಚಾರ್ ಮತ್ತು ಶ್ರೀಮತಿ ಮಧುರಾಬಾಯಿ ಇವರ 4ನೇ ಪುತ್ರರಾಗಿ ಜನನ. ಶ್ರೀಯುತರು ಇಂಜಿನಿಯರಿಂಗ್ ವಿದ್ಯಾಭ್ಯಾಸ ಮುಗಿಸಿ 1985 ರಿಂದ ತೀರ್ಥಹಳ್ಳಿ ಮತ್ತು ಶಿವಮೊಗ್ಗ ಜಿಲ್ಲೆಯಲ್ಲಿ ತಾಂತ್ರಿಕ ಸಲಹೆಗಾರರಾಗಿ ತಮ್ಮ ವೃತ್ತಿಯನ್ನು ಪ್ರಾರಂಭಿಸಿದರು. ಆ ದಿನಗಳಿಂದಲೇ ತಮ್ಮನ್ನು ತಾವು ಸಾರ್ವಜನಿಕ ಜೀವನದಲ್ಲಿ ತೊಡಗಿಸಿ ಕೊಂಡಿರುತ್ತಾರೆ. ತಮ್ಮ ವೃತ್ತಿ ಜೀವನದ ಜೊತೆಗೆ ಕೃಷಿಯಲ್ಲಿ ತೊಡಗಿಸಿಕೊಂಡಿದ್ದು, ಉತ್ತಮ ಕೃಷಿಕರಾಗಿರುತ್ತಾರೆ, 2005ನೇ ಇಸವಿಯಿಂದ ಸಹಕಾರ ಕ್ಷೇತ್ರದಲ್ಲಿ ಕೆಲಸ ಮಾಡುತ್ತಿದ್ದು, ಶ್ರೀಯುತರು ವಿಪ್ರ ವಿವಿಧೋದ್ದೇಶ ಸೌಹಾರ್ದ ಸಹಕಾರಿ ನಿಯಮಿತ, ಶಿವಮೊಗ್ಗ ಸಹಕಾ–

ರಿಯ ಸ್ಥಾಪಕ ನಿರ್ದೇಶಕರಾಗಿ ನಂತರ ಉಪಾಧ್ಯಕ್ಷರಾಗಿ ಕಳೆದ 6 ವರ್ಷಗಳಿಂದ ಅಧ್ಯಕ್ಷರಾಗಿ ಸಂಸ್ಥೆಯನ್ನು ಜಿಲ್ಲೆಯ ಪ್ರತಿಷ್ಠಿತ ಸಂಸ್ಥೆಯನ್ನಾಗಿ ಮಾಡಲು ಶ್ರಮಿಸಿರುತ್ತಾರೆ. ಸುಮಾರು 300 ಕೋಟಿ ರೂ.ಗಳ ವ್ಯವಹಾರ ನಡೆಸುವ ಹಾಸನ ವಲಯ ಅಡಿಕೆ ಬೆಳೆಗಾರರ ಸಂಘದ ನಿರ್ದೇಶಕರಾಗಿ ಕಳೆದ 7 ವರ್ಷಗಳಿಂದ ಸೇವೆ ಸಲ್ಲಿಸುತ್ತಿದ್ದಾರೆ.

ತಾಲ್ಲೂಕು ವೆನಿಲಾ ಬೆಳೆಗಾರರ ಸಂಘದ ನಿರ್ದೇಶಕರಾಗಿರುತ್ತಾರೆ. ತೀರ್ಥಹಳ್ಳಿಯ ಸರ್ಕಾರಿ ಪದವಿ ಪೂರ್ವ ಕಾಲೇಜಿನ ಕಾಲೇಜು ಅಭಿವೃದ್ಧಿ ಸಮಿತಿಯ ಉಪಾಧ್ಯಕ್ಷರಾಗಿ ಕಾಲೇಜಿನ ಅಭಿವೃದ್ಧಿಯಲ್ಲಿ ತಮ್ಮ ಕೊಡುಗೆಯನ್ನು ನೀಡಿರುತ್ತಾರೆ. ಪ್ರಸ್ತುತ ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿಯಮಿತದ ನಿರ್ದೇಶಕರಾಗಿ ಸತತವಾಗಿ 2ನೇ ಬಾರಿಗೆ ಆಯ್ಕೆಯಾಗಿದ್ದಾರೆ.

## ಸಂಯುಕ್ತ ಸಹಕಾರಿಯ ನೂತನ ನಿರ್ದೇಶಕರುಗಳ ವ್ಯಕ್ತಿ ಪರಿಚಯ



### ಶ್ರೀ ಬಿ.ಹೆಚ್.ಕೃಷ್ಣಾರೆಡ್ಡಿ

ತುಮಕೂರು ಜಿಲ್ಲೆಯ ಪಾವಗಡದಲ್ಲಿ ದಿನಾಂಕ 20–07–1963ರಲ್ಲಿ ಜನನ. ತಂದೆ ಶ್ರೀ ಹೆಂಜಾರೆಡ್ಡಿ. ತಾಯಿ ಶ್ರೀಮತಿ ನಾರಮ್ಮ. ವಿದ್ಯಾವಂತ, ಕೃಷಿಕ, ಸುಸಂಸ್ಕೃತ ಕುಟುಂಬ. ಮಂಡ್ಯದ ಪಿ.ಇ.ಎಸ್. ಕಾಲೇಜನಲ್ಲಿ ಬಿ.ಇ. ಶಿಕ್ಷಣ ನಂತರದಲ್ಲಿ ಎ.ಎಮ್.ಐ.ಇ. ಪದವಿ ಪಡೆದು ಸಿವಿಲ್ ಇಂಜಿನಿಯರ್ ವೃತ್ತಿ ಆಯ್ಕೆ. ದಿ ಪಾವಗಡ ಮಲ್ಟಿಪರ್ಪಸ್ ಸೌಹಾರ್ದ ಸಹಕಾರಿ ಸಂಸ್ಥೆಯನ್ನು ಸ್ಥಾಪಿಸಿ ಸಾಮಾಜಿಕ, ಶೈಕ್ಷಣಿಕ, ಧಾರ್ಮಿಕ, ವೈದ್ಯಕೀಯ ಹಾಗೂ ಪ್ರಕೃತಿ ವಿಕೋಪದಂತಹ ಅನೇಕ ಕಾರ್ಯಕ್ರಮಗಳಿಗೆ ಸಹಾಯ ಹಸ್ತ ನೀಡುವುದು, ಪಾವಗಡ ಮತ್ತು ಮಧುಗಿರಿಯಲ್ಲಿ 2 ವೃದ್ಧಾಶ್ರಮಗಳಿಗೆ ಉಚಿತವಾಗಿ ಪ್ರತಿ ತಿಂಗಳು ಖರ್ಚಾಗುವಷ್ಟು ಅಕ್ಕಿಯನ್ನು ಕೊಡುವುದು, ಮಕ್ಕಳ ವಿದ್ಯಾಭ್ಯಾಸ ಪ್ರೋತ್ಸಾಹಿಸಲು ಪ್ರತಿಭಾ ಪುರಸ್ಕಾರ ಕಾರ್ಯಕ್ರಮಗಳನ್ನು ಮಾಡುವುದು.

ಶ್ರೀಮತಿ ನಾಗಮ್ಮ ಮತ್ತು ಶ್ರೀ ಹೆಂಜಾರೆಡ್ಡಿ ಚಾರಿಟಬಲ್ ಟ್ರಸ್ಟ್‌ನಿಂದ ಪ್ರತಿವರ್ಷ ಹೇಮಾವತಿಯಲ್ಲಿ ಸುಮಾರು 50,000 ಜನಕ್ಕೆ ಅನ್ನ ಸಂತರ್ಪಣೆ ಕಾರ್ಯಕ್ರಮವನ್ನು ಸತತ 15 ವರ್ಷಗಳಿಂದ ಆಯೋಜಿಸುತ್ತಿರುವುದು. ಬಡವರಿಗೆ ಸೂರು ಕಲ್ಪಿಸುವ ದೃಷ್ಟಿಯಿಂದ ಭಾರತಮಾತಾ ಗೃಹನಿರ್ಮಾಣ ಸಹಕಾರ ಸಂಘವನ್ನು ಸ್ಥಾಪಿಸಿರುವುದು, 2 ಕನ್‌ಸ್ಟ್ರಕ್ಷನ್ ಕಂಪನಿಗಳನ್ನು ಸ್ಥಾಪಿಸಿ ಹಾಗೂ ರಕ್ತದಾನ ಶಿಬಿರ, ಆರೋಗ್ಯ ತಪಾಸಣಾ ಶಿಬಿರ, ಉಚಿತ ಕಣ್ಣಿನ ಆಪರೇಷನ್ ಈ ರೀತಿ ಅನೇಕ ಸಮಾಜಮುಖಿ ಚಟುವಟಿಕೆಗಳಲ್ಲಿ ಭಾಗವಹಿಸಿರುವುದು. ಶ್ರೀಯುತರು ಸಹಕಾರ ಕ್ಷೇತ್ರದಲ್ಲಿ ಸಕ್ರಿಯವಾಗಿ ಭಾಗವಹಿಸುತ್ತಾ ಅನೇಕ ಸಹಕಾರ ಸಂಸ್ಥೆಗಳನ್ನು ಹುಟ್ಟುಹಾಕಿದ್ದಾರೆ.

ರಾಜ್ಯ ಮಟ್ಟದ ಸಂಯುಕ್ತ ಸಹಕಾರಿಯ ಮಾಜಿ ಅಧ್ಯಕ್ಷರು, ನಿರ್ದೇಶಕರಾಗಿ ಸತತವಾಗಿ 4ನೇಯ ಬಾರಿಗೆ ಆಯ್ಕೆಯಾಗಿದ್ದಾರೆ. ಸೌಹಾರ್ದ ಕಾಯ್ದೆಯ ಸಮಗ್ರ ತಿದ್ದುಪಡಿ ವಿಷಯದಲ್ಲಿ ಮತ್ತು ಅನೇಕ ಸಂಯುಕ್ತ ಸಹಕಾರಿಯ ಕಾರ್ಯಚಟುವಟಿಕೆಗಳಲ್ಲಿ, ತರಬೇತಿ ಕಾರ್ಯಕ್ರಮಗಳಲ್ಲಿ, ಸರ್ಕಾರ ಮನ್ನಣೆಗಳಿಸುವ, ಪ್ರವಾಸ ಕೈಗೊಳ್ಳುವ ಮತ್ತು ಸಹಕಾರ ಕ್ಷೇತ್ರವನ್ನು ಸಂಘಟಿಸುವ ಅತ್ಯಂತ ಪವಿತ್ರ ಕರ್ತವ್ಯದಲ್ಲಿ ಸಮರ್ಪಕ ಹಾಗೂ ಪ್ರಾಮಾಣಿಕವಾಗಿ ಕಾರ್ಯನಿರ್ವಹಿಸಿದ್ದಾರೆ. ಸಹಕಾರ ಕ್ಷೇತ್ರದಲ್ಲಿನ ಅನನ್ಯ ಸೇವೆಗಾಗಿ ಕರ್ನಾಟಕ ಸರ್ಕಾರವು ಪ್ರತಿಷ್ಠಿತ ಸಹಕಾರ ರತ್ನ ಪ್ರಶಸ್ತಿಯನ್ನು ನೀಡಿ ಗೌರವಿಸಿದೆ.



### ಶ್ರೀ ಜಗದೀಶ ಕವಟಗಿಮಠ

ಚಿಕ್ಕೋಡಿಯ ಕವಟಗಿಮಠ ಮನೆತನ ಕಳೆದ 3 ತಲೆಮಾರುಗಳಿಂದ ವೈವಿಧ್ಯಮಯವಾದ ಸೇವಾ ಕ್ಷೇತ್ರಗಳಿಂದ ಗುರುತಿಸಿಕೊಂಡಿರುವ ಮನೆತನ. ಸುಸಂಸ್ಕೃತ ಕೃಷಿ ಕುಟುಂಬ. ಈ ಮನೆತನದಲ್ಲಿ 1970ರ ಮೇ 09 ಜಗದೀಶರ ಜನ್ಮದಿನ. ಬಿ.ಎ. ಎಲ್.ಎಲ್.ಬಿ. ಪದವೀಧರರಾಗಿರುವ ಶ್ರೀಯುತರು ತಮ್ಮ ಪೂಜ್ಯ ತಂದೆಯವರಾದ ದಿ. ಶ್ರೀ ಎಂ.ಕೆ ಕವಟಗಿಮಠರವರು ಅವರ ಅಜ್ಜ ದಿವಂಗತ ಕಲ್ಲಯ್ಯಸ್ವಾಮಿಗಳು ತಂದೆ ಶ್ರೀ ದಿವಂಗತ ಶ್ರೀ ಮಲ್ಲಯ್ಯ ಸ್ವಾಮಿಗಳು ಹಾಕಿಕೊಟ್ಟ ಸನ್ಮಾರ್ಗದಲ್ಲಿ ನಡೆಯುತ್ತಿರುವ ಪ್ರಗತಿಪರ ಯುವ ಸಹಕಾರಿ. ಎರಡನೇ ಬಾರಿಗೆ ಸಂಯುಕ್ತ ಸಹಕಾರಿಯ ನಿರ್ದೇಶಕರಾಗಿ ಬೆಳಗಾವಿ ವಿಭಾಗದಿಂದ ಆಯ್ಕೆಯಾಗಿರುವ ಶ್ರೀಯುತರು ಅವಿರೋಧವಾಗಿ ಉಪಾಧ್ಯಕ್ಷರಾಗಿ ಆಯ್ಕೆಯಾಗಿದ್ದಾರೆ.

ಶ್ರೀಯುತರು ಶ್ರೀ ಸಿದ್ಧೇಶ್ವರ ಹಾಲು ಉತ್ಪಾದಕರ ಸಹಕಾರಿ ಸಂಘದ ಚಿಕ್ಕೋಡಿಯ ನಿರ್ದೇಶಕರಾಗಿ, ಜಿಲ್ಲಾ ಸಹಕಾರಿ ಯೂನಿಯನ್ ಬೆಳಗಾವಿಯ ಉಪಕಾರ್ಯಾಧ್ಯಕ್ಷರಾಗಿ, ಶ್ರೀ ನಾಗಲಿಂಗೇಶ್ವರ ಹೌಸಿಂಗ್ ಸೊಸಾಯಿಟಿ ಚಿಕ್ಕೋಡಿಯ ನಿರ್ದೇಶಕರಾಗಿ, ಕೆ.ಎಲ್.ಇ. ಕಾನೂನು ಮಹಾವಿದ್ಯಾಲಯ

ಚಿಕ್ಕೋಡಿ ಇದರ ಸ್ಥಳೀಯ ಆಡಳಿತ ಮಂಡಳಿ ಸದಸ್ಯರಾಗಿ, ಕನ್ನಡ ಸಾಹಿತ್ಯ ಪರಿಷತ್ತು ಚಿಕ್ಕೋಡಿ ತಾಲ್ಲೂಕಾ ಘಟಕದ ಕೋಶಾಧ್ಯಕ್ಷರಾಗಿ, ಸಿ.ಎಲ್.ಇ. ಸಂಸ್ಥೆಯ ಹಳೆಯ ವಿದ್ಯಾರ್ಥಿ ಬಳಗದ ಸಂಸ್ಥಾಪಕ ಅಧ್ಯಕ್ಷರಾಗಿ, ಚಿಕ್ಕೋಡಿ ಪುರಸಭೆಯ ಅಧ್ಯಕ್ಷರಾಗಿ, ಸದಸ್ಯರಾಗಿ ಜೊತೆಗೆ ಹಲವಾರು ಸಂಘ ಸಂಸ್ಥೆಗಳಿಗೆ ಪದಾಧಿಕಾರಿಗಳಾಗಿ ಪ್ರೇರಕರಾಗಿ ಅವರು ಸಲ್ಲಿಸುತ್ತಿರುವ ಸೇವೆ ಅತ್ಯಂತ ಸ್ಮರಣೀಯವಾಗಿದೆ.

ಚಿಕ್ಕೋಡಿಯ ಧಾರ್ಮಿಕ ಸಾಂಸ್ಕೃತಿಕ ಕ್ಷೇತ್ರಕ್ಕೆ ಹೊಸ ಆಯಾಮವನ್ನು ನೀಡಿರುವ ಶ್ರೀಯುತರು ಸಾಯಿ ಪರಿವಾರದ ಮೂಲಕ ಪ್ರತಿ ವರ್ಷ ಉಚಿತ ಸಾಮೂಹಿಕ ವಿವಾಹ, ಬಡ ವಿದ್ಯಾರ್ಥಿಗಳಿಗೆ ಶೈಕ್ಷಣಿಕ ಪರಿಕರಗಳ ಹಂಚಿಕೆ, ಸಾಯಿ ಮಂದಿರದ ವಾರ್ಷಿಕೋತ್ಸವದ ಕಾಲಕ್ಕೆ ಮೂರು ದಿನಗಳ ಮಟ್ಟಿಗೆ ಹಮ್ಮಿಕೊಳ್ಳುವ ವಿವಿಧ ವಿಧಾಯಕ ಕಾರ್ಯಕ್ರಮಗಳು ಈ ಭಾಗದ ಜನರ ಮನ, ಮನೆಗಳಿಗೆ ಮೆಚ್ಚುಗೆಯಾಗಿವೆ. ಕಳೆದ 15 ವರ್ಷಕ್ಕೂ ಮಿಕ್ಕಿ ಕನ್ನಡ ಸಾಹಿತ್ಯ ಪರಿಷತ್ತು ಈ ಗಡಿಭಾಗದಲ್ಲಿ ಸಕ್ರಿಯವಾಗಿರುವುದರ ಜೊತೆಗೆ ಅದು ಹಲವು ಕಾರ್ಯಕ್ರಮಗಳನ್ನು ಹಾಗೂ ಸಾಹಿತ್ಯ ಸಮ್ಮೇಳನವನ್ನು ಆಯೋಜಿಸಲು ಇವರು ಪ್ರೇರಕರಾಗಿದ್ದಾರೆ. ಇಂದು ಈ ಭಾಗದಲ್ಲಿ ಯಾವುದೇ ಧಾರ್ಮಿಕ, ಸಾಹಿತ್ಯಿಕ, ಸಾಂಸ್ಕೃತಿಕ ಕಾರ್ಯಕ್ರಮವನ್ನು ಹಮ್ಮಿಕೊಳ್ಳಬೇಕಾದರೆ ಅದಕ್ಕೆ ಇವರ ಉಪಸ್ಥಿತಿ, ಮಾರ್ಗದರ್ಶನ, ಮುಖಂಡತ್ವ ಅನಿವಾರ್ಯ ಎನ್ನುವಷ್ಟರ ಮಟ್ಟಿಗೆ ಶ್ರೀಯುತರು ತೊಡಗಿಸಿಕೊಂಡಿದ್ದಾರೆ. ಶ್ರೀಯುತರು ದಿ.ಚಿಕ್ಕೋಡಿ ತಾಲೂಕಾ ಒಕ್ಕಲುತನ ಹುಟ್ಟುವಳಿ ಮಾರಾಟ ಸಹಕಾರಿ ಸಂಘ ನಿ., ನಿಪ್ಪಾಣಿ ಇದರ ಅಧ್ಯಕ್ಷರಾಗಿ ಕಳೆದ ಎರಡು ಅವಧಿಗಳಿಗೆ ಇದನ್ನು ಮುನ್ನಡೆಸುತ್ತಿದ್ದಾರೆ. ದಾಖಲೆ ಪ್ರಮಾಣದ ಲಾಭಗಳಿಕೆಯನ್ನು ಇದಕ್ಕೆ ತಂದು ಕೊಟ್ಟಿದ್ದಾರೆ. ಸಂಘದ ಇತಿಹಾಸದಲ್ಲಿ ಹೊಸ ಅಧ್ಯಾಯವನ್ನು ಬರೆದಿದ್ದಾರೆ.

ಶ್ರೀಯುತರು ಸಿ.ಎಲ್.ಇ. ಶಿಕ್ಷಣ ಸಂಸ್ಥೆ ಚಿಕ್ಕೋಡಿಯ ಒಬ್ಬ ಕ್ರಿಯಾಶೀಲ ಕಾರ್ಯದರ್ಶಿಯಾಗಿ ಕೈಗೊಂಡಿರುವ ಕ್ರಮಗಳು ಗಮನಾರ್ಹವಾಗಿವೆ. ಸಂಸ್ಥೆಯು ತನ್ನ ಹದಿನಾಲ್ಕನೇಯ ಅಂಗ ಸಂಸ್ಥೆಯಾಗಿ 2012ರಲ್ಲಿ ಆರಂಭಿಸಿರುವ ಸಿ.ಎಲ್.ಇ. ಸಂಸ್ಥೆಯ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಪದವಿ ಪೂರ್ವ ಮಹಾವಿದ್ಯಾಲಯವು ಅವರ ಕನಸಿನ ಆಶೋತ್ತರಗಳ ದ್ಯೋತಕವಾಗಿ ಬೆಳೆದು ನಿಂತಿದೆ. ಶ್ರೀಯುತರು ಚಿಕ್ಕೋಡಿಯ ಡಾ.ಪ್ರಭಾಕರ ಕೋರೆ ನಗರದಲ್ಲಿ ಜನವರಿ 2014ರಲ್ಲಿ ಶ್ರೀ ಸಾಯಿ ಕ್ರೆಡಿಟ್ ಸೌಹಾರ್ದ ಸಹಕಾರಿ ನಿ., ಹುಟ್ಟುಹಾಕಿದ್ದಾರೆ. ಅವರ ಸಮರ್ಥ, ದಕ್ಷ ಹಾಗೂ ಚಾಣಾಕ್ಷ ಆರ್ಥಿಕ ಯೋಚನೆ, ಯೋಜನೆಗಳ ಫಲವಾಗಿ ಕಳೆದ ಒಂದೆರಡು ತಿಂಗಳಲ್ಲಿ ಈ ಸಂಸ್ಥೆಯು ನಿಪ್ಪಾಣಿ, ಸವದತ್ತಿ, ಬೈಲಹೊಂಗಲ ಹಾಗೂ ರಾಮದುರ್ಗದಲ್ಲಿ ತನ್ನ ಶಾಖೆಗಳನ್ನು ಆರಂಭಿಸುವಂತಾಗಿದೆ. ಶ್ರೀಯುತರು ಸಂಯುಕ್ತ ಸಹಕಾರಿಯ ಉಪಾಧ್ಯಕ್ಷರಾಗಿ ಸೇವೆ ಸಲ್ಲಿಸಿದ್ದಾರೆ.



## ಶ್ರೀ ಗುರುನಾಥ ಜ್ಯಾಂತಿಕರ


ಶ್ರೀಯುತರು ಬೀದರ ಜಿಲ್ಲೆಯ ನೌಬಾದ್ ನವರು, ತಂದೆಯ ಹೆಸರು ಚೆನ್ನಬಸಪ್ಪ, ಹುಟ್ಟಿದ ದಿನಾಂಕ 21 ಜೂನ್ 1968, ವಿದ್ಯಾಭ್ಯಾಸ ಬಿ.ಕಾಂ. ಎಲ್.ಎಲ್.ಬಿ, ಉದ್ಯೋಗ ವಕೀಲ ವೃತ್ತಿ. ಶ್ರೀಯುತರು ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯ ಅಧ್ಯಕ್ಷರಾಗಿ, ಉಪಾಧ್ಯಕ್ಷರಾಗಿ ಕಾರ್ಯನಿರ್ವಹಿಸಿರುತ್ತಾರೆ. ಕರ್ನಾಟಕ ಸ್ವೇಟ್ ಕ್ರೆಡಿಟ್ ಕೋ–ಆಪರೇಟಿವ್ ಸೋಸೈಟೀಸ್ ಅಸೋಸಿಯೇಷನ್, ಬೆಂಗಳೂರು ಇದರ ಕಾರ್ಯದರ್ಶಿಯಾಗಿ, ಕಲ್ಯಾಣ ಪತ್ತಿನ ಸೌಹಾರ್ದ ಸಹಕಾರಿಯ ಅಧ್ಯಕ್ಷರಾಗಿ, ಬೀದರ ಜಿಲ್ಲಾ ಪತ್ತಿನ ಸಹಕಾರ ಸಂಘಗಳ ಮಹಾಮಂಡಳದ ಅಧ್ಯಕ್ಷರಾಗಿ, ಅರ್ಪಣಾ ಅಸೋಸಿಯೇಶ್‌ನ್ ಬೀದರ ಇದರ ಅಧ್ಯಕ್ಷರಾಗಿ ಸೇವೆ ಸಲ್ಲಿಸಿದ್ದಾರೆ.

ಕಾಲೇಜು ಜೀವನದಲ್ಲಿ ವಿದ್ಯಾರ್ಥಿ ಸಂಘದ ಸಿ.ಆರ್ ಆಗಿ, ಪದವಿ ವಾಣೀಜ್ಯ ವಿಭಾಗದ ಕಾರ್ಯದರ್ಶಿಯಾಗಿ, ಸಾಂಸ್ಕೃತಿಕ ವಿಭಾಗದ ಕಾರ್ಯದರ್ಶಿಯಾಗಿ, ವಿದ್ಯಾರ್ಥಿ ಸಂಘದ ಅಧ್ಯಕ್ಷರಾಗಿ ಸೇವೆ ಸಲ್ಲಿಸಿದ್ದಾರೆ.

1986 ರಿಂದ ಸ್ವಯಂ ಸೇವಕರಾಗಿ, 1989ರಲ್ಲಿ ಎಬಿವಿಪಿಯ ಕಾರ್ಯಕರ್ತರಾಗಿ, ನಗರ ಕಾರ್ಯದರ್ಶಿ, ಜಿಲ್ಲಾ ಪ್ರಮುಖ, ಹಾಗೂ ರಾಜ್ಯ ಸಹ ಕಾರ್ಯದರ್ಶಿಯಾಗಿ ಜವಾಬ್ದಾರಿ ನಿರ್ವಹಿಸಿರುತ್ತಾರೆ. 1995 ರಿಂದ 2000 ರವರೆಗೆ ಪೂರ್ಣಾವಧಿ ಕಾರ್ಯಕರ್ತರಾಗಿ ಕರ್ತವ್ಯ ನಿರ್ವಹಣೆ.

ಆರ್.ಬಿ.ಐ ನಿಂದ ಪತ್ತಿನ ಸಹಕಾರ ಸಂಘಗಳಿಗೆ ಥರ್ಡ್ ಪಾರ್ಟಿ ಚೆಕ್ ನಗದೀಕರಣದ ಸೇವೆ ಸಲ್ಲಿಸಲು ಅನುಮತಿ ಪಡೆಯುವಲ್ಲಿ ಮಹತ್ವ ಹೋರಾಟ ಹಾಗೂ ಯಶಸ್ಸು, ಸಹಕಾರ ಕ್ಷೇತ್ರಕ್ಕೆ ಇ–ಸ್ಟಾಂಪಿಂಗ್ ಸೇವೆ ಸಲ್ಲಿಸುವ ಅವಕಾಶ ಒದಗಿಸಿಕೊಡುವಲ್ಲಿ ಪ್ರಮುಖ ಪಾತ್ರ ನಿರ್ವಹಣೆ ಹಾಗೂ ಯಶಸ್ಸು ಇವರ ಸಾಧನೆಗಳು.

ಸಂಯುಕ್ತ ಸಹಕಾರಿ ಆಡಳಿತ ಮಂಡಳಿಗೆ ಸತತವಾಗಿ 5ನೇ ಬಾರಿಗೆ ಆಯ್ಕೆಯಾಗಿದ್ದಾರೆ. ಸಂಯುಕ್ತ ಸಹಕಾರಿಯ ಉಪಾಧ್ಯಕ್ಷರಾಗಿ ಅಧ್ಯಕ್ಷರಾಗಿ ಸೇವೆ ಸಲ್ಲಿಸಿ ರಾಜ್ಯದಾದ್ಯಂತ ಸೌಹಾರ್ದ ಸಹಕಾರಿ ಚಳುವಳಿಯ ಬೆಳವಣಿಗೆಗೆ ಕಾರಣರಾಗಿದ್ದಾರೆ. ಕರ್ನಾಟಕ ರಾಜ್ಯ ಬಸವೇಶ್ವರ ಸುದ್ದಿ ಮಾಧ್ಯಮ ಸಹಕಾರ ಮಹಾಮಂಡಳದ ಪ್ರಥಮ ಅಧ್ಯಕ್ಷರಾಗಿ ಸೇವೆ ಸಲ್ಲಿಸುತ್ತಿದ್ದಾರೆ. ಸಹಕಾರ ಕ್ಷೇತ್ರದಲ್ಲಿನ ಅನನ್ಯ ಸೇವೆಗಾಗಿ ಕರ್ನಾಟಕ ಸರ್ಕಾರವು ಪ್ರತಿಷ್ಠಿತ ಸಹಕಾರ ರತ್ನ ಪ್ರಶಸ್ತಿಯನ್ನು 2010ರಲ್ಲಿ ನೀಡಿ ಗೌರವಿಸಿದೆ.



## ಶ್ರೀ ಬಿ.ಎಸ್. ಗುಂಡುರಾವ್

ಶ್ರೀಯುತರು ಹಾಸನ ಜಿಲ್ಲೆಯ ಅರಕಲಗೂಡ ತಾಲ್ಲೂಕಿನ ಬಸವಾಪಟ್ಟಣ ಗ್ರಾಮದಲ್ಲಿ ಮಧ್ಯಮ ವರ್ಗದ ರೈತ ಕುಟುಂಬದ ಶ್ರೀ ಶಿವರಾಮಯ್ಯ ಮತ್ತು ಶ್ರೀಮತಿ ಸುಶೀಲಮ್ಮ ದಂಪತಿಗಳಿಗೆ ದಿನಾಂಕ 14-04-1962ರಲ್ಲಿ ಜನಿಸಿದರು. ಅವರು ಡಿಪ್ಲೋಮಾವರೆಗೆ ಶಿಕ್ಷಣ ಪೂರೈಸಿರುತ್ತಾರೆ. ಶ್ರೀಯುತರು ಸಹಕಾರ ಕ್ಷೇತ್ರದ ಮೂಲಕ ಬಡವರಿಗೆ, ಸಮಾಜದ ಹಿಂದುಳಿದ ವರ್ಗದವರಿಗೆ, ಸಮಾಜದ ಕಟ್ಟಕಡೆಯ ವ್ಯಕ್ತಿಗೆ ಸಹಾಯ ಮಾಡಲು ಎಂದು ತಿಳಿದು ಸಹಕಾರ ತತ್ವಗಳನ್ನು ಅಧ್ಯಯನ ಮಾಡಿ, ಬೆಂಗಳೂರಿನ ಹನುಮಂತನಗರದಲ್ಲಿ 1996ರಲ್ಲಿ ಉದಯ ಸಹಕಾರ ಸಂಘವನ್ನು ಸ್ಥಾಪಿಸಿದರು.

ನಂತರ ಸೌಹಾರ್ದ ಸಹಕಾರಿ ಕಾಯ್ದೆ ಜಾರಿಗೆ ಬಂದ ನಂತರ ಸಹಕಾರ ಕ್ಷೇತ್ರದ ಅಭಿವೃದ್ಧಿಯಲ್ಲಿ ಸಹಕಾರಿಗಳಿಗೆ ಸ್ವಾಯತ್ತತೆ ಹಾಗೂ ವ್ಯಾವಹಾರಿಕ ಸ್ವಾತಂತ್ರ್ಯ ಅತ್ಯಂತ ಮಹತ್ವದ ಪಾತ್ರವನ್ನು ವಹಿಸುತ್ತದೆ ಎಂದು ಈ ಧ್ಯೇಯವನ್ನು ಒಪ್ಪಿಕೊಂಡು 2004ರಲ್ಲಿ ಸೌಹಾರ್ದ ಸಹಕಾರಿ ಕಾಯ್ದೆಯನ್ನು ಆಯ್ಕೆ ಮಾಡಿಕೊಂಡರು. 32000 ಚದರ ಅಡಿಗಳ ನಿವೇಶನದಲ್ಲಿ 4 ಅಂತಸ್ತಿನ ಸ್ವಂತ ಕಟ್ಟಡ ನಿರ್ಮಾಣ ಮಾಡಿದ ಕೀರ್ತಿ ಇವರದು.

ಶ್ರೀಯುತರು ವಿಶೇಷವಾಗಿ ವಿದ್ಯಾರ್ಥಿಗಳ ವಿದ್ಯಾಭ್ಯಾಸಕ್ಕೆ ನೆರವು ನೀಡಿ ಅವರನ್ನು ದೇಶದ ಅಮೂಲ್ಯ ಆಸ್ತಿವಂತರನ್ನಾಗಿ ಮಾಡುವುದು ಯುವಕರನ್ನು ಉದ್ಯೋಗಸ್ಥರನ್ನಾಗಿ ಮಾಡುವುದಕ್ಕೆ ಸಹಕಾರಿಯ ಮೂಲಕ ಸಣ್ಣ ಕೈಗಾರಿಕೆಗಳಿಗೆ ಸಾಲ ನೀಡಿ ಪ್ರೋತ್ಸಾಹಿಸುತ್ತಾ ಬಂದಿದ್ದಾರೆ. ವಿಶೇಷವಾಗಿ ಸಾರ್ವಜನಿಕರಲ್ಲಿ ಸಂತೋಷ, ಸಂಸ್ಕಾರ ಹಾಗೂ ಜಾಗೃತಿಯನ್ನು ಹೆಚ್ಚಿಸುವ ಹಬ್ಬ ಹರಿದಿನಗಳ ಮತ್ತು ರಾಷ್ಟ್ರೀಯ ದಿನಗಳ ಆಚರಣೆಗೆ ಹೆಚ್ಚು ಒತ್ತು ನೀಡುವುದು ಇವರ ಸೇವೆಯ ವಿಶೇಷ. ಶ್ರೀಯುತರು ಸಂಯುಕ್ತ ಸಹಕಾರಿ ಆಡಳಿತ ಮಂಡಳಿಗೆ ಸತತವಾಗಿ 2ನೇ ಬಾರಿಗೆ ಆಯ್ಕೆಯಾಗಿದ್ದಾರೆ.



## ಶ್ರೀ ಗುರನಗೌಡ ನಿಂಗನಗೌಡ ಪಾಟೀಲ

ಬೆಳಗಾವಿ ವಿಭಾಗದಿಂದ ಸಂಯುಕ್ತ ಸಹಕಾರಿಯ ಆಡಳಿತ ಮಂಡಲಿಗೆ ಮೂರನೇ ಬಾರಿ ಆಯ್ಕೆಯಾಗಿರುವ ಶ್ರೀ ಗುರನಗೌಡ ನಿಂಗನಗೌಡ ಪಾಟೀಲರವರು ಮೂಲತಃ ಬಾಗಲಕೋಟೆ ಜಿಲ್ಲೆಯವರು. ಕುಷ್ಟಗಿ ತಾಲ್ಲೂಕಿನ ಕಡೂರಿನಲ್ಲಿ ಸುಸಂಸ್ಕೃತ ಕೃಷಿ ಕುಟುಂಬದಲ್ಲಿ ದಿನಾಂಕ 22-11-1950ರಂದು ಜನಿಸಿದರು. ತಮ್ಮ ಪ್ರಾಥಮಿಕ ಹಾಗೂ ಮಾಧ್ಯಮಿಕ ಕಾಲೇಜು ಶಿಕ್ಷಣವನ್ನು ಬಾಗಲಕೋಟೆಯಲ್ಲಿ ಪೂರೈಸಿ, ನಂತರ ಕಾನೂನು ಶಿಕ್ಷಣವನ್ನು ಧಾರವಾಡದಲ್ಲಿ ಪೂರೈಸಿ, ತಮ್ಮ ಕೃಷಿ ಉದ್ಯೋಗದ ಜೊತೆಗೆ ವಕೀಲಿ ವೃತ್ತಿಯನ್ನು ಆಯ್ಕೆ ಮಾಡಿಕೊಂಡರು. ಸಹಕಾರ ತತ್ವಗಳಲ್ಲಿ ಅಪಾರ ವಿಶ್ವಾಸವಿರಿಸಿಕೊಂಡಿರುವ ಶ್ರೀಯುತರು ಸಹಕಾರ ಕ್ಷೇತ್ರದ ಮೂಲಕ ಜನಸಾಮಾನ್ಯರಿಗೆ, ಸಮಾಜದ ಕಡುಬಡವರಿಗೆ ಆರ್ಥಿಕ ಹಾಗೂ ಸಾಮಾಜಿಕ ಅಭಿವೃದ್ಧಿಯನ್ನು ಮಾಡಲು ಸಾಧ್ಯ ಎಂಬುವುದಕ್ಕೆ ಸಹಕಾರ ಕ್ಷೇತ್ರದ ಅನೇಕ ಸಾಧನೆಗಳನ್ನು ಉದಾಹರಣೆಯಾಗಿ ನೀಡುತ್ತಾರೆ. ಬಾಪೂಜಿ ಪತ್ತಿನ ಸೌಹಾರ್ದ ಸಹಕಾರಿಯ ಉಪಾಧ್ಯಕ್ಷರಾಗಿ, ಬಸವೇಶ್ವರ ಸುದ್ದಿ ಮಾಧ್ಯಮ ಸಹಕಾರ ಮಹಾಮಂಡಳದ ನಿರ್ದೇಶಕರಾಗಿ ಕಾರ್ಯನಿರ್ವಹಿಸುತ್ತಿರುವ ಶ್ರೀಯುತರು ಮಹಿಳೆಯರು ಹಾಗೂ ಯುವಕರು ಈ ಕ್ಷೇತ್ರದಲ್ಲಿ ಹೆಚ್ಚಾಗಿ ತೊಡಗಿಸಿಕೊಳ್ಳುವ ಅಗತ್ಯವನ್ನು ಒತ್ತಿ ಹೇಳುತ್ತಾರೆ. ಶೈಕ್ಷಣಿಕ ಹಾಗೂ ಸಾಮಾಜಿಕ ಕ್ಷೇತ್ರದಲ್ಲಿಯೂ ಸಹ ಶ್ರೀಯುತರು ಅನೇಕ ಸಂಘ ಸಂಸ್ಥೆಗಳಲ್ಲಿ ತೊಡಗಿಸಿಕೊಂಡಿದ್ದಾರೆ. ಸಂಗಮೇಶ್ವರ ಶಿಕ್ಷಣ ಸಂಸ್ಥೆ, ವಿಜಯಪುರ ಇದರ ಚೇರ್‌ಮನ್ ಆಗಿ, ಕರ್ನಾಟಕ ಗ್ರಾಮೀಣ ವಿದ್ಯಾಪೀಠ, ಬಾಗಲಕೋಟೆ ಇದರ ಮ್ಯಾನೇಜಿಂಗ್ ಟ್ರಸ್ಟಿಯಾಗಿ, ಸ್ವಾಮಿ ಗಿರಿರಾಜ ಸ್ಕೂಲ್ ಆಫ್ ಮ್ಯೂಸಿಕ್‌ನ ಅಧ್ಯಕ್ಷರಾಗಿ, ಭಾರತ ಸ್ಕೌಟ್ಸ್ ಮತ್ತು ಗೈಡ್ಸ್‌ನ ಜಿಲ್ಲಾ ಉಪಾಧ್ಯಕ್ಷರಾಗಿ, ಅಖಿಲ ಭಾರತ ವೀರಶೈವ ಮಹಾಸಭಾದ ಮಹಾಪೋಷಕರಾಗಿ, ಬಸವೇಶ್ವರ ವಿದ್ಯಾವರ್ಧಕ ಸೈನ್ಸ್ ಕಾಲೇಜಿನ ಅಧ್ಯಕ್ಷರಾಗಿ ಹೀಗೆ ಇನ್ನೂ ಹಲವಾರು ವಿದ್ಯಾ ಸಂಸ್ಥೆಗಳಲ್ಲಿ ತೊಡಗಿಸಿಕೊಂಡಿದ್ದಾರೆ. 2001 ರಿಂದ 2004ರವರೆಗೆ ಬಾಗಲಕೋಟೆ ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರಾಗಿ ಕಾರ್ಯನಿರ್ವಹಿಸಿ, ಬಾಗಲಕೋಟೆ ನಗರದ ಅಭಿವೃದ್ಧಿಗೆ ಶ್ರಮಿಸಿದ್ದಾರೆ. ರಾಜಕೀಯ ಕ್ಷೇತ್ರದಲ್ಲೂ ಅಪಾರ ಅನುಭವ ಹೊಂದಿರುವ ಶ್ರೀಯುತರು ದೇಶದ ಆರ್ಥಿಕ ಹಾಗೂ ಸಾಮಾಜಿಕ ಅಭಿವೃದ್ಧಿಯಲ್ಲಿ ದೇಶದ ಸಹಕಾರ ಚಳುವಳಿಯ ಸಾಧನೆಗಳನ್ನು ಜನಸಾಮಾನ್ಯರಿಗೆ ತಿಳುವಳಿಕೆ ಮಾಡಿಕೊಟ್ಟು ಸಹಕಾರ ಕ್ಷೇತ್ರವನ್ನು ಬಲಪಡಿಸುವಲ್ಲಿ ನಿರ್ದೇಶಕರುಗಳ ಪಾತ್ರ ಅತ್ಯಂತ ಮಹತ್ವದ್ದು ಎಂದು ಅಭಿಪ್ರಾಯ ಪಡುತ್ತಾರೆ.



## ಶ್ರೀ ನಾಗರಾಜ್ ಆರ್ ದೇಶಪಾಂಡೆ

ಶ್ರೀಯುತರು ಪ್ರಥಮ ಬಾರಿಗೆ ಅವರ ತಂದೆ ಶ್ರೀ ಆರ್.ಎನ್ ದೇಶಪಾಂಡೆಯವರು ನಿಧನದ ನಂತರ ಸಂಯುಕ್ತ ಸಹಕಾರಿಯ ಕೋ-ಆಪ್ ನಿರ್ದೇಶಕರಾಗಿ ಕಾರ್ಯನಿರ್ವಹಿಸಿ ಅನುಭವದ ಹಿನ್ನೆಲೆಯಲ್ಲಿ ಪ್ರಸ್ತುತ ಚುನಾವಣೆಯಲ್ಲಿ 2ನೇ ಬಾರಿಗೆ ಸಂಯುಕ್ತ ಸಹಕಾರಿಯ ನಿರ್ದೇಶಕರಾಗಿ ಆಯ್ಕೆಯಾಗಿದ್ದಾರೆ. ಜನನ 27.04.1971, ವಿದ್ಯಾಭ್ಯಾಸ ಬಿ.ಎ, ಶ್ರೀಯುತರು ದಿ ಮುಳಗುಂದ ಅರ್ಬನ್ ಸೌಹಾರ್ದ ಕೋ-ಆಪರೇಟಿವ್ ಬ್ಯಾಂಕ್ ಲಿ., ಮುಳಗುಂದ ಇದರ ನಿರ್ದೇಶಕರಾಗಿ, ಶ್ರೀ ಬಾಲಲೀಲಾ ಮಹಾಂತ ಶಿವಯೋಗಿ ಶಿಕ್ಷಣ ಸಮಿತಿ, ಮುಳಗುಂದ ಇದರ ನಿರ್ದೇಶಕರಾಗಿ, ಪಟ್ಟಣ ಪಂಚಾಯತ್ ಮುಳಗುಂದ ಸದಸ್ಯರಾಗಿ, ಸ್ಥಾಯಿ ಕಮಿಟಿ ಚೇರ್‌ಮೇನ್‌ಯಾಗಿ ಸೇವೆ ಸಲ್ಲಿಸುತ್ತಿದ್ದಾರೆ.



## ಶ್ರೀ ಆರ್.ತಿಮ್ಮಯ್ಯಶೆಟ್ಟಿ

ಕೃಷ್ಣೆ, ತುಂಗಭದ್ರೆಯರ ಮಧ್ಯದಲ್ಲಿ ರಾರಾಜಿಸುತ್ತಿರುವ ಧೋ ಅಬ್ ಪ್ರದೇಶವೆಂದೇ ಹೆಸರುವಾಸಿಯಾಗಿರುವ, ದಾಸರು ಶರಣರು ನಡೆದಾಡಿದ ಈ ನೆಲ ಪುಣ್ಯಪಾವನ, ಅಂತಹ ನೆಲದ ರಾಯಚೂರು ಜಿಲ್ಲೆ ಮಾನ್ವಿ ನಗರದ ಶ್ರೀಮತಿ ಆರ್.ಸುಭದ್ರಮ್ಮ ಮತ್ತು ವಿಠೋಬಶೆಟ್ಟಿಯವರ ಮಗನಾಗಿ ದಿನಾಂಕ 16-06-1949ರಂದು ಶ್ರೀ ಆರ್.ತಿಮ್ಮಯ್ಯಶೆಟ್ಟಿಯವರ ಜನನ. ಕೃಷಿ ಹಾಗೂ ವ್ಯಾಪಾರ ಇವರ ಕುಟುಂಬದ ವೃತ್ತಿ. ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣವನ್ನು ಮಾನ್ವಿ ನಗರದಲ್ಲಿಯೇ ಮುಗಿಸಿದರು. ನಂತರ ಪದವಿ ಶಿಕ್ಷಣದಲ್ಲಿ ಬಿ.ಕಾಂ. ಪದವಿ ಹಾಗೂ ಕಾನೂನು ಪದವಿ ಪಡೆದರು. ವ್ಯಾಪಾರ ಕ್ಷೇತ್ರವನ್ನು ಮುಂದುವರಿಸಿದರು. **ಶಿಕ್ಷಣ ಕ್ಷೇತ್ರ :** ಸಮಾಜಕ್ಕೆ ಏನಾದರು ಕೊಡುಗೆ ನೀಡಬೇಕೆಂದು ಸಮಾಜದ ಸ್ನೇಹಿತರ ಜೊತೆಗೂಡಿ ಶಿಕ್ಷಣ ಕ್ಷೇತ್ರಕ್ಕೆ ಕಾಲಿಟ್ಟು ಗಾಂಧೀ ಸ್ಮಾರಕ ಶಿಕ್ಷಣ ಸಂಸ್ಥೆಯನ್ನು ದಿನಾಂಕ 01-06-1977ರಂದು ಪ್ರಾರಂಭಿಸಿದರು. ಆ ಶಿಕ್ಷಣ ಸಂಸ್ಥೆಯು ದಿನಾಂಕ 01-04-1980 ರಿಂದ ಕರ್ನಾಟಕ ಸರಕಾರದಿಂದ ಅನುದಾನವನ್ನು ಪಡೆಯುವಂತಾಯಿತು. ಕೇವಲ 1 ರಿಂದ 4ನೇ ತರಗತಿಯವರೆಗೆ ನಡೆಯುತ್ತಿದ್ದ ಶಾಲೆಯನ್ನು ಮೇಲ್ದರ್ಜೆಗೇರಿಸಿ 7ನೇ ತರಗತಿವರೆಗೆ ಪ್ರಾರಂಭಿಸಲಾಯಿತು. ಉತ್ತಮ ಶಿಕ್ಷಣ ಸಂಸ್ಥೆಯನ್ನಾಗಿ ಬೆಳೆಸಿದರು. ಪ್ರಾಥಮಿಕ ಶಿಕ್ಷಣ ನಂತರ ಪ್ರೌಢಶಾಲೆಯನ್ನು 1996ರಲ್ಲಿ ಸುಸಜ್ಜಿತವಾದ ಕಟ್ಟಡದೊಂದಿಗೆ ಬೋಧನೋಪಕರಣಗಳೊಂದಿಗೆ ಪ್ರಾರಂಭಿಸಿದರು.

**ಸಾಮಾಜಿಕ ಕ್ಷೇತ್ರ :** 1991ರಲ್ಲಿ ಇವರನ್ನು ಪುರಸಭಾ ಚುನಾವಣೆಯಲ್ಲಿ ಆಯ್ಕೆಯಾಗಿ ಮಾನವಿ ನಗರದ ಪ್ರಥಮ ಪ್ರಜೆಯಾಗಿ (ಪುರಸಭಾ ಅಧ್ಯಕ್ಷರು) ಅಧಿಕಾರ ಸೀಕರಿಸಿ, ನಗರದ ಸರ್ವತೋಮುಖ ಏಳ್ಗೆಗಾಗಿ ಶ್ರಮಿಸಿ, ಸರಕಾರದಿಂದ ಬರುವ ಯೋಜನೆಗಳನ್ನು ಸಾರ್ವಜನಿಕರಿಗೆ ಸಮರ್ಪಕವಾಗಿ ಮುಟ್ಟಿಸುವ ಕೆಲಸ ಮಾಡಿದರು. **ಸಹಕಾರ ಕ್ಷೇತ್ರ :** ಸಣ್ಣಪುಟ್ಟ ವ್ಯಾಪಾರಸ್ಥರು, ಕಾರ್ಮಿಕರು, ಜನಸಾಮಾನ್ಯರಿಗೆ ಮಾನ್ವಿ ನಗರದ ರಾಷ್ಟ್ರೀಕೃತ ಬ್ಯಾಂಕುಗಳು ಸಕಾಲಕ್ಕೆ ಸಾಲ ಸೌಲಭ್ಯ ನೀಡದೇ ಇರುವುದನ್ನು ಗಮನಿಸಿ, "ಮಾನ್ವಿ ಪಟ್ಟಣ ಸೌಹಾರ್ದ ಸಹಕಾರಿ ಬ್ಯಾಂಕ್"ನ್ನು 31.07.1995ರಲ್ಲಿ ಸ್ಥಾಪಿಸಿದರು. ಶ್ರೀಯುತರು ಸಂಯುಕ್ತ ಸಹಕಾರಿಯ ಆಡಳಿತ ಮಂಡಳಿಗೆ 2ನೇ ಬಾರಿಗೆ ನಿರ್ದೇಶಕರಾಗಿ ಆಯ್ಕೆಯಾಗಿದ್ದಾರೆ.



## ಶ್ರೀ ಜಿ. ಶ್ರೀಧರ


ಸಂಯುಕ್ತ ಸಹಕಾರಿಯ ಕಲಬುರಗಿ ವಿಭಾಗದ ನಿರ್ದೇಶಕರಾಗಿ 2ನೇ ಬಾರಿಗೆ ಆಯ್ಕೆಯಾಗಿರುವ ಶ್ರೀ ಜಿ.ಶ್ರೀಧರರವರು ಎಂ.ಎಸ್‌ಸಿ, ಕೃಷಿ ಸ್ನಾತಕೋತ್ತರ ಪದವೀಧರರು. ಶ್ರೀಯುತರ ತಂದೆ ಮಾಜಿ ಸಂಸದರಾದ ಶ್ರೀ ಜಿ.ವೀರಪ್ಪನವರು. ದಿನಾಂಕ 01-06-1972ರಲ್ಲಿ ಕೊಪ್ಪಳ ಜಿಲ್ಲೆಯ ಗಂಗಾವತಿ ತಾಲ್ಲೂಕಿನ ಕೇಸರಗಟ್ಟಿ ಗ್ರಾಮದಲ್ಲಿ ಜನನ. ಕುಟುಂಬದ ವೃತ್ತಿ ಕೃಷಿ. ಇವರ ಆಯ್ಕೆ ಹೋಟೆಲ್ ಉದ್ಯಮ. **ಶೈಕ್ಷಣಿಕ ಹಾಗೂ ಸಾಮಾಜಿಕ ಕ್ಷೇತ್ರ :** ಶಿಕ್ಷಣ ಕ್ಷೇತ್ರದಲ್ಲಿ ಒಂದು ವಿಶಿಷ್ಠ ಸಾಧನೆ ಮಾಡಿದ ಕೀರ್ತಿ ಇವರಿಗೆ ಸಲ್ಲುತ್ತದೆ. ಅತೀ ಕಡಿಮೆ ವೆಚ್ಚದಲ್ಲಿ ಗ್ರಾಮಮಟ್ಟದಲ್ಲಿ ಆಂಗ್ಲ ಮಾಧ್ಯಮ ಶಾಲೆ ಪ್ರಾರಂಭಿಸಿರುವುದು ಅನೇಕ ಬಡವರಿಗೆ ಆಂಗ್ಲ ಭಾಷೆಯಲ್ಲಿ ಗ್ರಾಮಮಟ್ಟದಲ್ಲಿ ವಿದ್ಯಾಭ್ಯಾಸವನ್ನು ಮಾಡಲು ಅನುಕೂಲವಾಗಿದೆ. "ತುಂಗಭದ್ರ ಉಳಿಸಿ" ಆಂದೋಲನದಲ್ಲಿ ಸಕ್ರಿಯವಾಗಿ ಭಾಗವಹಿಸಿದ್ದಾರೆ. ತುಂಗಭದ್ರ "ಅಳಿಲು" ಪುಸ್ತಕದ ಪ್ರಾಯೋಜಕತ್ವ ನೀಡಿದ್ದಾರೆ.

ಕೃಷಿ ವಿಜ್ಞಾನ ಕೇಂದ್ರ, ಗಂಗಾವತಿ ಇದರ ಸಲಹಾ ಸಮಿತಿ ಸದಸ್ಯರಾಗಿದ್ದಾರೆ. ಶ್ರೀಯುತರಿಗೆ ಕರ್ನಾಟಕ ಸರಕಾರದ ಕೃಷಿ ಇಲಾಖೆಯಿಂದ "ಕೃಷಿ ಪ್ರಶಸ್ತಿ" ದೊರಕಿದೆ. ಚನ್ನಬಸವ ಪತ್ತಿನ ಸೌಹಾರ್ದ ಸಹಕಾರಿಯ ಸಂಸ್ಥಾಪಕ ನಿರ್ದೇಶಕರು. ಸಹಕಾರಿ ತತ್ವಗಳನ್ನು ಅಧ್ಯಯನ ಮಾಡಿ ಸಹಕಾರ ಕ್ಷೇತ್ರದ ಮೂಲಕ ಸಮಾಜದ ಆರ್ಥಿಕ ಹಾಗೂ ಸಾಮಾಜಿಕ ಅಭಿವೃದ್ಧಿ ಸಾಧ್ಯವೆಂದು ನಂಬಿದ ಯುವ ಸಹಕಾರಿಗೆ ಸಹಕಾರ ಕ್ಷೇತ್ರದಲ್ಲಿ ಇನ್ನೂ ಹೆಚ್ಚಿನ ಸೇವೆ ಮಾಡುವ ಅಭಿಲಾಷೆ ಇದೆ.



## ಶ್ರೀ ಶಿವಲಿಂಗಪ್ಪ

ಶ್ರೀಯುತರು ಪ್ರಥಮ ಬಾರಿಗೆ ಸಂಯುಕ್ತ ಸಹಕಾರಿಯ ನಿರ್ದೇಶಕರಾಗಿ ಆಯ್ಕೆಯಾಗಿದ್ದಾರೆ. ಜನನ 01.05.1952, ವಿದ್ಯಾರ್ಹತೆ ಬಿ.ಎ, ಎಲ್.ಎಲ್.ಬಿ ವೃತ್ತಿ : ಕರ್ನಾಟಕ ರಾಜ್ಯ ಕ್ರೆಡಿಟ್ ಸೊಸೈಟಿ ಅಸೋಷಿಯೇಶನ್ ಉಪಾಧ್ಯಕ್ಷರಾಗಿ 19 ವರ್ಷ ಸೇವೆ. ಶ್ರೀಯುತರು ಶ್ರೀ ಚನ್ನೇಶ ಪತ್ತಿನ ಸೌಹಾರ್ದ ಸಹಕಾರಿಯ ಅಧ್ಯಕ್ಷರಾಗಿ, ಭಾರತೀಯ ಜನತಾ ಪಾರ್ಟಿಯ ಜಿಲ್ಲಾ ಅಧ್ಯಕ್ಷರಾಗಿ ಸೇವೆ ಸಲ್ಲಿಸಿದ್ದಾರೆ. ಕರ್ನಾಟಕ ರಾಜ್ಯ ಬಾರ್ ಕೌನ್ಸಿಲ್ ಸದಸ್ಯರಾಗಿ 5 ವರ್ಷ ಸೇವೆ. ಪ್ರಸುತ್ತ ಭಾರತೀಯ ಜನತಾ ಪಾರ್ಟಿಯ ದಾವಣಗೆರೆ ಜಿಲ್ಲಾ ಪ್ರಭಾರಿಯಾಗಿ ಸೇವೆ ಸಲ್ಲಿಸುತ್ತಿದ್ದಾರೆ. ಸಹಕಾರ ತತ್ವಗಳಲ್ಲಿ ಅಪಾರ ನಂಬಿಕೆ ಇರುವ ಶ್ರೀಯುತರು ಸಹಕಾರ ಕ್ಷೇತ್ರದ ಮೂಲಕ ಉತ್ತಮ ಸಮಾಜವನ್ನು ನಿರ್ಮಾಣಮಾಡಬಹುದು ಎಂದು ಅಭಿಪ್ರಾಯದವರಾಗಿದ್ದಾರೆ.



## ಶ್ರೀ ಮಂಜುನಾಥ ಎಸ್.ಕೆ

ಮೈಸೂರು ವಿಭಾಗದ ಉಡುಪಿ ಜಿಲ್ಲೆಯ ಗುರುನರಸಿಂಹ ವಿವಿಧೋದ್ದೇಶ ಸೌಹಾರ್ದ ಸಹಕಾರಿ ನಿ., ಸಾಲಿಗ್ರಾಮ ಸಹಕಾರಿಯ ಪ್ರತಿನಿಧಿಯಾದ ಶ್ರೀ ಮಂಜುನಾಥ ಶ್ರೀಯಾನ ಕೋಟಾರವರು ಸಂಯುಕ್ತ ಸಹಕಾರಿಯ ಎರಡನೇ ಬಾರಿಗೆ ಆಡಳಿತ ಮಂಡಲಿಯ ಸದಸ್ಯರಾಗಿ ಆಯ್ಕೆಯಾಗಿದ್ದಾರೆ. ತಂದೆ ಶ್ರೀ ನಾರಾಯಣ. ತಾಯಿ ಶ್ರೀಮತಿ ರಾಧಾ. ವ್ಯವಸಾಯ ಹಾಗೂ ಮೀನಾಗಾರಿಕೆಯ ಸುಸಂಸ್ಕೃತ ಕುಟುಂಬ. ಕೋಟಾದಲ್ಲಿ ದಿನಾಂಕ 27–07–1967ರಲ್ಲಿ ಜನಿಸಿದವರು. ಕೋಟಾದಲ್ಲಿ ಪ್ರಾಥಮಿಕ ಹಾಗೂ ಮಾಧ್ಯಮಿಕ ಶಿಕ್ಷಣ. ಸರಳ ಸಜ್ಜನಿಕೆಯ ಸ್ವಭಾವದ ಶ್ರೀಯುತರು ತಮ್ಮ ಕಾಲೇಜು ವ್ಯಾಸಂಗವನ್ನು ಉಡುಪಿಯಲ್ಲಿ ಪೂರೈಸಿ ಬಿ.ಕಾಂ., ಎಲ್.ಎಲ್.ಬಿ. ಮಾಡಿಕೊಂಡು ವಕೀಲಿ ಹಾಗೂ ನೋಟರಿ ವೃತ್ತಿಯನ್ನು ಆಯ್ಕೆ ಮಾಡಿಕೊಂಡಿದ್ದಾರೆ. ಕಳೆದ 25 ವರ್ಷದಿಂದ ಸಹಕಾರ ಕ್ಷೇತ್ರದಲ್ಲಿ ಸೇವೆ ಮಾಡುತ್ತಿರುವ ಶ್ರೀಯುತರು ಮಹಾಲಕ್ಷ್ಮೀ ಅರ್ಬನ್ ಕೋಆಪರೇಟಿವ್ ಬ್ಯಾಂಕ್, ಮೀನುಗಾರರ ಸಹಕಾರ ಸಂಘ, ವ್ಯವಸಾಯ ಸೇವಾ ಸಹಕಾರ ಸಂಘ, ಉಡುಪಿಯ ವಕೀಲರ ಸಹಕಾರ ಸಂಘದಲ್ಲಿ ಉಪಾಧ್ಯಕ್ಷರಾಗಿ, ಜಿಲ್ಲಾ ಸಹಕಾರ ಯೂನಿಯನ್, ಉಡುಪಿ ಇದರ ನಿರ್ದೇಶಕರಾಗಿ ಹೀಗೆ ಹಲವಾರು ವಿಧದ ಸಹಕಾರಿ ಸಂಸ್ಥೆಗಳಲ್ಲಿ ನಿರ್ದೇಶಕರಾಗಿ, ಪದಾಧಿಕಾರಿಯಾಗಿ ಕಾರ್ಯನಿರ್ವಹಿಸಿದ ಅನುಭವ ಹೊಂದಿದ್ದಾರೆ. ಗುರುನರಸಿಂಹ ವಿವಿಧೋದ್ದೇಶ ಸೌಹಾರ್ದ ಸಹಕಾರಿ ನಿ., ಸಾಲಿಗ್ರಾಮ ಸಹಕಾರಿಯ ಪ್ರವರ್ತಕರಾಗಿ, ನಿರ್ದೇಶಕರಾಗಿ ಉಡುಪಿ ಜಿಲ್ಲೆಯ ಸೌಹಾರ್ದ ಸಹಕಾರಿಗಳ ಒಕ್ಕೂಟದ ಸ್ಥಾಪನೆಗೆ ಕಾರಣೀಕರ್ತರಾಗಿದ್ದಾರೆ.


ಸಹಕಾರವಲ್ಲದೇ ಶಿಕ್ಷಣ ಹಾಗೂ ಸಾಮಾಜಿಕ ಕ್ಷೇತ್ರಗಳಲ್ಲೂ ಸೇವೆ ಸಲ್ಲಿಸುವ ಪ್ರವೃತ್ತಿಯವರಾಗಿದ್ದಾರೆ. ಎಸ್.ಡಿ.ಎಮ್.ಸಿ. ಶಾಲೆಯ ಅಧ್ಯಕ್ಷರಾಗಿದ್ದಾರೆ. ಎನ್.ಜಿ.ಓ. ಗ್ರಾಮ ವಿಕಾಸ ಪ್ರತಿಷ್ಠಾನದ ಅಧ್ಯಕ್ಷರಾಗಿದ್ದಾರೆ. ರೋಟರಿ ಕ್ಲಬ್‌ನ ಪದಾಧಿಕಾರಿಯಾಗಿದ್ದಾರೆ. ಸಹಕಾರ ಕ್ಷೇತ್ರದಿಂದ ಬಡತನ ನಿರ್ಮೂಲನೆ ಸಾಧ್ಯ. ಯುವ ಜನಾಂಗದವರಿಗೆ ಆರ್ಥಿಕವಾಗಿ ಹಾಗೂ ಸಾಮಾಜಿಕವಾಗಿ ಬೆಳೆಯಲು ಮತ್ತು ಅವರಲ್ಲಿ ನಾಯಕತ್ವ ಬೆಳೆಸಿಕೊಳ್ಳಲು ಅವಕಾಶವಿದೆ.



## ಶ್ರೀಮತಿ ಭಾರತಿ ಜಿ. ಭಟ್

ಸಹಕಾರಿ ಕ್ಷೇತ್ರದಲ್ಲಿ 25 ವರ್ಷಗಳ ಅನುಭವ, ಸಹಕಾರ ಭಾರತಿಯಲ್ಲಿ ಜಿಲ್ಲೆ, ರಾಜ್ಯ ಮಹಿಳಾ ಪ್ರಮುಖ, ರಾಷ್ಟ್ರೀಯ ಕಾರ್ಯದರ್ಶಿಯಾಗಿ ಸೇವೆ, ಪ್ರಸ್ತುತ ರಾಷ್ಟ್ರೀಯ ಸಂಘಟನಾ ಸಮಿತಿ ಸದಸ್ಯೆ ಹಾಗೂ ರಾಷ್ಟ್ರೀಯ ಗ್ರಾಹಕರ ಪ್ರಕೋಷ್ಠದ ಸಂಚಾಲಕಿ National consumer cell exchange ಯಾಗೆ ಸೇವೆ.

ದಕ್ಷಿಣ ಕನ್ನಡ ಜಿಲ್ಲಾ ಗ್ರಾಹಕರ ಸಹಕಾರಿ ಸಂಘದಲ್ಲಿ (ಜನತಾ ಬಜಾರ್) 10 ವರ್ಷ ನಿರ್ದೇಶಕಿ ಹಾಗೂ ಉಪಾಧ್ಯಕ್ಷರಾಗಿ ಜವಾಬ್ದಾರಿ, Hopcoms ನಲ್ಲಿ ನಾಮನಿರ್ದೇಶಿತ ನಿರ್ದೇಶಕರಾಗಿ ಜವಾಬ್ದಾರಿ, ಭಾರತಿ ಟೂರಿಸಂ (ಮಲ್ಟಿಸ್ಟೇಟ್) ಡೆವೆಲಪ್‌ಮೆಂಟ್ ಸಹಕಾರಿ ಸೊಸೈಟಿಯಲ್ಲಿ ಅಧ್ಯಕ್ಷೆಯಾಗಿ ಜವಾಬ್ದಾರಿ. ಪ್ರಸ್ತುತ ಮಹಿಳಾ ಅಭ್ಯುದಯ ಸೌಹಾರ್ದ ಸಹಕಾರಿಯ ಅಧ್ಯಕ್ಷೆ ದಕ್ಷಿಣ ಕನ್ನಡ ಜಿಲ್ಲಾ ಸೌಹಾರ್ದ ಒಕ್ಕೂಟದ ನಿರ್ದೇಶಕಿ, ಭಾರತಿ ಟೂರಿಸಂ ನಿರ್ದೇಶಕಿ, ದಕ್ಷಿಣ ಕನ್ನಡ ಜೊಲ್ಲಾ ಉಡುಪಿ ಮಹಿಳಾ ಸಹಕಾರಿ ಬ್ಯಾಂಕಿನ ಅಧ್ಯಕ್ಷೆ, Simply desi self help products processing & marketing multistate cooperative society limited (Delhi) ಇದರ ಕರ್ನಾಟಕದಿಂದ ಪ್ರತಿನಿಧಿ ನಿರ್ದೇಶಕಿ ಹಾಗೂ ಸಂಯುಕ್ತ ಸಹಕಾರಿಯ ಆಡಳಿತ ಮಂಡಳಿಗೆ ಪ್ರಥಮ ಬಾರಿಗೆ ನಿರ್ದೇಶಕರಾಗಿ ಆಯ್ಕೆಯಾಗಿದ್ದಾರೆ.



## ಶ್ರೀ ರಾಮನಗೌಡ ಬಸವಗೌಡ ಪಾಟೀಲ (ಯತ್ನಾಳ)

ಶ್ರೀ ರಾಮನಗೌಡ ಬಸವಗೌಡ ಪಾಟೀಲ(ಯತ್ನಾಳ) ತಂದೆ ಶ್ರೀ ಬಸವಗೌಡ ರಾಮನಗೌಡ ಪಾಟೀಲ (ಯತ್ನಾಳ) ಜನನ 09.06.1994, ವಿದ್ಯಾರ್ಹತೆ M.S Operation, Project & Supply chain management, University of Manchester, United Kingdom(UK) BE(Bachelor of Engineering) KLSGIT, Visveshwaraya Technoligical University, India, ಕೃಷಿ, ಸಮಾಜಸೇವೆ, ಶಿಕ್ಷಣ ಹಾಗೂ ಸಹಕಾರಿ ಕ್ಷೇತ್ರದಲ್ಲಿ ಸೇವೆ. ನಿರ್ದೇಶಕರು, ಸಿದ್ಧಸಿರಿ ಸೌಹಾರ್ದ ಸಹಕಾರಿ ನಿ., ವಿಜಯಪುರ. ನಿರ್ದೇಶಕರು, ಶ್ರೀ ಸಿದ್ದೇಶ್ವರ ಸುಪರ ಬಝಾರ ಪಾ.ಲಿ.ವಿಜಯಪುರ. ನಿರ್ದೇಶಕರು, ಸಿದ್ಧಸಿರಿ ಶಿಥಲೀಕರಣ ಘಟಕ, ವಿಜಯಪುರ, ವ್ಯವಸ್ಥಾಪಕ ನಿರ್ದೇಶಕರು, ಶ್ರೀ ಸಿದ್ದೇಶ್ವರ ಲೋಕ ಕಲ್ಯಾಣ ಟ್ರಸ್ಟ್. ವಿಜಯಪುರ ಹಾಗೂ ಸಂಯುಕ್ತ ಸಹಕಾರಿಯ ಅತ್ಯಂತ ಕಿರಿಯ ನಿರ್ದೇಶಕರಾಗಿ ಪ್ರಥಮ ಬಾರಿಗೆ ಆಯ್ಕೆಯಾಗಿರುತ್ತಾರೆ.



## ಶ್ರೀ ಮೋಹನದಾಸ ಜೆ. ನಾಯಕ

ಶ್ರೀ ಸಂಯುಕ್ತ ಸಹಕಾರಿಯ ಬೆಳಗಾವಿ ವಿಭಾಗದ ನಿರ್ದೇಶಕರಾಗಿ ಆಯ್ಕೆಯಾಗಿರುವ ಶ್ರೀ ಮೋಹನದಾಸ ಜೆ ನಾಯಕ ಇವರ ಜನನ 01.03.1975, ಜನ್ಮ ಸ್ಥಳ ಅಂಕೋಲಾ, ಶಿಕ್ಷಣ Diploma in Electrical and electronics, & B.A ಪತ್ನಿ ಶ್ರೀಮತಿ ಶ್ವೇತಾ ಮೋಹನದಾಸ ನಾಯಕ, ಮಕ್ಕಳು ಇಬ್ಬರು, ವೃತ್ತಿ ಕೃಷಿ ಮತ್ತು ಬ್ಯಾಂಕಿಂಗ್ ವ್ಯವಹಾರ, ಹುದ್ದೆ ಜಿಲ್ಲಾಧ್ಯಕ್ಷರು ಸಹಕಾರ ಭಾರತಿ, ಉಪಾಧ್ಯಕ್ಷರು ಕೆ.ಡಿ.ಸಿ.ಸಿ ಬ್ಯಾಂಕ್ ಲಿ., ಶಿರಸಿ, ತಾಲ್ಲೂಕು ಅಧ್ಯಕ್ಷರು ಕದಂಬ ಸೈನ್ಯ. 2016ರಲ್ಲಿ ಪ್ರಾಥಮಿಕ ಶಿಕ್ಷಾ ವರ್ಗ (ರಾಷ್ಟ್ರೀಯ ಸ್ವಯಂ ಸೇವಾ ಸಂಘ), 1992ರಲ್ಲಿ ಎ.ಬಿ.ಬಿ.ಪಿ ಕಾರ್ಯದರ್ಶಿ, 2016–19 ರವರೆಗೆ ಬಿಜೆಪಿ ಸಹಕಾರಿ ಪ್ರಕೋಷ್ಠ ಜಿಲ್ಲಾ ಸಂಚಾಲಕ, 2021ರಿಂದ ಜಿಲ್ಲಾ ಸಹಕಾರ ಯೂನಿಯನ್ ನಿರ್ದೇಶಕರಾಗಿ ಸೇವೆ ಸಲ್ಲಿಸುತ್ತಿದ್ದಾರೆ.

**ಸೇವಾ ವೈಶಿಷ್ಟ್ಯಗಳು :**

ಕೆ.ಡಿ.ಸಿ.ಸಿ ಬ್ಯಾಂಕಿನ ನಿರ್ದೇಶಕರಾಗಿ ಸತತವಾಗಿ 2ನೇ ಬಾರಿಗೆ ಆಯ್ಕೆ. ದಿನಾಂಕ 20.11.2020 ರಿಂದ ಬ್ಯಾಂಕಿನ ಉಪಾಧ್ಯಕ್ಷರಾಗಿ ಸೇವೆ ಸಲ್ಲಿಸುತ್ತಿದ್ದಾರೆ. 2018ರಲ್ಲಿ ಸಹಕಾರ ಭಾರತೀಯ ಜಿಲ್ಲಾಧ್ಯಕ್ಷರಾಗಿ, 2008ರಲ್ಲಿ ಕದಂಬ ಸೈನ್ಯದ ತಾಲ್ಲೂಕು ಅಧ್ಯಕ್ಷರಾಗಿ ಶಿರಸಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಶ್ರೀ ವೆಂಕಟೇಶ್ವರ ಸೌಹಾರ್ದ ಸಹಕಾರ ನಿ., ಇದರ ನಿರ್ದೇಶಕರಾಗಿ 2004ರಿಂದ ಸೇವೆ. ಶಿರಸಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಅಮೂಲ್ಯ ಸೌಹಾರ್ದ ಸಹಕಾರಿ ನಿ., ಇದರ ಸಲಹೆಗಾರರಾಗಿ 2016ರಿಂದ ಸೇವೆ ಹಾಗೂ ಸಂಯುಕ್ತ ಸಹಕಾರಿಯ ಆಡಳಿತ ಮಂಡಳಿಗೆ ಪ್ರಥಮ ಬಾರಿಗೆ ನಿರ್ದೇಶಕರಾಗಿ ಆಯ್ಕೆಯಾಗಿದ್ದಾರೆ.



## ಶ್ರೀಮತಿ ಶೈಲಜಾ ವಿ ತಪಲಿ

ಸಂಯುಕ್ತ ಸಹಕಾರಿಯ ಕಲಬುರಗಿ ವಿಭಾಗದ ನಿರ್ದೇಶಕರಾಗಿ ಆಯ್ಕೆಯಾಗಿರುವ ಶ್ರೀಮತಿ ಶೈಲಜಾ ವಿ ತಪಲಿ ಜನನ 16–07–1965, ಜನ್ಮ ಸ್ಥಳ ಶಿವಮೊಗ್ಗ ಜಿಲ್ಲೆ, ಶಿಕಾರಿಪುರ ತಾಲ್ಲೂಕ, ತಾಯಿ ಶ್ರೀಮತಿ ಸುಶೀಲ ತಂದೆ ದಿ. ಶ್ರೀ ದೇವೇಂದ್ರಪ್ಪ ಗಂಡ ದಿ. ಶ್ರೀ ವೀರಪ್ಪ ತಪಲಿ, ಮದುವೆಯ ನಂತರ ಕಲಬುರಗಿಯಲ್ಲಿ ವಿವಿಧ ಸಹಕಾರ ಸಂಘ ಸಂಸ್ಥೆಗಳಲ್ಲಿ ವ್ಯವಸ್ಥಾಪಕರಾಗಿ ಕಾರ್ಯನಿರ್ವಹಿಸಿದ ಅನುಭವ.

ಸಹಕಾರ ಕ್ಷೇತ್ರದಲ್ಲಿ ಸೇವೆಯನ್ನು ಸಲ್ಲಿಸುವ ಸಲುವಾಗಿ 2008ರಲ್ಲಿ 400 ಜನ ಮಹಿಳಾ ಸದಸ್ಯರು ಹಾಗು 4 ಲಕ್ಷ ಷೇರು ಮೊತ್ತದೊಂದಿಗೆ ಪ್ರಾರಂಭಿಸಿದ "ಗುಲಬರ್ಗಾ ಮಹಿಳಾ ಸೌಹಾರ್ದ ಸಹಕಾರಿ ನಿ."ಬಡ ಹಾಗು ಮಧ್ಯಮ ವರ್ಗದ ಮಹಿಳೆಯರ ಆರ್ಥಿಕ ಸ್ವಾವಲಂಬನೆಗಾಗಿ, ಆರ್ಥಿಕ ಮತ್ತು ಸಾಮಾಜಿಕ ಅಭಿವೃದ್ಧಿಗಾಗಿ ಹಲವಾರು ಯೋಜನೆಗಳನ್ನು ರೂಪಿಸಿದೆ. ಸಹಕಾರಿ ಶಾಲುಗಳ ಹೆಣಿಕೆ ಹಾಗೂ ಸಹಕಾರಿ ಧ್ವಜಗಳ ಹೊಲಿಗೆಯನ್ನು ಸಹ ನೂರಾರು ಮಹಿಳೆಯರು ಮಾಡುತ್ತಿದ್ದಾರೆ.

ಸಮಾಜಮುಖಿ ಕಾರ್ಯ ನಿರ್ವಹಿಸುತ್ತ "ಉತ್ತಮ ಮಹಿಳಾ ಸಹಕಾರಿ" ಪ್ರಶಸ್ತಿ ಪುರಸ್ಕಾರ ದೊರೆತ್ತಿದೆ. ಸಂಯುಕ್ತ ಸಹಕಾರಿಯ ಆಡಳಿತ ಮಂಡಳಿಗೆ ಪ್ರಥಮ ಬಾರಿಗೆ ನಿರ್ದೇಶಕರಾಗಿ ಆಯ್ಕೆಯಾಗಿದ್ದಾರೆ.



## ಶ್ರೀ ರಘುರಾಮ ರೆಡ್ಡಿ

ಶ್ರೀಯುತರು ಪ್ರಥಮ ಬಾರಿಗೆ ಚಿತ್ರದುರ್ಗ ಜಿಲ್ಲೆಯ ಪ್ರತಿನಿಧಿಯಾಗಿ ಸಂಯುಕ್ತ ಸಹಕಾರಿಯ ನಿರ್ದೇಶಕರಾಗಿ ಆಯ್ಕೆಯಾಗಿದ್ದಾರೆ. ಜನನ 18.02.1972, ತಂದೆ ಶ್ರೀ ಎಸ್.ಆರ್ ಲಕ್ಷ್ಮೀಕಾಂತ ರೆಡ್ಡಿ, ವೃತ್ತಿ : ಕೃಷಿ ಮತ್ತು ವ್ಯವಹಾರ, ಪ್ರವೃತ್ತಿ : ಸಮಾಜ ಸೇವೆ, ಸಹಕಾರ ಕ್ಷೇತ್ರ,

ಚಿತ್ರದುರ್ಗ ಜಿಲ್ಲೆಯ ಮರ್ಚೆಂಟ್ಸ್ ಸೌಹಾರ್ದ ಸಹಕಾರಿಯ ನಿರ್ದೇಶಕರಾಗಿ ಸೇವೆ ಸಲ್ಲಿಸುತ್ತಿರುವ ಶ್ರೀಯುತರು ಸಹಕಾರ ಕ್ಷೇತ್ರದ ಕಾರ್ಯಚಟುವಟಿಕೆಗಳಲ್ಲಿ ಸಕ್ರೀಯವಾಗಿ ತೊಡಗಿಸಿಕೊಂಡಿದ್ದಾರೆ. ಸಹಕಾರ ತತ್ವಗಳ ಅನುಷ್ಠಾನದ ಮೂಲಕ ನಮ್ಮ ದೇಶದ ಆರ್ಥಿಕ ಅಭಿವೃದ್ಧಿಯಲ್ಲಿ ಉತ್ತಮ ಪಾತ್ರವನ್ನು ನಿರ್ವಹಿಸಬಹುದಾಗಿದೆ. ಯುವಕರಿಗೆ ಈ ಕ್ಷೇತ್ರದಲ್ಲಿ ಹೆಚ್ಚಿನ ಅವಕಾಶ ಇರಬೇಕು ಎಂಬ ಅಭಿಪ್ರಾಯದವರಾಗಿದ್ದಾರೆ.



## ಶ್ರೀ ಹೆಚ್. ಜೆ ಹನುಮಂತಯ್ಯ

ಅನುವಂಶಿಕವಾಗಿ ವ್ಯಾಪರದಲ್ಲಿ ತೊಡಗಿಸಿರುವ ತಂದೆಯವರು ಮಾಡಿದ ಸಾಮಾಜಿಕ ಸೇವೆ ಮಾಡುವುದು ಎಚ್.ಜೆ. ಹನುಮಂತಯ್ಯ ಯವರಿಗೂ ರಕ್ತಗತವಾಗಿ ಬಂದಿದ್ದು, ಅದೇ ರೀತಿ ತಮ್ಮ ವಿದ್ಯಾಭ್ಯಾಸವನ್ನು ಹಚ್ಚೊಳ್ಳಿ ಗ್ರಾಮದಲ್ಲಿ ಪ್ರಾಥ–ಮಿಕದಿಂದ ಹೈಸ್ಕೂಲ್ ಮಟ್ಟದವರೆಗೆ ನಡೆಸಿ ನಂತರ ಹೆಚ್ಚಿನ ವಿದ್ಯಾಭ್ಯಾಸಕ್ಕಾಗಿ ನಗರದ ವಿ.ಕೆ.ಜೆ. ಕಾಲೇಜಿನಲ್ಲಿ ಪಿ.ಯು.ಸಿ. ಮತ್ತು ಡಿ.ಫಾರ್ಮ ಕೋರ್ಸ ಮುಗಿಸಿದ ನಂತರ ತಮ್ಮ 18ನೇ ವಯಸ್ಸಿನಲ್ಲಿ ಕನ್ಸುಮರ್ ಪ್ರೊಡಕ್ಟ್‌ನಲ್ಲಿ ಹೋಲ್‌ಸೆಲ್ ಏಜೆನ್ಸಿಯಾಗಿ ವ್ಯಾಪಾರಕ್ಕೆ ದುಮುಕಿದಾಗಿನಿಂದ ಹಂತಹಂತವಾಗಿ ವ್ಯಾಪಾರದಲ್ಲಿ ಮುಂದುವರೆದು, ವ್ಯಾಪಾರದ ಜೊತೆಜೊತೆಗೆ ಸಮಾಜದ ಆರ್ಯವೈಶ್ಯ ಮಂಡಳಿಯಲ್ಲಿ ಯಾವುದೇ ಪದವಿ ಇಲ್ಲದಿದ್ದರೂ ದೇವಸ್ಥಾನದ ಅಭಿವೃದ್ದಿ, ವಾಸವಿ ಜಯಂತಿ, ನವರಾತ್ರಿ ಉತ್ಸವಗಳನ್ನು ಮಾಡುತ್ತಾ ಸಮಾಜದ ಹಿರಿಯರು ಇವರ ಸೇವೆಗೆ ಮೆಚ್ಚಿ 1998ರಲ್ಲಿ ಸಹಕಾರ್ಯದರ್ಶಿಯಾಗಿ ನೇಮಿಸಿದ್ದರಿಂದ ಹೆಚ್ಚಿನ ಉತ್ಸಾಹ ದಿಂದ ಅನೇಕ ಸಾಮಾಜಿಕ ಮತ್ತು ಸಮಾಜದ ಸೇವೆ ಮಾಡುತ್ತಾ ಬಂದಿದ್ದರಿಂದ ಇವರನ್ನು 2008ರಲ್ಲಿ ಅಧ್ಯಕ್ಷರಾಗಿ ಆಯ್ಕೆಮಾಡಿದ್ದಾರೆ. ಐದು ವರ್ಷ ಸೇವೆ ಪೂರ್ಣಗೊಳಿಸಿದ್ದರಿಂದ ನಂತರ 2016–19ರವರೆಗೆ ಪುನಃ ಅಧ್ಯಕ್ಷರಾಗಿ ಆಯ್ಕೆಯಾಗಿದ್ದಾರೆ.

1998ರಲ್ಲಿ ಆರ್ಯ ವೈಶ್ಯ ಮಂಡಳಿಯ ಸಹಕಾರ್ಯದರ್ಶಿ. 2005ರಲ್ಲಿ ಜ್ಞಾನ ಭಾರತಿ ವಿದ್ಯಾಸಂಸ್ಥೆಯ ಕಾರ್ಯದರ್ಶಿ. 2008ರಲ್ಲಿ ಆರ್ಯ ವೈಶ್ಯ ಮಂಡಳಿಯ ಅಧ್ಯಕ್ಷ. 2009ರಲ್ಲಿ ಕರ್ನಾಟಕ ಆರ್ಯ ವೈಶ್ಯ ಮಹಾಸಭಾದ ನಿರ್ದೇಶಕ. 2011 ರಿಂದ 2021ರವರೆಗೆ ಕರ್ನಾಟಕ ಆರ್ಯ ವೈಶ್ಯ ಮಹಾಸಭಾದ ರಾಜ್ಯ ಮಟ್ಟದ ಪ್ರತಿಭಾ ಪುರಸ್ಕಾರದ ಚೇರ್‌ಮೆನ್ ಆಗಿ ಆಯ್ಕೆ. 2016ರಲ್ಲಿ ಕರ್ನಾಟಕ ಆರ್ಯ ವೈಶ್ಯ ಮಹಾಸಭಾದ ವಿಭಾಗೀಯ ಕಾರ್ಯದರ್ಶಿ. 2019ರಲ್ಲಿ ಕರ್ನಾಟಕ ಸರ್ಕಾರದ ಆರ್ಯ ವೈಶ್ಯ ಸಮುದಾಯ ಅಭಿವೃದ್ದಿ ನಿಗಮದ ನಿರ್ದೇಶಕರಾಗಿ ಆಯ್ಕೆ. 2022ರಲ್ಲಿ ಕರ್ನಾಟಕ ಆರ್ಯವೈಶ್ಯ ಮಹಾಸಭಾದ ರಾಜ್ಯ ಪ್ರಧಾನ ಕಾರ್ಯದರ್ಶಿಯಾಗಿ ಆಯ್ಕೆ ಹಾಗೂ ಸಂಯುಕ್ತ ಸಹಕಾರಿಯ ಆಡಳಿತ ಮಂಡಳಿಗೆ ಪ್ರಥಮ ಬಾರಿಗೆ ನಿರ್ದೇಶಕರಾಗಿ ಆಯ್ಕೆಯಾಗಿದ್ದಾರೆ.



## ಶ್ರೀ ಸಿ.ಪಿ ವಿಜಯ್

ವಿಜಯ್ ಜನಿಸಿದ್ದು ಶ್ರೀ ಸಿದ್ದಗಂಗಾ ಬೆಟ್ಟದ ತಪ್ಪಲಿನಲ್ಲಿರುವ ಕ್ಯಾತಸಂದ್ರದಲ್ಲಿ, ವಿದ್ಯಾರ್ಥಿ ದಿಸೆಯಲ್ಲಿ ಶ್ರೀಕ್ಷೇತ್ರದೊಂದಿಗೆ ಅವಿನಾಭಾವ ಬಾಂಧ್ಯವ್ಯ ಬೆಳಸಿಕೊಂಡ ಆಸ್ತಿಕಜೀವಿ, ಜನನ 29.08.1974 ರಂದು ತಂದೆ, ಶ್ರೀ ಪಾಲಾಕ್ಷಯ್ಯ, ವೃತ್ತಿಯಲ್ಲಿ ಶಿಕ್ಷಕರು, ತಾಯಿ ಶ್ರೀಮತಿ ಶೈಲಜಾ, ಆದರ್ಶ ಗುಣಗಳ ಗೃಹಿಣಿ, ತುಮಕೂರಿನ ಹೆಸರಾಂತ ಶ್ರೀ ಸಿದ್ಧಗಂಗಾ ಫಾರ್ಮಸಿ ಕಾಲೇಜಿನಲ್ಲಿ ಡಿಪ್ಲೊಮಾ ಇನ್ ಫಾರ್ಮಸಿ ಶಿಕ್ಷಣ ಪಡೆದರು. ಅತ್ಯಂತ ಕಿರಿಯ ವಯಸ್ಸಿನಲಿಯೇ ಔಷಧಿ ಮಾರಾಟ ಮಳಿಗೆ ಆರಂಭಿಸಿದರು. ಕ್ಯಾತಸಂದ್ರದ ಬಿ.ಹೆಚ್. ರಸ್ತೆಯಲ್ಲಿ ಪ್ರಾರಂಭಗೊಂಡ ಪಿ.ಕೆ ಮೆಡಿಕಲ್ಸ್, ಅಂಗಡಿಯನ್ನು ಶ್ರೀ ಸಿದ್ದಗಂಗಾ ಮಠಾಧ್ಯಕ್ಷರಾಗಿದ್ದ ಡಾ.ಶ್ರೀ ಶಿವಕುಮಾರ ಮಹಾಸ್ವಾಮಿಗಳು ಉದ್ಘಾಟಿಸಿದಿರು. ಅಂದಿನಿಂದ ಜನಮುಖಿ ಸೇವಾ ಕಾರ್ಯಗಳನ್ನು ಜೊತೆ ಜೊತೆಯಲ್ಲೇ ನಡೆಸುತ್ತಾ 2009ರಲ್ಲಿ ಸನ್‌ರೈಸ್ ಸೌಹಾರ್ದ ಪತ್ತಿನ ಸಹಕಾರಿ ಸಂಘ ನಿ., ಪ್ರಾರಂಭಿಸಿದರು.

ಸನ್‌ರೈಸ್ ಸೌಹಾರ್ದ ಕೇವಲ 3 ಲಕ್ಷದಿಂದ ಪ್ರಾರಂಭಗೊಂಡು ಪ್ರಗತಿ ಪಥದಲ್ಲಿ ಮುನ್ನಡೆದು ವೈಭವಯುತವಾಗಿ ದಶಮಾನೋತ್ಸವವನ್ನು ಆಚರಿಸಿ ದಾಖಲೆಯನ್ನು ಸ್ಥಾಪಿಸಿದೆ. ಇದೀಗ 13ನೇ ವರ್ಷಕ್ಕೆ ಪಾದಾರ್ಪಣೆ ಮಾಡಿ 24 ಲಕ್ಷ ಲಾಭಗಳಿಸಿ ದಿಟ್ಟಹೆಜ್ಜೆ ಇಟ್ಟಿದೆ. ವಿಜಯ್ ಇವರು ಸಂಘದ ನಿರ್ದೇಶಕರುಗಳನ್ನು, ಸಿಬ್ಬಂದಿವರ್ಗದವರನ್ನು ವಿಶ್ವಾಸಕ್ಕೆ ತೆಗೆದುಕೊಂಡು ಸಂಸ್ಥೆಗೆ ಆಧಾರ ಸ್ತಂಭಗಳಾಗಿ ಇದ್ದಾರೆ.

ಶ್ರೀಯುತರ ವ್ಯಾಟ್ ಪೋ ಪ್ರವೇಟ್ ಲಿಮಿಟೆಡ್ ಪಾಲುದಾರರು, ತುಮಕೂರು ಜಿಲ್ಲಾ ಔಷಧ ವ್ಯಾಪಾರಿಗಳ ಸಂಘದ ನಿರ್ದೇಶಕರು, ತುಮಕೂರು ಜಿಲ್ಲಾ ಸೌಹಾರ್ದ ಒಕ್ಕೂಟದ ನಿರ್ದೇಶಕರು, ಶತಮಾನಕಂಡ ಕ್ಯಾತ್‌ಸಂದ್ರ ಸರ್ಕಾರಿ ಪ್ರೌಢ ಶಾಲಾ ಅಭಿವೃದ್ದಿ ಸಮಿತಿ ನಿರ್ದೇಶಕರು, ಸ್ಥಳೀಯ ಹಾಗೂ ನಗರದ ಹಲವು ಕ್ರೀಡಾ ಕಲಾ ಸಂಘಗಳ ಪೋಷಕ, ಜಿಲ್ಲಾ ಸೌಹಾರ್ದ ಒಕ್ಕೂಟದ (ಸಹಕಾರ ಭಾರತಿ) ಪ್ರಧಾನ ಕಾರ್ಯದರ್ಶಿಯಾಗಿ ಸೇವೆಯನ್ನು ಸಲ್ಲಿಸುತ್ತಿದ್ದಾರೆ.



## ಶ್ರೀ ಎಂ.ಆರ್ ಪ್ರಭುದೇವ್

ಶ್ರೀಯುತರು ಪ್ರಥಮ ಬಾರಿಗೆ ಸಂಯುಕ್ತ ಸಹಕಾರಿಯ ನಿರ್ದೇಶಕರಾಗಿ ಆಯ್ಕೆಯಾಗಿದ್ದಾರೆ. ಜನನ 06.05.1969, ತಂದೆ ಶ್ರೀ ಮಾಗನೂರು ರಾಜಶೇಖರ್, ತಾಯಿ ಸುಲೋಚನಾ ಎಂ.ಆರ್, ಶಿಕ್ಷಣ ಬಿ.ಇ (ಇಂಡಸ್ಟ್ರಿಯಲ್ ಪ್ರೊಡಕ್ಷನ್), ವೃತ್ತಿ : ಕೃಷಿ ಹಾಗೂ ವ್ಯಾಪರ, ಪ್ರವೃತ್ತಿ : ಸಹಕಾರ ಕ್ಷೇತ್ರ, ಶಿಕ್ಷಣ ಹಾಗೂ ಸಾಮಾಜಿಕ ಸೇವೆ.

ಜಿ.ಎಂ. ಸೌಹಾರ್ದ ಸಹಕಾರಿ ದಾವಣಗೆರೆ ಇದರಲ್ಲಿ ಉಪಾಧ್ಯಕ್ಷರಾಗಿ 2009 ರಿಂದಲೂ ಕಾರ್ಯನಿರ್ವಹಿಸುತ್ತಿದ್ದಾರೆ. ದಾವಣಗೆರೆ ಜಿಲ್ಲೆಯಲ್ಲಿ ಉತ್ತಮ ಸೌಹಾರ್ದ ಸಹಕಾರಿಯಾಗಿ ಉತ್ತಮವಾಗಿ ಕಾರ್ಯನಿರ್ವಹಿಸುವಂತಾಗಿರುವುದರಲ್ಲಿ ಇವರ ಶ್ರಮ ಗಮನಾರ್ಹವಾಗಿದೆ. ಜಿ.ಎಂ ಶುಗರ್ ಆಂಡ್ ಎಜರ್ಜಿ ಲಿಮಿಡೆಟ್ ದಾವಣಗೆರೆ ಇದರ ನಿರ್ದೇಶಕರಾಗಿ ಜಿ.ಇ.ಎಂ ಫುಡ್‌ಪಾರ್ಕ್ ನಿರ್ದೇಶಕರಾಗಿ ಜಿ.ಎಂ ಹಾಲಮ್ಮ ಪಿ.ಯು ಕಾಲೇಜಿನ ಸಲಹಾ ಸಮಿತಿ ಸದಸ್ಯರಾಗಿ ಕಾರ್ಯನಿರ್ವಹಿಸುತ್ತಿದ್ದಾರೆ.

ರೋಟರಿ ಕ್ಲಬ್ ದಾವಣಗೆರೆಯಲ್ಲಿ ಸಕ್ರೀಯ ಸದಸ್ಯರಾಗಿ ಅನೇಕ ಧಾರ್ಮಿಕ ಸಂಸ್ಥೆಗಳಲ್ಲಿ ಕ್ರೀಯಾಶೀಲರಾಗಿ ತೊಡಗಿಸಿಕೊಂಡಿದ್ದಾರೆ. ಶಿಕ್ಷಣ ಸಂಸ್ಥೆಗಳಲ್ಲಿ ಪದಾಧಿಕಾರಿಯಾಗಿ ತೊಡಗಿಸಿಕೊಂಡಿದ್ದಾರೆ.



## ಶ್ರೀ ಮಲ್ಲಿಕಾರ್ಜುನ ಅಜ್ಜಪ್ಪ ಹೊರಕೇರಿ

ಶ್ರೀ ಮಲ್ಲಿಕಾರ್ಜುನ ಅಜ್ಜಪ್ಪ ಹೊರಕೇರಿ ಶ್ರೀಯುತರು ಪ್ರಥಮ ಬಾರಿಗೆ ಸಂಯುಕ್ತ ಸಹಕಾರಿಯ ನಿರ್ದೇಶಕರಾಗಿ ಆಯ್ಕೆಯಾಗಿದ್ದಾರೆ. ಜನನ 22.07.1969, ವಿದ್ಯಾರ್ಹತೆ ಎಂ.ಎ, ವೃತ್ತಿ : ಸಹಕಾರ ಶಿಕ್ಷಣ, ರಾಜಕೀಯ, ಕ್ಷೇತ್ರ ಸಾಂಸ್ಕೃತಿಕ ಸಾಮಾಜಿಕ, ಆರೋಗ್ಯ, ಬ್ಯಾಂಕಿಂಗ್, ಕೌಶಲ್ಯ ತರಬೇತಿ,

ಶ್ರೀಯುತರು ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕಿನ ಅಧ್ಯಕ್ಷರು, ಕೃಷಿ ಪತ್ತಿನ ಸಹಕಾರಿ ಸಂಘದ ಅಧ್ಯಕ್ಷರು, ಮಲ್ಲಿಕಾರ್ಜುನ ಸೌಹಾರ್ದ ಸಹಕಾರಿಯ ನಿರ್ದೇಶಕರು, ಮಾಜಿ ಮಹಾನಗರ ಪಾಲಿಕೆ ಸದಸ್ಯರಾಗಿ ಕಾರ್ಯನಿರ್ವಹಿಸಿರುತ್ತಾರೆ.

ಸಾಧನೆ : ಡಿಸಿಸಿ ಬ್ಯಾಂಕ್ ಧಾರವಾಡ ಇದರ ಅಧ್ಯಕ್ಷರಾಗಿ ದೇಶದಲ್ಲಿಯೇ ನಂ.1 ಶಿಕ್ಷಣ ಸಂಸ್ಥೆ ಪ್ರಾರಂಭ ಮಾಡುವುದರ ಮುಖಾಂತರ ಬಡ, ರೈತ ಮಕ್ಕಳಿಗೆ ಶಿಕ್ಷಣದಲ್ಲಿ ಸಾಧನೆ, ಮಹಿಳಾ ಸ್ವ-ಸಹಾಯ ಸಂಘಗಳ ರಚನೆ. ಶ್ರೀಯುತರಿಗೆ ಭಾರತ ಸರಕಾರ ನೀಡುವ ನೇಪೆಡ್ ಇನ್ಸ್ಟೂಟ ಬಾಂಬೆ ಇವರಿಂದ ಪ್ರಶಸ್ತಿ ದೂರಕಿದೆ. ಶ್ರೀಯುತರು ನವೋದಯ ಕಾನ್ವೆಂಟ್ ಮತ್ತು ಪ್ರೌಢಶಾಲೆ ನವನಗರ, ಅಮರಗೋಳ, ನವೋದಯ ಸ್ಕೂಲ್ ಆಫ್ ಬ್ಯಾಂಕಿಂಗ್ ತರಬೇತಿ ಸಂಸ್ಥೆ ನವೋದಯ ಕೌಶಲ್ಯ ತರಬೇತಿ ಕೇಂದ್ರ, ಸಿದ್ದೇಶ್ವರ ಗ್ರಾಮೀಣ ಅಭಿವೃದ್ಧಿ ಸಮಿತಿ ಪ್ರಾರಂಭಿಸಿ ಸೇವೆ ಸಲ್ಲಿಸುತ್ತಿದ್ದಾರೆ.

**ಬೆಳಗಾವಿ :** ದಿನಾಂಕ 09 ಜುಲೈ 2022ರ ಶನಿವಾರದಂದು ಮಹಾಂತ ಭವನ ಮಹಾಂತೇಶ ನಗರ ಬೆಳಗಾವಿ ಇಲ್ಲಿ ಬೆಳಗಾವಿ ಪ್ರಾಂತದ 441(ನಿ), ದಾವಾ ಪಂಚಾಯತ ನ್ಯಾಯಾಲದ 2022-25 ರ ಸಾಲಿಗೆ ನೂತನವಾಗಿ ಆಯ್ಕೆಗೊಂಡಿರುವ ಗೌರವ ಮಧ್ಯಸ್ಥಗಾರರ ತರಬೇತಿಯನ್ನು ಆಯೋಜಿಸಲಾಗಿತ್ತು. ಕಾರ್ಯಕ್ರಮದ ಅತಿಥಿಗಳಾಗಿ ಮಾನ್ಯ ಉಪಪ್ರಧಾನ ವ್ಯವಸ್ಥಾಪಕರಾದ ಶ್ರೀ ಶ್ರೀಕಾಂತ ಬರುವೆ, ಮಾನ್ಯ ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ಬಸವರಾಜ ಹೊಂಗಲ ಹಾಗೂ ಸಂಪನ್ಮೂಲ ವ್ಯಕ್ತಿಗಳಾದ ಶ್ರೀ ಎಸ್.ಜಿ.ಜೋಶಿ ಇವರುಗಳು ಉಪಸ್ಥಿತರಿದ್ದರು.


ಸದರಿ ಕಾರ್ಯಕ್ರಮದಲ್ಲಿ ಸಂಪನ್ಮೂಲ ವ್ಯಕ್ತಿಗಳಾದ ಶ್ರೀ ಎಸ್.ಜಿ.ಜೋಶಿ ಇವರು ಸೌಹಾರ್ದ ಸಹಕಾರಿಗಳ ವಿವಾದಗಳ ಇತ್ಯರ್ಥಗಳ ಕುರಿತಾದ ವಿಷಯಗಳ ಬಗ್ಗೆ ಗೌರವ ಮಧ್ಯಸ್ಥಗಾರರಿಗೆ ತರಬೇತಿಯನ್ನು ನೀಡಿರುತ್ತಾರೆ.

ಕಾರ್ಯಕ್ರಮದಲ್ಲಿ 441 ದಾವಾ ಪಮಚಾಯತ್ ನ್ಯಾಯಾಲಯದ ಸಿಬ್ಬಂದಿಗಳು ಹಾಗೂ ಪ್ರಾಂತೀಯ ಕಚೇರಿಯ ಸಿಬ್ಬಂದಿಗಳು ಉಪಸ್ಥಿತ-ರಿದ್ದರು. ಕಾರ್ಯಕ್ರಮದಲ್ಲಿ 158 ಗೌರವ ಮಧ್ಯಸ್ಥಗಾರರು ಉಪಸ್ಥಿತರಿದ್ದರು.

**ಹಾವೇರಿ :** ಸಹಕಾರ ಭಾರತಿ ವತಿಯಿಂದ ದಿನಾಂಕ 28 ಜೂನ್ 2022 ರಂದು ಧಾರವಾಡ, ಗದಗ ಹಾಗೂ ಹಾವೇರಿ ಜಿಲ್ಲೆಯ ಪ್ರಾಥಮಿಕ ಸಹಕಾರಿ ಸಂಘಗಳ ಅಧ್ಯಕ್ಷರು ಹಾಗೂ ಮುಖ್ಯಕಾರ್ಯನಿರ್ವಾಹಕರುಗಳಿಗಾಗಿ ಹಮ್ಮಿಕೊಂಡ ಪ್ಯಾಕ್ಸ ಸಮಾವೇಶದಲ್ಲಿ ಸಂಯುಕ್ತ ಸಹಕಾರಿಯ ನಿರ್ದೇಶಕರಾದ ಸನ್ಮಾನ್ಯ ಶ್ರೀ ಎಂ.ಬಿ.ಕಲಾಲ ಇವರಿಗೆ ಸನ್ಮಾನಿಸಲಾಯಿತು.

ಈ ಸಂದರ್ಭದಲ್ಲಿ ಶ್ರೀ ಬಿ.ಹೆಚ್.ಕೃಷ್ಣಾರೆಡ್ಡಿ, ಮಾನ್ಯ ಅಧ್ಯಕ್ಷರು, ಸಂಯುಕ್ತ ಸಹಕಾರಿ, ಬೆಂಗಳೂರು ಹಾಗೂ ಶ್ರೀ ಮಲ್ಲಿಕಾರ್ಜುನ ಹೊರಕೇರಿ, ಮಾನ್ಯ ಅಧ್ಯಕ್ಷರು ಧಾರವಾಡ ಜಿಲ್ಲಾ ಸೌಹಾರ್ದ ಸಹಕಾರಿಗಳ ಒಕ್ಕೂಟ ಹಾಗೂ ಸನ್ಮಾನ್ಯ ಸಂಯುಕ್ತ ಸಹಕಾರಿಯ ಮಾಜಿ ಅಧ್ಯಕ್ಷರು ಶ್ರೀ ಸತೀಶ್ಚಂದ್ರ ಹಾಗೂ ಸಹಕಾರ ಭಾರತಿಯ ಶ್ರೀ ರಮೇಶ ವೈದ್ಯ ಹಾಗೂ ಕೆ.ಡಿ.ಸಿ.ಸಿ ಬ್ಯಾಂಕ ಉಪಾಧ್ಯಕ್ಷರಾದ ಮೋಹನ ನಾಯ್ಕ ಅವರು ಉಪಸ್ಥಿತರಿದ್ದರು.

## ನೂತನ ಅಧ್ಯಕ್ಷರಾದ ಶ್ರೀ ಜಿ ನಂಜನಗೌಡ ಹಾಗು ಉಪಾಧ್ಯಕ್ಷರಾದ ಶ್ರೀ ಎ ಆರ್ ಪ್ರಸನ್ನ ಕುಮಾರ್‌ರವರಿಗೆ ಅಭಿನಂದನೆ



ಸಂಯಕ್ತ ಸಹಕಾರಿಯ ಆಡಳಿತ ಮಂಡಲಿ ಸಭೆಯಲ್ಲಿ ಸಂಯುಕ್ತ ಸಹಕಾರಿಯ ನೂತನ ಅಧ್ಯಕ್ಷರಾಗಿ ಆಯ್ಕೆಗೊಂಡ ಶ್ರೀ ಜಿ ನಂಜನಗೌಡರವರನ್ನು ಹಾಗೂ ಉಪಾಧ್ಯಕ್ಷರಾಗಿ ಆಯ್ಕೆಯಾಗಿರುವ ಶ್ರೀ ಎ ಆರ್ ಪ್ರಸನ್ನ ಕುಮಾರ್ ಇವರನ್ನು ಅಭಿನಂದಿಸಲಾಯಿತು. ಸಂಯುಕ್ತ ಸಹಕಾರಿಯ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ ಪಾಟೀಲರವರು ಸ್ವಾಗತ ಮಾಡಿದರು. ಸಂಯಕ್ತ ಸಹಕಾರಿಯ ಆಡಳಿತ ಮಂಡಲಿ ಸಭೆಯಲ್ಲಿ ಸಂಯುಕ್ತ ಸಹಕಾರಿಯ ನೂತನ ಅಧ್ಯಕ್ಷರಾಗಿ ಆಯ್ಕೆಗೊಂಡ ಶ್ರೀ ಜಿ ನಂಜನಗೌಡರವರನ್ನು ಹಾಗೂ ಉಪಾಧ್ಯಕ್ಷರಾಗಿ ಆಯ್ಕೆಯಾಗಿರುವ ಶ್ರೀ ಎ ಆರ್ ಪ್ರಸನ್ನ ಕುಮಾರ್ ಇವರನ್ನು ಅಭಿನಂದಿಸಲಾಯಿತು.

ಸಂಯುಕ್ತ ಸಹಕಾರಿಯ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ ಪಾಟೀಲರವರು ಸ್ವಾಗತ ಮಾಡಿದರು. ನಿಕಟಪೂರ್ವ ಅಧ್ಯಕ್ಷರುಗಳಾದ ಶ್ರೀ ಬಿ ಹೆಚ್ ಕೃಷ್ಣಾರೆಡ್ಡಿ ಹಾಗೂ ಶ್ರೀ ಗುರುನಾಥ ಜ್ಯಾಂತೀಕರರವರು ಮಾತನಾಡಿ ಸಂಯುಕ್ತ ಸಹಕಾರಿಯು ಹಿರಿಯ ಸಹಕಾರಿಗಳ ಶ್ರಮದ ಫಲವಾಗಿ ಈ ಒಂದು ಮಟ್ಟಕ್ಕೆ ಬೆಳೆದಿದೆ. ಇದನ್ನು ಬೆಳಸಿಕೊಂಡು, ಉಳಿಸಿಕೊಂಡು ಹೊಗುವ ಜವಾಬ್ದಾರಿ ಹೊಸ ಆಡಳಿತ ಮಂಡಲಿಗೆ ಇದೆ. ಇದನ್ನು ಸಮರ್ಪಕವಾಗಿ ನಿರ್ವಹಿಸುತ್ತಾರೆಂಬ ಭರವಸೆ ಇದೆ. ಆಡಳಿತ ಮಂಡಲಿ ಜೊತೆಗೆ ಸಹಕರಿಸುತ್ತೇವೆಂದು ತಿಳಿಸುತ್ತಾ ನೂತನ ಅಧ್ಯಕ್ಷರು ಹಾಗು ಉಪಾಧ್ಯಕ್ಷರನ್ನು ಅಭಿನಂದಿಸಿದರು.

**ಎಲ್ಲರ ಸಹಕಾರ ನಿರೀಕ್ಷೆ – ಶ್ರೀ ಜಿ ನಂಜನಗೌಡ**

ಅಭಿನಂದನೆ ಸ್ವೀಕರಿಸಿ ಮಾತನಾಡಿದ ನೂತನ ಅಧ್ಯಕ್ಷರಾದ ಶ್ರೀ ಜಿ ನಂಜನಗೌಡರವರು ಈ 21 ವರ್ಷಗಳಲ್ಲಿ ಅನೇಕ ಹಿರಿಯ ಸಹಕಾರಿಗಳ ಶ್ರಮದಿಂದ ಸೌಹಾರ್ದ ಸಹಕಾರಿ ಕ್ಷೇತ್ರ ಹಾಗು ಸಂಯುಕ್ತ ಸಹಕಾರಿ ಉತ್ತಮವಾಗಿ ಬೆಳೆದಿದೆ. ಇದನ್ನು ಇನ್ನೂ ಉತ್ತಮವಾಗಿಸಲು ಗುಣಮಟ್ಟ ವರ್ದಿಸಲು ನಾವು ಹಮ್ಮಿಕೊಳ್ಳುವ ಎಲ್ಲಾ ಕಾರ್ಯಕ್ರಮಗಳಿಗೆ ಆಡಳಿತ ಮಂಡಲಿ ಹಾಗು ಸಿಬ್ಬಂದಿಯವರು ಕೂಡಿಕೊಂಡು ನಿರೀಕ್ಷೆಯಂತೆ ಕಾರ್ಯನಿರ್ವಹಿಸುತ್ತೇವೆ ಎಮದು ತಿಳಿಸಿದರು.

**ನಿರೀಕ್ಷೆಯಂತೆ ಕಾರ್ಯನಿರ್ವಹಿಸಲು ಶ್ರಮಿಸುತ್ತೇವೆ – ಶ್ರೀ ಎ ಆರ್ ಪ್ರಸನ್ನ ಕುಮಾರ್**

ಉಪಾಧ್ಯಕ್ಷರಾಗಿ ಆಯ್ಕೆಯಾಗಿರುವ ಶ್ರೀ ಎ ಆರ್ ಪ್ರಸನ್ನ ಕುಮಾರ್ ರವರು ಮಾತನಾಡಿ ಅವಿರೋಧವಾಗಿ ತಮ್ಮನ್ನು ಆಯ್ಕೆ ಮಾಡಿರುವುದಕ್ಕಾಗಿ ಆಡಳಿತ ಮಂಡಲಿಯವರಿಗೆ ಕೃತಜ್ಞತೆ ಸಲ್ಲಿಸುತ್ತಾ, ಸೌಹಾರ್ದ ಸಹಕಾರಿಯ ಕಾಯ್ದೆಯ ಆಶಯ ಹಾಗು ಸಹಕಾರಿಗಳ ಆಶಯಗಳಿಗೆ ತಕ್ಕಂತೆ ಸೌಹಾರ್ದ ಸಹಕಾರಿ ಕ್ಷೇತ್ರದ ಕಾರ್ಯವನ್ನು ಹೆಚ್ಚಿಸುವ ಕಾರ್ಯದಲ್ಲಿ ಎಲ್ಲಾ ಆಡಳಿತ ಮಂಡಲಿಯವರ ಹಾಗು ಸಿಬ್ಬಂದಿಯವರ ಸಹಯೋಗದೊಂದಿಗೆ ಕಾರ್ಯನಿರ್ವಹಿಸುತ್ತೇವೆ. ಎಲ್ಲರೂ ಸಹಕಾರ ಅಗತ್ಯ ಎಂದು ತಿಳಿಸಿದರು. ಸಂಯುಕ್ತ ಸಹಕಾರಿಯ ಉಪಪ್ರಧಾನ ವ್ಯವಸ್ಥಾಪಕರಾದ ಶ್ರೀ ನಾರಾಯಣ ಹೆಗಡೆರವರು ವಂದನಾರ್ಪಣೆ ಮಾಡಿದರು.



## ಸಹಕಾರ ಸಚಿವರಾದ ಶ್ರೀ ಎಸ್.ಟಿ ಸೋಮಶೇಖರ ಇವರ ಭೇಟಿ

**ಬೆಂಗಳೂರು :** ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು ಇದರ ನೂತನ ಅಧ್ಯಕ್ಷರಾದ ಶ್ರೀ ಜಿ ನಂಜನಗೌಡರವರು ಮತ್ತು ಉಪಾಧ್ಯಕ್ಷರಾದ ಶ್ರೀ ಎ ಆರ್ ಪ್ರಸನ್ನಕುಮಾರ್ ರವರು ಹಾಗೂ ನಿರ್ದೇಶಕರಾದ ಶ್ರೀ ಗುಂಡುರಾವ್ ಇವರು ಮಾನ್ಯ ಸಹಕಾರ ಸಚಿವರಾದ ಶ್ರೀ ಎಸ್ ಟಿ ಸೋಮಶೇಖರ್ ರವರನ್ನು ಭೇಟಿ ಮಾಡಿದರು. ಈ ಸಂದರ್ಭದಲ್ಲಿ ಸಹಕಾರ ಭಾರತೀಯ ರಾಜ್ಯ ಅಧ್ಯಕ್ಷರಾದ ಶ್ರೀ ರಾಜಶೇಖರ ಶೀಲವಂತ ಹಾಗೂ ಶ್ರೀ ರಮೇಶ ವೈದ್ಯ ಉಪಸ್ಥಿತರಿದ್ದರು..

# ಯಶಸ್ವಿಯಾಗಿ ಅಧಿಕಾರಾವಧಿ ಪೂರೈಸಲು ಸಹಕರಿಸಿದವರಿಗೆಲ್ಲ ಹೃತ್ಪೂರ್ವಕ ಕೃತಜ್ಞತೆಗಳು

**ಬಿ.ಹೆಚ್.ಕೃಷ್ಣಾರೆಡ್ಡಿ,**
ಮಾಜಿ ಅಧ್ಯಕ್ಷರು, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು.

ಕರ್ನಾಟಕ ರಾಜ್ಯ ಸೌಹಾರ್ದ ಸಹಕಾರಿಯ ಆಡಳಿತ ಮಂಡಳಿಯ ಚುನಾವಣೆ 2017 ರಲ್ಲಿ ನಡೆದು ನನ್ನನ್ನು ಅಧ್ಯಕ್ಷನನ್ನಾಗಿ ಹಾಗೂ ನನ್ನ ಜೊತೆಗೆ ಶ್ರೀ ಜಗದೀಶ ಕವಟಗಿಮಠ ಇವರನ್ನು ಉಪಾಧ್ಯಕ್ಷನನ್ನಾಗಿ ಆಯ್ಕೆ ಮಾಡಿದ ಆಡಳಿತ ಮಂಡಳಿಗೆ ಹಾಗೂ ಸೇವೆಗೆ ಅವಕಾಶ ಮಾಡಿಕೊಟ್ಟದ್ದಾಕ್ಕಾಗಿ ರಾಜ್ಯದ ಸೌಹಾರ್ದ ಸಹಕಾರಿಗಳಿಗೆ ಪ್ರಪ್ರಥಮ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ.

ಈ 5 ವರ್ಷಗಳ ಅವಧಿಯಲ್ಲಿ ರಾಜ್ಯದ ಸೌಹಾರ್ದ ಸಹಕಾರಿ ಕ್ಷೇತ್ರದ ಅಭಿವೃದ್ಧಿಗೆ ಹಲವಾರು ಸವಾಲುಗಳನ್ನು ಸಮಸ್ಯೆಗಳನ್ನು ಎದುರಿಸಿರುವುದು ತಮಗೆ ತಿಳಿದಿದೆ ಎಂದು ಭಾವಿಸಿದ್ದೇನೆ. ವಿಶೇಷವಾಗಿ ಸೌಹಾರ್ದ ಸಹಕಾರಿ ಕಾಯ್ದೆಯ ತಿದ್ದುಪಡಿ, ಆದಾಯ ತೆರಿಗೆ ವಿಷಯಗಳು ಮತ್ತು ಸಂಯುಕ್ತ ಸಹಕಾರಿಯ ಕಾರ್ಯಚಟುವಟಿಕೆಗಳ ಗುಣಮಟ್ಟ ಸುಧಾರಣೆ ವಿಶೇಷವಾಗಿ ಶಾಸನಬದ್ಧ ಕಾರ್ಯಚಟುವಟಿಕೆಗಳ ನಿರ್ವಹಣೆ ಗುಣಾತ್ಮಕ ತರಬೇತಿ ಕಾರ್ಯಕ್ರಮಗಳ ನಿರ್ವಹಣೆ ಹೀಗೆ ಹತ್ತಾರು ವಿಷಯಗಳ ಬಗ್ಗೆ ವಿಶೇಷ ಗಮನ ಹರಿಸಿ ಯಶಸ್ವಿಯಾಗಿ ಕಾರ್ಯನಿರ್ವಹಿಸಿದ ತೃಪ್ತಿ ನನಗಿದೆ.

ಈ ಅವಧಿಯಲ್ಲಿ ರಾಜ್ಯದ ಸನ್ಮಾನ್ಯ ಮುಖ್ಯ ಮಂತ್ರಿಗಳಾದ ಶ್ರೀ ಬಸವರಾಜ ಬೊಮ್ಮಾಯಿಯವರು ಸಹಕಾರ ಮಂತ್ರಿಗಳಾದ ಶ್ರೀ ಎಸ್.ಟಿ ಸೋಮಶೇಖರವರು, ಅವರ ಮಂತ್ರಿಮಂಡಳದ ಸದಸ್ಯರು, ಶಾಸಕರು, ಸಂಸದರು, ವಿಧಾನ ಪರಿಷತ ಸದಸ್ಯರು, ಹಿರಿಯ ಸಹಕಾರಿಗಳು, ಸಹಕಾರಿ ಇಲಾಖೆಯ ನಿಬಂಧಕರು ,ಹಿರಿಯ ಅಧಿಕಾರಿಗಳು ನೀಡಿದ ಮಾರ್ಗದರ್ಶನದಂತೆ ಅವರ ಪ್ರೋತ್ಸಾಹದಂತೆ ಕೆಲಸ ನಿರ್ವಹಿಸಿದ್ದೇನೆ. ಅವರೆಲ್ಲರಿಗೂ ನಾನು ಕೃತಜ್ಞತೆಯನ್ನು ಸಲ್ಲಿಸುತ್ತೇನೆ.

ವಿಶೇಷವಾಗಿ ಸಂಯುಕ್ತ ಸಹಕಾರಿಯ ಉಪಾಧ್ಯಕ್ಷರು, ಆಡಳಿತ ಮಂಡಳಿ ಸದಸ್ಯರು, ವ್ಯವಸ್ಥಾಪಕ ನಿರ್ದೇಶಕರು ಹಿರಿಯ ಅಧಿಕಾರಿಗಳು, ಎಲ್ಲ ಜಿಲ್ಲೆಗಳ ಜಿಲ್ಲಾ ಸಂಯೋಜಕರು, ಕೇಂದ್ರ ಕಛೇರಿಯ ಹಾಗೂ ಎಲ್ಲ ವಿಭಾಗೀಯ ಕಛೇರಿಗಳ ಸಿಬ್ಬಂದಿಗಳಿಗೆ ಅವರು ನೀಡಿದ ಸಹಕಾರಕ್ಕೆ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ. ಈ ಅವಧಿಯಲ್ಲಿ ಯಾವ ಸಿಬ್ಬಂದಿಯ ಮನಸ್ಸು ನೋಯಿಸುವಂತಹ ಕೆಲಸವನ್ನು ನಾನು ಮಾಡಿರುವುದಿಲ್ಲ ಎಂದು ನಾನು ತಿಳಿದಿದ್ದೇನೆ. ಆದರೂ ಅಕಾಸ್ಮಾತ್ತಾಗಿ ಕೆಲಸದ ಆತುರದಲ್ಲಿ ಯಾವುದೇ ಸಿಬ್ಬಂದಿಯವರಿಗೆ ನನ್ನ ನಡೆಯಿಂದ ನೊವಾಗಿದ್ದರೆ ಕ್ಷಮೆ ಇರಲಿ.

**ಸ್ನೇಹಿತರೆ,**

ಸೌಹಾರ್ದ ಸಹಕಾರಿ ಕ್ಷೇತ್ರ ಅಭಿವೃದ್ಧಿಯತ್ತ ಸಾಗುವಲ್ಲಿ ಸಾಕಷ್ಟು ಕಾರ್ಯಗಳನ್ನು ನಿರ್ವಹಿಸಲಾಗಿದೆ. ಸಂಯುಕ್ತ ಸಹಕಾರಿಯ ನಡೆ ಗುಣಮಟ್ಟದ ಕಡೆಗೆ ಎಂಬ ಧ್ಯೇಯ ವಾಕ್ಯದೊಂದಿದೆ ರಾಜ್ಯದಾದ್ಯಂತ ಸುಮಾರು 6-7 ಬಾರಿ ಪ್ರವಾಸ ಮಾಡಿ ಸಹಕಾರಿಗಳಿಗೆ ಮಾರ್ಗದರ್ಶನ ಮಾಡಿದ ನೆಮ್ಮದಿ ನನಗಿದೆ. ಸ್ವತಃ ನಾನು 1000 ಕ್ಕಿಂತಲೂ ಹೆಚ್ಚಿನ ಸಹಕಾರಿಗಳಿಗೆ ಭೇಟಿ ನೀಡಿದ್ದೇನೆ. ಎಲ್ಲ ಜಿಲ್ಲೆಗಳಲ್ಲಿ ಸಮಾಲೋಚನಾ ಸಭೆಗಳನ್ನು ಮಾಡಿದ್ದೇನೆ. ಸಂಪರ್ಕ ಸಭೆಗಳನ್ನು ಮಾಡಿದ್ದೇನೆ. ಪತ್ರಿಕಾಗೋಷ್ಠಿಗಳನ್ನು ಪ್ರತಿ ವರ್ಷವೂ ಮಾಡುತ್ತ ಬಂದಿದ್ದೇನೆ. ಸೌಹಾರ್ದ ಸಹಕಾರಿ ಕ್ಷೇತ್ರದ ಬಗ್ಗೆ ಹಲವರು ನಕಾರಾತ್ಮಕ ಅಂಶಗಳ ಬಗ್ಗೆ ಅಪಪ್ರಚಾರಗಳನ್ನು ಸಕಾರಾತ್ಮಕವಾಗಿ ಪರಿವರ್ತನೆ ಮಾಡುವ ಕೆಲಸ ಮಾಡಿದ್ದೇನೆ. ರಾಜ್ಯದ ಸೌಹಾರ್ದ ಸಹಕಾರಿ ಕ್ಷೇತ್ರದ ವೈಶಿಷ್ಠತೆಗಳನ್ನು ಹಾಗೂ ಸಂಯುಕ್ತ ಸಹಕಾರಿಯ ವೈಶಿಷ್ಠತೆಗಳನ್ನು ರಾಷ್ಟ್ರಮಟ್ಟದಲ್ಲಿ ಪರಿಚಯಿಸಿ ಈ ಕ್ಷೇತ್ರವನ್ನು ಅಧ್ಯಯನ ಯೋಗ್ಯ ಕ್ಷೇತ್ರವನ್ನಾಗಿಸುವ ಕೆಲಸ ಮಾಡಿದ್ದೇನೆ. ರಾಷ್ಟ್ರದ ಅನೇಕ ಗಣ್ಯರು ಈ ಕ್ಷೇತ್ರದ ಬಗ್ಗೆ ತಿಳಿದುಕೊಳ್ಳಲು ಪ್ರಯತ್ನಿಸಿದ್ದಾರೆ. ಹಲವರು ಸಂಶೋಧನೆ ಮಾಡಿದ್ದಾರೆ. ಮೌಲ್ಯಮಾಪನಗಳನ್ನು ಮಾಡಿದ್ದಾರೆ ಈ ಕ್ಷೇತ್ರದ ಬಗ್ಗೆ ಪ್ರಶಂಸೆ ಮಾಡಿರುವುದು ನಮ್ಮೆಲ್ಲರಿಗೂ ಹೆಮ್ಮೆಯ ವಿಷಯ.

**ಅವಧಿಯ ಸಾಧನೆಗಳು**

ಈ ಅವಧಿಯಲ್ಲಿ ಸೌಹಾರ್ದ ಸಹಕಾರಿ ಕ್ಷೇತ್ರಕ್ಕೆ ಅನುಕೂಲವಾಗುವಂತೆ ಕಳೆದ 3-4 ವರ್ಷಗಳಿಂದ ಪ್ರಯತ್ನಿಸುತ್ತ ಬಂದಿದ್ದ ಸೌಹಾರ್ದ ಸಹಕಾರಿ ಕಾಯ್ದೆಗೆ ತಿದ್ದುಪಡಿ ಮಾಡಿಸಲು ಸಾಧ್ಯವಾಯಿತು. ಸಂಯುಕ್ತ ಸಹಕಾರಿಯ ಕೇಂದ್ರ ಕಛೇರಿಗೆ ಉತ್ತಮವಾದ ಸ್ಥಳದಲ್ಲಿ ಉತ್ತಮವಾದ ಕಟ್ಟಡ, ಬೆಳಗಾವಿ ಪ್ರಾಂತೀಯ ಕಛೇರಿಗೆ ಉತ್ತಮವಾದ ಕಟ್ಟಡ, ಕಲಬುರಗಿ ಪ್ರಾಂತೀಯ ಕಛೇರಿಗೆ ಉತ್ತಮವಾದ ಕಟ್ಟಡ ನಿರ್ಮಿಸಲು ಹಾಗೂ ಮೈಸೂರು ಪ್ರಾಂತೀಯ ಕಛೇರಿಗೆ ನಿವೇಶನವನ್ನು ಖರೀದಿಸಲು ತಮ್ಮ ಸಹಕಾರದಿಂದ ಸಾಧ್ಯವಾಯಿತು. ರಾಜ್ಯದ ಸೌಹಾರ್ದ ಸಹಕಾರಿ ಕ್ಷೇತ್ರ ಹೆಚ್ಚು ಬಲಯುತವಾಗಿ ಸಧೃಡವಾಗಿ

ಬೆಳೆಯಬೇಕು ಎಂಬ ಅಪೇಕ್ಷೆಯಿಂದ ಎಲ್ಲ ಜಿಲ್ಲೆಗಳಲ್ಲಿ ಜಿಲ್ಲಾ ಸೌಹಾರ್ದ ಸಹಕಾರಿಗಳ ಒಕ್ಕೂಟಗಳನ್ನು ರಚಿಸಲಾಯಿತು. ಎಲ್ಲ ಜಿಲ್ಲೆಗಳಲ್ಲಿ ಸಂಯುಕ್ತ ಸಹಕಾರಿಯ ಒಬ್ಬ ಅಧಿಕಾರಿಯನ್ನು ನೇಮಿಸಿ ಅವರ ಮೂಲಕ ಸೌಹಾರ್ದ ಸಹಕಾರಿಗಳ ಶಾಸನಾತ್ಮಕ ಕಾರ್ಯಗಳಿಗೆ ಮಾರ್ಗದರ್ಶನ ಶಿಕ್ಷಣ ಹಾಗೂ ತರಬೇತಿಗಳನ್ನು ಹಮ್ಮಿಕೊಂಡು ಸೌಹಾರ್ದ ಸಹಕಾರಿ ಕ್ಷೇತ್ರದ ಗುಣಮಟ್ಟ ಹೆಚ್ಚಿಸಲು ಸಾಧ್ಯವಾಗಿದೆ. ಹಿಂದಿನ ಆಡಳಿತ ಮಂಡಳಿಯ ಅಧಿಕಾರದ ಅವಧಿಯಲ್ಲಿ ರಾಜ್ಯ ಸರಕಾರವು ಮಂಜೂರು ಮಾಡಿದ ದಾವಾ ಪಂಚಾಯಿತಿ ನ್ಯಾಯಾಲಯದ ಬೆಳಗಾವಿ ಕಲಬುರಗಿ ಪ್ರಾಂತೀಯ ವಿಭಾಗಗಳಿಗೆ ಅನುಕೂಲವಾಗುವಂತೆ ಬೆಳಗಾವಿಯಲ್ಲಿ ಸಂಚಾರಿ ಪೀಠವನ್ನು ಸ್ಥಾಪಿಸಲು ಸಾಧ್ಯವಾಯಿತು. 3 ಲಕ್ಷಕ್ಕಿಂತ ಸಣ್ಣ ಮೊತ್ತದ ವ್ಯಾಜ್ಯಗಳನ್ನು ಪರಿಹರಿಸಲು ಸಾಧ್ಯವಾಗುವಂತೆ ಪ್ರತಿ ಜಿಲ್ಲೆಗಳಲ್ಲಿ ಆರ್ಬಿಟ್ರೇಟರ್‌ಗಳನ್ನು ಗುರುತಿಸಿ ಅವರ ಮೂಲಕ ವ್ಯಾಜ್ಯಗಳನ್ನು ಪರಿಹರಿಸಿಕೊಳ್ಳುವ ಅವಕಾಶವಾಗಿದೆ. ಹಲವಾರು ಸಮಸ್ಯಾತ್ಮಕ ಸಹಕಾರಿಗಳ ಆಡಳಿತ ಮಂಡಳಿಗಳನ್ನು ಕರೆಯಿಸಿ ಅವರ ಜೊತೆಗೆ ಮಾತನಾಡಿ ಹಲವಾರು ಸಮಸ್ಯೆಗಳನ್ನು ಪರಿಹರಿಸಲು ಸಾಧ್ಯವಾಗಿದೆ. ರಾಜ್ಯ ಸರಕಾರ ಕೇಂದ್ರ ಸರಕಾರ, ಸಹಕಾರ ಇಲಾಖೆ ಸಹಕಾರ ಮಹಾಮಂಡಳಗಳು ಹಿರಿಯ ಸಹಕಾರಿಗಳೊಡನೆ ಉತ್ತಮ ಬಾಂಧವ್ಯವನ್ನು ಬೆಳೆಸಿಕೊಂಡು ಬರುವಲ್ಲಿ ಯಶಸ್ವಿಯಾಗಿದ್ದೇನೆ. ಸಂಯುಕ್ತ ಸಹಕಾರಿಯ ನೇತೃತ್ವದಲ್ಲಿ ಅಖಿಲ ಭಾರತ ಸಹಕಾರ ಸಹಕಾರ ಸಪ್ತಾಹಗಳನ್ನು ಅತ್ಯಂತ ವಿಜ್ರಂಭಣೆಯಿಂದ ಅರ್ಥಪೂರ್ಣವಾಗಿ ಆಚರಿಸಿ ಸೌಹಾರ್ದ ಸಹಕಾರಿ ಕ್ಷೇತ್ರವನ್ನು ಸಂಯುಕ್ತ ಸಹಕಾರಿಯನ್ನು ಮುಖ್ಯವಾಹಿನಿಯಲ್ಲಿ ಕೊಂಡೊಯ್ಯುವ ಪ್ರಯತ್ನವನ್ನು ಪ್ರಾಮಾಣಿಕವಾಗಿ ಮಾಡಿದ್ದೇನೆ.

ಸಮಸ್ಯಾತ್ಮಕ ಸೌಹಾರ್ದ ಸಹಕಾರಿಗಳ ಸಮಸ್ಯೆಗಳ ಪರಿಹಾರಕ್ಕಾಗಿ ಟಾಸ್ಕ ಫೋರ್ಸ ರಚಿಸಿ ಅವರುಗಳ ಸಮಸ್ಯೆಗಳ ನಿವಾರಣೆಗೆ ಬೆಂಗಳೂರು ಹಾಗೂ ಬೆಳಗಾವಿ ವಿಭಾಗಗಳಲ್ಲಿ ಚಾರ್ಟರ್ಡ ಅಕೌಂಟೆಂಟರುಗಳು, ವಕೀಲರು, ಸಹಕಾರಿ ಇಲಾಖೆಯ ಹಾಗೂ ಪೋಲೀಸ ಇಲಾಖೆಯ ನಿವೃತ್ತ ಅಧಿಕಾರಿಗಳ ಸಮೀತಿಗಳನ್ನು ರಚಿಸಿ ಠೇವಣಿದಾರರ ಹಿತರಕ್ಷಣೆಗೆ ಕ್ರಮವಿಡಲು ಸಾಧ್ಯವಾಗಿದೆ.

ಮುಂಬರುವ ದಿನಗಳಲ್ಲಿ ಸೌಹಾರ್ದ ಸಹಕಾರಿ ವ್ಯವಸ್ಥೆಯನ್ನು ಗುಣಾತ್ಮಕವಾಗಿ ಬೆಳೆಯುವಂತೆ ಮುನ್ನಡೆಸಲಿರುವ, ಕೇಂದ್ರದ ಸಹಕಾರ ಇಲಾಖೆಯು ದೇಶದಲ್ಲಿ ಸಹಕಾರ ವಿಶ್ವವಿದ್ಯಾಲಯ ಸ್ಥಾಪನೆಗೆ, ದೇಶದಲ್ಲಿ ಸಹಕಾರ ನೀತಿಯನ್ನು ಜಾರಿಗೆ ತರುವ ಹಾಗೂ ರಾಜ್ಯದ ಸೌಹಾರ್ದ ಸಹಕಾರಿ ಕಾಯ್ದೆಯ ಸಂಯುಕ್ತ ಸಹಕಾರಿ ವ್ಯವಸ್ಥೆಯ ಮಾದರಿಯನ್ನು ದೇಶಾದ್ಯಂತ ವಿಸ್ತರಿಸುವಂತೆ ಕೇಂದ್ರ ಸಹಕಾರ ಇಲಾಖೆ ಕ್ರಮವಿಡುವಂತೆ ಮತ್ತು ಇನ್ನು ಅನೇಕ ಪ್ರಗತಿಪರ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಿರುವ ಸಂಯುಕ್ತ ಸಹಕಾರಿಯ ಆಡಳಿತ ಮಂಡಳಿಯವರಿಗೆ ಸಂಪೂರ್ಣ ಸಹಕಾರ ಹಾಗು ಮಾರ್ಗದರ್ಶನ ಮಾಡುವುದಾಗಿ ಈ ಸಂದರ್ಭದಲ್ಲಿ ನನಗೆ ಈ ಸೇವೆಯನ್ನು ಮಾಡಲು ಅವಕಾಶ ನೀಡಿದ್ದಕ್ಕಾಗಿ ಮತ್ತೊಮ್ಮೆ ಎಲ್ಲರಿಗೂ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ.

ಜೈ ಸಹಕಾರ – ಜೈ ಕರ್ನಾಟಕ – ಜೈ ಹಿಂದ

## ವಿಷಯಾಧಾರಿತ ತರಬೇತಿ ಕಾರ್ಯಕ್ರಮಗಳು

**ಕಲಬುರಗಿ :** ದಿನಾಂಕ 01.07.2022 ರಂದು ಕಲಬುರಗಿ ಪ್ರಾಂತದ ಕಲಬುರಗಿ ಜಿಲ್ಲೆಯ ಸೌಹಾರ್ದ ಸಹಕಾರಿಗಳ ಮುಖ್ಯ ಕಾರ್ಯನಿರ್ವಾಹಕರುಗಳಿಗೆ ಮತ್ತು ಅಧಿಕಾರಿಗಳಿಗೆ ವಿಷಯಾಧಾರಿತ ತರಬೇತಿಯನ್ನು ಕಾರ್ಯಕ್ರಮವನ್ನು ಜಿಲ್ಲಾ ವಿಜ್ಞಾನ ಕೇಂದ್ರದಲ್ಲಿ ಆಯೋಜಿಸಲಾಗಿತ್ತು. ಕಾರ್ಯಕ್ರಮದ ಪ್ರಾಸ್ತಾವಿಕ ನುಡಿಯನ್ನು ಮಾನ್ಯ ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ರಾಜಶೇಖರ ಹೆಚ್‌ರವರು ನೆರವೆ–ರಿಸಿದರು. ಸ್ವಾಗತವನ್ನು ಕಾನೂನು ವ್ಯವಸ್ಥಾಪಕರಾದ ಶ್ರೀ ಸೂರ್ಯಕಾಂತ ರ್‍ಯಾಕಲೆಯವರು ನೆರವೆರಿಸಿದರು. ನಿರೂಪಣೆ ಮತ್ತು ವಂದನಾರ್ಪಣೆಯನ್ನು ಕಲಬುರಗಿ ಜಿಲ್ಲಾ ಸಂಯೋಜಕರಾದ ಶ್ರೀ ಓಂಕಾರ ಧರಣೆಯವರು ಮಾಡಿದರು.

ಕಾರ್ಯಕ್ರಮದ ಉದ್ಘಾಟನೆಯನ್ನು ಸಹಕಾರ ಸಂಘಗಳ ಉಪನಿಬಂಧಕರಾದ ಶ್ರೀ ರವೀಂದ್ರರವರು ಉದ್ಘಾಟಿಸಿದರು. ಅಧ್ಯಕ್ಷತೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ. ಪಾಟೀಲರವರು ವಹಿಸಿದ್ದರು.

ದಿನಾಂಕ 01.07.2022ರಂದು ಕಲಬುರಗಿ ಜಿಲ್ಲೆಯ ಸೌಹಾರ್ದ ಸಹಕಾರಿಗಳ ಮುಖ್ಯ ಕಾರ್ಯನಿರ್ವಾಹಕರಿಗಾಗಿ ಜಿಲ್ಲಾ ವಿಜ್ಞಾನ ಕೇಂದ್ರದಲ್ಲಿ ವಿಷಯಾಧಾರಿತ ತರಬೇತಿ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು. ಸಮಾರೋಪ ಸಭೆಯ ಉದ್ಘಾಟನೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ಬಿ ಹೆಚ್ ಕೃಷ್ಣಾರೆಡ್ಡಿರವರು ನೇರವೇರಿಸಿದರು. ಸಮಾರೋಪ ಸಭೆಯ ಅಧ್ಯಕ್ಷತೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಸಂಜೀವ ಮಹಾಜನರವರು ವಹಿಸಿದರು. ಮುಖ್ಯ ಅತಿಥಿಗಳಾಗಿ ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ವೈ ಟಿ ಪಾಟೀಲರವರು, ಕಲಬುರಗಿ ಜಿಲ್ಲಾ ಒಕ್ಕೂಟದ ಅಧ್ಯಕ್ಷರಾದ ಶ್ರೀ ಎಸ್ ಎಸ್ ಪಾಟೀಲರವರು, ಕಲಬುರಗಿ ಜಿಲ್ಲಾ ಒಕ್ಕೂಟದ ನಿರ್ದೇಶಕರಾದ ಶ್ರೀ ಚಂದ್ರಶೇಖರ ಪರಸರೆಡ್ಡಿರವರು, ಸಂಯುಕ್ತ ಸಹಕಾರಿಯ ಮಾನ್ಯ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ ಪಾಟೀಲರವರು, ಮಾನ್ಯ ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ರಾಜಶೇಖರ ಹೆಚ್‌ರವರು ಉಪಸ್ಥಿತರಿದ್ದರು. ಸಮಾರೋಪ ಸಭೆಯ ಪ್ರಾಸ್ತಾವಿಕ ಸಂಯುಕ್ತ ಸಹಕಾರಿಯ ಮಾನ್ಯ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ ಪಾಟೀಲರವರು ಮಾತನಾಡಿದರು.

**ಯಾದಗಿರಿ :** ದಿನಾಂಕ 01.07.2022 ರಂದು ಕಲಬುರಗಿ ಪ್ರಾಂತದ ಯಾದಗಿರಿ ಜಿಲ್ಲೆಯ ಸೌಹಾರ್ದ ಸಹಕಾರಿಗಳ

ಮುಖ್ಯಕಾರ್ಯನಿರ್ವಾಹಕರುಗಳಿಗೆ ಮತ್ತು ಅಧಿಕಾರಿಗಳಿಗೆ ವಿಷಯಾಧಾರಿತ ತರಬೇತಿಯ ಕಾರ್ಯಕ್ರಮವನ್ನು ಹೇಮರೆಡ್ಡಿ ಮಲ್ಲಮ್ಮ ಸೌಹಾರ್ದ ಪತ್ತಿನ ಸಹಕಾರಿ ನಿ.,ಎನ್‌ವಿ.ಎಮ್ ಸಭಾಂಗಣ, ಶಾಸ್ತ್ರೀ ಸರ್ಕಲ್ ಯಾದಗಿರಿ ಇಲ್ಲಿ ಆಯೋಜಿಸಲಾಗಿತ್ತು. ಕಾರ್ಯಕ್ರಮದ ಉದ್ಘಾಟನೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ಬಿ.ಹೆಚ್ ಕೃಷ್ಣಾರೆಡ್ಡಿಯವರು ನೆರವೇರಿಸಿದರು. ಅಧ್ಯಕ್ಷತೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ವೈ.ಟಿ ಪಾಟೀಲರವರು ವಹಿಸಿದ್ದರು. ಸಂಪನ್ಮೂಲ ವ್ಯಕ್ತಿಗಳಾಗಿ ಶ್ರಿ ಡಾ॥ ಹರೀಶ ಕಾರ್ಪೋರೆಟ್ ಟ್ರೇನರ್ ಇವರು ಜೀವನದ ಕೌಶಲ್ಯಗಳ ಕುರಿತು ಉಪನ್ಯಾಸ ನೀಡಿದರು. ಶ್ರೀ ವಿರೇಶ ಹಿರೇಮಠ ಮು.ಕಾ.ನಿ ಭ್ರಮರಾಂಭ ಸೌಹಾರ್ದ ಪತ್ತಿನ ಸಹಕಾರಿ ನಿ.,ಮಸ್ಕಿ ಇವರು ಸಹಕಾರಿಗಳ ವ್ಯವಹಾರಭಿವೃದ್ದೀಯ ಕಾರ್ಯತಂತ್ರಗಳು ಹಾಗೂ ಅಢಾವೆ ಪತ್ರಿಕೆಯ ವಿಶ್ಲೇಷಣೆಯ ಕುರಿತು ಉಪನ್ಯಾಸ ನೀಡಿದರು. ಕಾರ್ಯಕ್ರಮದಲ್ಲಿ 65 ಪ್ರತಿನಿಧಿಗಳು ಭಾಗವಹಿಸಿದ್ದರು.

**ಬೀದರ** : ದಿನಾಂಕ 02.07.2022ರಂದು ಕಲಬುರಗಿ ಪ್ರಾಂತದ ಬೀದರ ಜಿಲ್ಲೆಯ ಸೌಹಾರ್ದ ಸಹಕಾರಿಗಳ ಮುಖ್ಯಕಾರ್ಯ ನಿರ್ವಾಹಕರುಗಳಿಗೆ ಮತ್ತು ಅಧಿಕಾರಿಗಳಿಗೆ ವಿಷಯಾಧಾರಿತ ತರಬೇತಿಯ ಕಾರ್ಯಕ್ರಮವನ್ನು ಶಾರದರೂಡಶೆಟ್, ಮಾರುತಿ ಶೋರೂಂ ಹತ್ತಿರ, ನೌಬಾದ ರಸ್ತೆ, ಬೀದರ ಇಲ್ಲಿ ಆಯೋಜಿಸಲಾಗಿತ್ತು. ಕಾರ್ಯಕ್ರಮದ ಉದ್ಘಾಟನೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ಬಿ.ಹೆಚ್ ಕೃಷ್ಣಾರೆಡ್ಡಿಯವರು ನೆರವೇರಿಸಿದರು. ಅಧ್ಯಕ್ಷತೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಗುರುನಾಥ ಜ್ಯಾಂತೀಕರರವರು ವಹಿಸಿದ್ದರು. ವೇದಿಕೆಯ ಮೇಲೆ ಸಂಯುಕ್ತ ಸಹಕಾರಿಯ ಮಾನ್ಯ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ ಪಾಟೀಲ, ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ರಾಜಶೇಖರ ಹೆಚ್‌ರವರು ಹಾಗೂ ಸಹಕಾರ ಸಂಘಗಳ ಲೆಕ್ಕಪರಿಶೋಧನಾ ಇಲಾಖೆಯ ಉಪನಿರ್ದೇಶಕರಾದ ಶ್ರೀ ಬಸವರಾಜ ಪಾಟೀಲರವರು ಹಾಗೂ ಬೀದರ ಒಕ್ಕೂಟದ ಉಪಾಧ್ಯಕ್ಷರಾದ ಶ್ರೀ ಸಂಜೀವಕುಮಾರ ಪಾಟೀಲ ಮತ್ತು ಮುಖ್ಯಕಾರ್ಯನಿರ್ವಾಹಕರು ಉಪಸ್ಥಿತರಿದ್ದರು. ಕಾರ್ಯಕ್ರಮದಲ್ಲಿ 95 ಪ್ರತಿನಿಧಿಗಳು ಭಾಗವಹಿಸಿದ್ದರು.

**ದಾವಣಗೆರೆ** : ದಿನಾಂಕ 04.07.2022 ರಂದು ದಾವಣಗೆರೆ ಜಿಲ್ಲೆಯ ಸೌಹಾರ್ದ ಸಹಕಾರಿಗಳ ಮುಖ್ಯ ಕಾರ್ಯನಿರ್ವಾಹಕರುಗಳಿಗಾಗಿ ವಿಷಯಾಧಾರಿತ ತರಬೇತಿಯನ್ನು ಹೋಟೆಲ್ ಅಶೋಕ ಇನ್, ದಾವಣಗೆರೆ ಇಲ್ಲಿ ಆಯೋಜಿಸಲಾಗಿತ್ತು. ಕಾರ್ಯಕ್ರಮದ ಉದ್ಘಾಟನೆಯನ್ನು ಶ್ರೀ ರಮೇಶ್, ಸೂಪರಿಡೆಂಟ್, ದಾವಣಗೆರೆ ಸಹಕಾರ ಸಂಘಗಳ ಉಪನಿಬಂಧಕರ ಕಚೇರಿ, ಇವರು ನೆರವೇರಿಸಿದರು. ಶ್ರೀ ಸಂಜಯ ಕೋರಟಕರ, ಪ್ರಾಂತೀಯ ವ್ಯವಸ್ಥಾಪಕರು, ಕ.ರಾ.ಸೌ.ಸಂ.ಸ.ನಿ ಬೆಂಗಳೂರು ಪ್ರಾಂತ, ಇವರು ಉಪಸ್ಥಿತರಿದ್ದರು. ಒಟ್ಟು 50 ಸಹಕಾರಿಗಳಿಂದ 65 ಪ್ರತಿನಿಧಿಗಳು ಭಾಗವಹಿಸಿ ತರಬೇತಿಯ ಪ್ರಯೋಜನ ಪಡೆದುಕೊಂಡರು.

**ಉತ್ತರ ಕನ್ನಡ** : ದಿನಾಂಕ 30 ಜೂನ್ 2022 ರಂದು ಹವ್ಯಕ ಸಭಾ ಭವನ, ಮೂರೂರು ರಸ್ತೆ, ಕುಮಟಾ ಇಲ್ಲಿ ಉತ್ತರ ಕನ್ನಡ ಜಿಲ್ಲೆಯ ಸೌಹಾರ್ದ ಸಹಕಾರಿಗಳ ಮುಖ್ಯಕಾರ್ಯನಿರ್ವಾಹಕರು ಮತ್ತು ಸಿಬ್ಬಂದಿಗಳಿಗಾಗಿ ವಿಷಯಾಧಾರಿತ ತರಬೇತಿ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು. ಸದರಿ ತರಬೇತಿ ಕಾರ್ಯಕ್ರಮದಲ್ಲಿ ಉತ್ತರ ಕನ್ನಡ ಜಿಲ್ಲೆಯ ಸೌಹಾರ್ದ ಸಹಕಾರಿಗಳಿಂದ ಒಟ್ಟು 90 ಸಿಬ್ಬಂದಿಗಳು ಉಪಸ್ಥಿತರಿದ್ದರು.

**ಹಾವೇರಿ** : ದಿನಾಂಕ 28 ಜೂನ್ 2022 ರಂದು ಹಾವೇರಿ ಜಿಲ್ಲೆಯ ಸಂತೃಪ್ತಿ ಹೊಟೇಲ್ ಇಲ್ಲಿ ಹಾವೇರಿ ಜಿಲ್ಲೆಯ ಸೌಹಾರ್ದ ಸಹಕಾರಿಗಳ ಅಧ್ಯಕ್ಷರು ಹಾಗೂ ಮುಖ್ಯಕಾರ್ಯನಿರ್ವಾಹಕರುಗಳಿಗೆ ಸಂಪರ್ಕ ಸಭೆಯನ್ನು ಆಯೋಜಿಸಲಾಗಿತ್ತು. ಕಾರ್ಯಕ್ರಮದ ಉದ್ಘಾಟನೆಯನ್ನು ಶ್ರೀ ಬಿ.ಹೆಚ್.ಕೃಷ್ಣಾರೆಡ್ಡಿ, ಮಾನ್ಯ ಅಧ್ಯಕ್ಷರು, ಕ.ರಾ.ಸೌ.ಸಂ.ಸ.ನಿ., ಬೆಂಗಳೂರು ಇವರು ವಹಿಸಿದ್ದರು, ಅಧ್ಯಕ್ಷತೆಯನ್ನು ಶ್ರೀ ಎಂ.ಬಿ.ಕಲಾಲ, ಮಾನ್ಯ ನಿರ್ದೇಶಕರು, ಕ.ರಾ.ಸೌ.ಸಂ.ಸ.ನಿ., ಬೆಂಗಳೂರು ಇವರು ವಹಿಸಿದ್ದರು. ಸಭೆಯಲ್ಲಿ ಹಾವೇರಿ ಜಿಲ್ಲೆಯ 52 ಸೌಹಾರ್ದ ಸಹಕಾರಿಗಳಿಂದ 73 ಪ್ರತಿನಿಧಿಗಳು ಉಪಸ್ಥಿತರಿದ್ದರು.



## ಬೆಳಗಾವಿ ದಾವಾ ಪಂಚಾಯತ್ ನ್ಯಾಯಾಲಯದ ವಸೂಲಾತಿ ಅಧಿಕಾರಿಗಳಾಗಿ ಶ್ರೀ ರವೀಂದ್ರ ಪಾಟೀಲ್ ನೇಮಕ

**ಬೆಳಗಾವಿ** : ಶ್ರೀ ರವೀಂದ್ರ ಪಾಟೀಲ್, ಮಾನ್ಯ ಸಹಕಾರ ಸಂಘಗಳ ಸಹಾಯಕ ನಿಬಂಧಕರು ಬೆಳಗಾವಿ ಇವರು ಸೌಹಾರ್ದ ಸಂಯುಕ್ತ ಸಹಕಾರಿಯ ದಾವಾ ಪಂಚಾಯತ್ ನ್ಯಾಯಾಲಯದ ಬೆಳಗಾವಿ ವಿಭಾಗದ ವಸೂಲಾತಿ ಅಧಿಕಾರಿಗಳಾಗಿ(ಪ್ರ) ನೇಮಕಗೊಂಡಿದ್ದು ಇವರಿಗೆ ಸಂಯುಕ್ತ ಸಹಕಾರಿ ವತಿಯಿಂದ ಅಭಿನಂದಿಸಲಾಯಿತು.

**ದಾವಣಗೆರೆ** : ದಿನಾಂಕ 08.07.2022 ರಂದು ದಾವಣಗೆರೆ ಜಿಲ್ಲೆಯ ಸಹಕಾರ ಸಂಘಗಳ ಲೆಕ್ಕಪರಿಶೋಧನಾ ಇಲಾಖೆಯ ಉಪನಿರ್ದೇಶಕರ ಕಚೇರಿ ಸಭಾಂಗಣದಲ್ಲಿ ದಾವಣಗೆರೆ ಜಿಲ್ಲೆಯ ಜಿಲ್ಲಾ ಮಟ್ಟದ ಸಮನ್ವಯ ಸಮಿತಿ ಸಭೆಯನ್ನು ಆಯೋಜಿಸಲಾಗಿತ್ತು. ಸದರಿ ಸಭೆಯಲ್ಲಿ ದಾವಣಗೆರೆ ಜಿಲ್ಲಾ ಸಂಯೋಜಕರಾದ ಶ್ರೀ ನಟರಾಜ ಇವರು ಭಾಗವಹಿಸಿ ದಾವಣಗೆರೆ ಜಿಲ್ಲೆಯ ಸೌಹಾರ್ದ ಸಹಕಾರಿಗಳಿಗೆ ಸಂಬಂಧಿಸಿದಂತೆ ಮಾಹಿತಿ ನೀಡಿದರು.

# ಉದಯ ಸೌಹಾರ್ದ ಸಹಕಾರಿಯ ಸಂಭ್ರಮದ ರಜತೋತ್ಸವ ಅವಿಸ್ಮರಣಿಯ

## ಉತ್ತಮ ನಾಯಕತ್ವ, ಕ್ರಿಯಾಶೀಲ ನಿರ್ದೇಶಕರು ದಕ್ಷ ಸಿಬ್ಬಂದಿ ಉದಯ ಸೌಹಾರ್ದ ಸಹಕಾರಿಯ ಯಶಸ್ಸಿಗೆ ಕಾರಣರು. ಅವರಿಗೆ ಅಭಿನಂದನೆ ಸಲ್ಲಿಸಿದ : ಸಹಕಾರ ಸಚಿವ ಶ್ರೀ ಎಸ್.ಟಿ.ಸೋಮಶೇಖರ



ಬೆಂಗಳೂರು ನಗರದ ದಕ್ಷಿಣದಲ್ಲಿ ಕಳೆದ 27 ವರ್ಷಗಳಿಂದ ಒಂದು ಸಣ್ಣ ಕೋಣೆಯಲ್ಲಿ ಕೇವಲ 5.30 ಲಕ್ಷ ಬಂಡವಾಳದೊಂದಿಗೆ 500 ಸದಸ್ಯರೊಂದಿಗೆ ಪ್ರಾರಂಭವಾದ ಉದಯ ಸೌಹಾರ್ದ ಸಹಕಾರಿಯು ಇಂದು 130 ಕೋಟಿ ಬಂಡವಾಳವನ್ನು ತನ್ನ ರಜತಮಹೋತ್ಸವವನ್ನು ಇಂದು ದಿನಾಂಕ 31ನೇ ಜುಲೈ 2022 ರಂದು ಅತ್ಯಂತ ಸಂಭ್ರಮದಿಂದ ಸಡಗರದಿಂದ ಬೆಂಗಳೂರು ನಗರದ ಸರ್ ಪುಟ್ಟಣ್ಣಚೆಟ್ಟಿ ಟೌನ ಹಾಲನಲ್ಲಿ ಆಚರಿಸಲಾಯಿತು.

ಕಾರ್ಯಕ್ರಮದ ಮುಖ್ಯ ಅತಿಥಿಗಳು ಆದ ಸಹಕಾರ ಸಚಿವ ಶ್ರೀ ಎಸ್.ಟಿ.ಸೋಮಶೇಖರವರು ದೀಪ ಬೆಳಗಿಸಿ ಕಾರ್ಯಕ್ರಮಕ್ಕೆ ಚಾಲನೆ ನೀಡಿದಾಗ ಅವರ ಜೊತೆಯಲ್ಲಿ ಶಾಸಕ ಶ್ರೀ ರವಿಸುಬ್ರಮಣ್ಯ, ಸಂಯುಕ್ತ ಸಹಕಾರಿಯ ಅಧ್ಯಕ್ಷ ಶ್ರೀ ಬಿ.ಹೆಚ್.ಕೃಷ್ಣಾರೆಡ್ಡಿಯವರು, ಹೊಸ ದಿಗಂತ ಪತ್ರಿಕೆಯ ಮುಖ್ಯ ಕಾರ್ಯನಿರ್ವಾಹಕ ಶ್ರೀ ಸಿ.ಎಸ್.ಪ್ರಕಾಶರವರು, ಉದಯ ಸೌಹಾರ್ದ ಸಹಕಾರಿಯ ಅಧ್ಯಕ್ಷ ಶ್ರೀ ಬಿ.ಎಸ್.ಗುಂಡುರಾವರವರು, ಉಪಾಧ್ಯಕ್ಷ ಶ್ರೀ ಚಂದ್ರಶೇಖರವರ ಹಾಗೂ ಹಲವು ನಿರ್ದೇಶಕರು ಗಣ್ಯರು ಉಪಸ್ಥಿತರಿದ್ದರು. ಪ್ರಾರಂಭದಲ್ಲಿ ಶ್ರೀಮತಿ ಗಾಯತ್ರಿ ಶ್ರೀಧರರವರು ಪ್ರಾರ್ಥನೆ ಹಾಗು ನಾಡಗೀತೆ ನಡೆಸಿಕೊಟ್ಟ ನಂತರ ಉಪಾಧ್ಯಕ್ಷ ಶ್ರೀ ಚಂದ್ರಶೇಖರವರು ಅತಿಥಿಗಣ್ಯರನ್ನು ಸ್ವಾಗತಿಸಿದರು. ಶ್ರೀ ಬಿ.ಎಸ್. ಗುಂಡೂರಾವರವರು ಪ್ರಾಸ್ತಾವಿಕವಾಗಿ ಉದಯ ಸೌಹಾರ್ದ ಸಹಕಾರಿ ಬೆಳೆದುಬಂದ ದಾರಿ ಹಾಗು ಪ್ರಗತಿಚಿತ್ರವನ್ನು ವಿವರವಾಗಿ ಇದೆಲ್ಲಕ್ಕೂ ಕಾರಣ ನನ್ನ ಆಡಳಿತ ಮಂಡಳಿಯ ಕ್ರಿಯಾಶೀಲತೆ ಹಾಗು ಸದಸ್ಯರ ಸಕಗತೀಯ ಪಾಲುಗಾರಿಕೆ ವಿಶ್ವಾಸಗಳಿಂದಾಗಿ ಸೌಹಾರ್ದ ಸಹಕಾರಿ ಕ್ಷೇತ್ರದಲ್ಲಿ ನಮ್ಮ ಸುತ್ತ ಮುತ್ತ ಹಲವಾರು ಸಹಕಾರಿಗಳು ನಷ್ಟವನ್ನು ಅನುಭವಿಸಿ ನಿಧಿಗಳ ದುರ್ಬಳಕೆಯಾಗಿ ಠೇವಣಿದಾರರಿಗೆ ಅವರ ಠೇವಣಿಗಳನ್ನು ಹಿಂತಿರುಗಿಸಲಾರದ ಪರಿಸ್ಥಿತಿ ಇದೆ. ಆದರೆ ಉದಯ ಸೌಹಾರ್ದ ಸಹಕಾರಿಯಲ್ಲಿ ಇದುವರೆವಿಗೂ ಒಬ್ಬ ಸದಸ್ಯರು ಸಹ ತಮ್ಮ ಠೇವಣಿಯನ್ನು ವಾಪಸ್ಸು ಕೇಳಿರುವುದಿಲ್ಲ, ನಮ್ಮಲ್ಲಿ ಅಂತಹ ಪ್ರಶ್ನೆಯೆ ಉದ್ಭವಿಸುವುದಿಲ್ಲ. ನಮ್ಮ ಸದಸ್ಯರು ನಮ್ಮ ಮೇಲೆ ಅಪಾರ ನಂಬಿಕೆಯನ್ನು ಇಟ್ಟಿದ್ದಾರೆ. ಅವರ ನಂಬಿಕೆ ಮತ್ತು ಪ್ರೋತ್ಸಾಹಗಳೆ ನಮಗೆ ಶ್ರೀರಕ್ಷೆ. ನಮಗೆ ಉತ್ಸಾಹ ನೀಡಿದೆ ಎಂದು ತಿಳಿಸಿದರು.

**ಸೌಹಾರ್ದಗಳಲ್ಲಿ ಶೇಕಡಾ 92% ಸೌಹಾರ್ದ ಸಹಕಾರಿಗಳು ಉತ್ತಮ : ಸಹಕಾರ ಸಚಿವ ಶ್ರೀ ಎಸ್.ಟಿ ಸೋಮಶೇಖರ**

ಸಹಕಾರ ಸಚಿವ ಶ್ರೀ ಸೋಮಶೇಖರವರು ಮಾತನಾಡಿ ಉದಯ ಸೌಹಾರ್ದ ಸಹಕಾರಿ ಅದರ ಪ್ರಗತಿ ಅದರ ಕಾರ್ಯಚಟುವಟಿಕೆಗಳನ್ನು ಅಧ್ಯಯನ ಮಾಡಿದಾಗ ಇದೊಂದು ಉತ್ತಮ ಸೌಹಾರ್ದ ಸಹಕಾರಿ ಸಂಸ್ಥೆಯಾಗಿದೆ. ಉತ್ತಮ ಅಧ್ಯಕ್ಷರು ಆಡಳಿತ ಮಂಡಳಿ ಸಿಬ್ಬಂದಿಯನ್ನು ಈ ಸಹಕಾರಿ ಹೊಂದಿದೆ. ಮೇಲಾಗಿ ಜಾಗೃತ ಸದಸ್ಯರ ಉತ್ತಮ ಭಾಗವಹಿಸುವಿಕೆಯಿಂದಾಗಿ ಈ ಸಹಕಾರಿ ಕಾರ್ಯನಿರ್ವಹಿಸುತ್ತಿರುವುದು ರಾಜ್ಯದ ಸೌಹಾರ್ದ ಸಹಕಾರಿ ಕ್ಷೇತ್ರಕ್ಕೆ ಹೆಮ್ಮೆ ಪಡುವಂತಾದ್ದು. ನಾನು ಅವರೆಲ್ಲರಿಗೂ ಅಭಿನಂದಿಸುತ್ತೇನೆ ಎಂದು ತಿಳಿಸಿದರು.

**ಅನುಭಾವಿ ಸಹಕಾರಿ ಸಚಿವರಾಗಿರುವುದು ಸಹಕಾರ ಕ್ಷೇತ್ರಕ್ಕೆ ಅನುಕೂಲವಾಗಿದೆ : ಶಾಸಕ ರವಿಸುಬ್ರಮಣ್ಯ**

ಮುಖ್ಯ ಅತಿಥಿಯಾಗಿ ಭಾಗವಹಿಸಿ ಮಾತನಾಡಿದ ಶಾಸಕ ಶ್ರೀ ರವಿ ಸುಬ್ರಮಣ್ಯರವರು ಬೆಂಗಳೂರು ನಗರದ ದಕ್ಷಿಣ ಭಾಗದಲ್ಲಿ ಹಲವಾರು ಸೌಹಾರ್ದ ಸಹಕಾರಿಗಳು ಸಮಸ್ಯೆಗಳಿಂದ ಕೂಡಿದ್ದು ವಿಶೇಷವಾಗಿ ಠೇವಣಿದಾರರ ಠೇವಣಿಗಳನ್ನು ಹಿಂದಿರಿಗಿಸುವಲ್ಲಿ ವಿಫಲತೆ ಆಗಿದೆ. ಈ ಸಮಸ್ಯೆಗಳನ್ನು ಬಗೆಹರಿಸಲು ಸಹಕಾರ ಸಚಿವರು ನಿರಂತರವಾಗಿ ನಮ್ಮ ಜೊತೆಯಲ್ಲಿ ಸಹಕರಿಸುತ್ತಿದ್ದಾರೆ. ಈ ಸಮಸ್ಯೆಗಳನ್ನು ಪರಿಹರಿಸುವಲ್ಲಿ ನಮ್ಮ ಜೊತೆಗಿದ್ದಾರೆ. ಅವರೂ ಸಹಕಾರಿಗಳೇ ಆಗಿದ್ದರಿಂದ ಸಹಕಾರಿ ಕ್ಷೇತ್ರದ ಸಮಸ್ಯೆಗಳಿಗೆ ಸ್ಪಂದಿಸುತ್ತಾರೆ. ಇಂತರ ಸಮಸ್ಯೆಗಳ ಮಧ್ಯದಲ್ಲಿಯೂ ಉದಯ ಸೌಹಾರ್ದ ಸಹಕಾರಿ ಉತ್ತಮವಾಗಿ ಕಾರ್ಯನಿರ್ವಹಿಸುತ್ತ ತನ್ನ 25ನೇ ವರ್ಷದ ರಜತ ಮಹೋತ್ಸವವನ್ನು ಆಚರಿಸುತ್ತಿರುವುದಕ್ಕೆ ಅವರ ಸಹಕಾರಿಯ ಆಡಳಿತ ಮಂಡಳಿಯ ಕ್ರಿಯಾಶೀಲತೆ ಸಿಬ್ಬಂದಿಯ ದಕ್ಷತೆ ಹಾಗು ಸದಸ್ಯರ ಆಸಕ್ತಿಗಳೆ ಕಾರಣ ಎಂದು ತಿಳಿಸಿ ಅವರುಗಳನ್ನು ಅಭಿನಂದಿಸಿದರು.

**ರಾಷ್ಟ್ರೀಯತೆಯನ್ನು ಬಿತ್ತುವ ಬೆಳೆಸುವ ಪ್ರಮುಖ ಸಾಧನ ಸಹಕಾರ ಕ್ಷೇತ್ರವಾಗಬೇಕು : ಹೊಸ ದಿಗಂತ ಪತ್ರಿಕೆ ಮುಖ್ಯಕಾರ್ಯನಿರ್ವಾಹಕ : ಶ್ರೀ ಸಿ ಎಸ್.ಪ್ರಕಾಶ**

ಪ್ರಾರಂಭದಲ್ಲಿ ಉದಯ ಸೌಹಾರ್ದ ಸಹಕಾರಿಯ ಅಧ್ಯಕ್ಷ, ಆಡಳಿತ

ಮಂಡಳಿ ಸಿಬ್ಬಂದಿ ಹಾಗೂ ಸದಸ್ಯರನ್ನು ಅಭಿನಂದಿಸಿ ಮಾತನಾಡಿದ ಶ್ರೀಯುತರು ಇವತ್ತಿನ ಕಾರ್ಯಕ್ರಮ ಒಂದು ಕೌಟುಂಬಿಕ ಸಾಮರಸ್ಯದ ಸಮಾರಂಭವನ್ನು ಹೋಲುತ್ತಿದೆ. ಒಂದು ಹಬ್ಬದ ವಾತಾವರಣವಿದೆ. ಸಂಭ್ರಮವಿದೆ. ಸಡಗರ ಇದೆ. ಆಂತರಿಕ ಸಂಬಂಧಗಳನ್ನು ಇನ್ನಷ್ಟು ಗಟ್ಟಿಗೊಳಿಸುವ ಭೂಮಿಕೆಯಾಗಿದೆ. ಹಿರಿಯರು, ಕಿರಿಯರು, ಆದರ, ಗೌರವಗಳ ಮಾನವೀಯ ಮೌಲ್ಯಗಳ ಹೇಳಿಕೊಡುವ ಬೃಹತ ಸಭೆ ಇದಾಗಿದೆ. ಸಹಕಾರಿ ಕ್ಷೇತ್ರ ಮಾಡಬೇಕಾಗಿರುವುದು ಇದನ್ನೆ ಇದರ ಜೊತೆಗೆ ಸಹಕಾರಿ ಕ್ಷೇತ್ರ ರಾಷ್ಟ್ರೀಯತೆಯನ್ನು ಬೆಳೆಸುವ ಕಾರ್ಯವನ್ನು ಆದ್ಯತೆಯ ಮೇಲೆ ನನ್ನ ಮನೆ, ನನ್ನ ಸಮಾಜ, ನನ್ನ ಊರು ರಾಜ್ಯ ದೇಶ ದೇಶ ಭಕ್ತಿ ಹಾಗೂ ರಾಷ್ಟ್ರ ಭಕ್ತಿಗಳನ್ನು ಹೆಚ್ಚಿಸುವ ಕಾರ್ಯವನ್ನು ಈ ಸಹಕಾರಿ ಕ್ಷೇತ್ರ ಮಾಡಬೇಕು ಎಂದು ಹೇಳಿ ಸಹಕಾರಿಗೆ ಶುಭ ಕೋರಿದರು.

**ಉದಯ ರಜತೋತ್ಸವ ಸ್ಮರಣ ಸಂಚಿಕೆ ಬಿಡುಗಡೆ :**

ಸಹಕಾರ ಸಚಿವ ಶ್ರೀ ಎಸ್.ಟಿ.ಸೋಮಶೇಖರವರು ಹಾಗು ವೇದಿಕೆಯ ಮೇಲಿನ ಗಣ್ಯರೆಲ್ಲರೂ ಸೇರಿ ಉದಯ ಸೌಹಾರ್ದ ಸಹಕಾರಿಯ ರಜತೋತ್ಸವ ಎಂಬ ಸ್ಮರಣ ಸಂಚಿಕೆಯನ್ನು ಬಿಡುಗಡೆ ಮಾಡಿದರು.

**ಉದಯ ಸೌಹಾರ್ದ ಸಹಕಾರಿ ಉತ್ತಮ ನಾಯಕತ್ವ ಹಾಗು ಆಡಳಿತ ಮಂಡಳಿಯನ್ನು ಹೊಂದಿದೆ : ಶ್ರೀ ಬಿ.ಹೆಚ್. ಕೃಷ್ಣಾರೆಡ್ಡಿ**

ಮುಖ್ಯ ಅತಿಥಿಯಾಗಿ ಮಾತನಾಡಿದ ಸಂಯುಕ್ತ ಸಹಕಾರಿಯ ಅಧ್ಯಕ್ಷ ಶ್ರೀ ಬಿ.ಹೆಚ್.ಕೃಷ್ಣಾರೆಡ್ಡಿಯವರು ದೇಶದ ರಾಜ್ಯದ ಸಹಕಾರಿ ಕ್ಷೇತ್ರದ ಹಾಗೂ ಸೌಹಾರ್ದ ಸಹಕಾರಿಯ ಪ್ರಗತಿ ವಿವರಗಳನ್ನು ತಿಳಿಸುತ್ತ ಸಹಕಾರಿ ಕ್ಷೇತ್ರದ ಯಶಸ್ಸಿಗೆ ದಕ್ಷ ನಾಯಕತ್ವದ ಅಗತ್ಯತೆ ಇದೆ ಅದನ್ನು ಶ್ರೀಯುತ ಗುಂಡೂರಾವರವರು ಹಾಗೂ ಅವರ ಆಡಳಿತ ಮಂಡಳಿಯವರು ಒದಗಿಸಿದ್ದಾರೆ. ತಮ್ಮ ಸಂಸ್ಥೆಯನ್ನು ಚೆನ್ನಾಗಿ ನಡೆಸುವುದರ ಜೊತೆಗೆ ಅಕ್ಕ ಪಕ್ಕದ ಹಲವು ಸಂಸ್ಥೆಗಳ ಸಮಸ್ಯೆ ಪರಿಹಾರಕ್ಕೆ ಶ್ರೀ ಗುಂಡೂರಾವರವರು ಸಂಯುಕ್ತ ಸಹಕಾರಿಯ ನಿರ್ದೇಶಕರಾಗಿಯೂ ನಮ್ಮ ಜೊತೆಗೆ ಕಾರ್ಯನಿರ್ವಹಿಸುತ್ತಿದ್ದಾರೆ. ಈಗ ಎರಡನೇ ಬಾರಿಗೆ ಮತ್ತೇ ನಿರ್ದೇಶಕರಾಗಿ ಆಯ್ಕೆಯಾಗಿದ್ದಾರೆ. ಸಹಕಾರ ತತ್ವಗಳಲ್ಲಿ ಅಪಾರ ನಂಬಿಕೆ ಹಾಗು ಸಾಮಾಜಿಕ ಕಳಕಳಿಯನ್ನು ಹೊಂದಿರುವ ಈ ಸಂಸ್ಥೆಯ ಅಧ್ಯಕ್ಷರು ಆಡಳಿತ ಮಂಡಳಿಯವರು ಸಿಬ್ಬಂದಿಯವರು ಹಾಗೂ ಸದಸ್ಯರೆಲ್ಲರಿಗೂ ತಮ್ಮ ಅಭಿನಂದನೆಗಳನ್ನು ಸಲ್ಲಿಸಿದರು.

**ಸಾಧಕರಿಗೆ ಸನ್ಮಾನ :**

ರಾಷ್ಟ್ರ ಪ್ರಶಸ್ತಿ ಪುರಸ್ಕೃತ ಅಕ್ಷರ ಸಂತ ಪದ್ಮಶ್ರೀ ಪುರಸ್ಕೃತ ಹರೇಕಳ ಹಾಜಪ್ಪ, ಅಭಿನವ ಭಗೀರಥ ಶ್ರೀ ಕಾಮೇಗೌಡ. ಒಲಿಂಪಿಕ್ಸ ಸಾಧಕ ಶ್ರೀ ಸಂದೇಶ ಕೃಷ್ಣ ಹಾಗೂ ಸಾವಯವ ಕೃಷಿ ಪಂಡಿತ ಶ್ರೀ ವೆಂಕಟೇಶ ಮೂಲಿಮನಿ ಇವರುಗಳನ್ನು ಅವರ ಸಾಧನೆಗಳನ್ನು ಪರಿಚಯಿಸಿ ಗೌರವಿಸಲಾಯಿತು.

**ವಾರ್ಷಿಕ ಸಾಮಾನ್ಯ ಸಭೆ :**

ಉದಯ ಸೌಹಾರ್ದ ಸಹಕಾರಿ ಅಧ್ಯಕ್ಷ ಶ್ರೀ ಬಿ.ಎಸ್.ಗುಂಡೂರಾವರವರ ಅಧ್ಯಕ್ಷತೆಯಲ್ಲಿ ಸಹಕಾರಿಯ ವಾರ್ಷಿಕ ಸಾಮಾನ್ಯ ಸಭೆ ಅತ್ಯಂತ ಪರಿಣಾಮಕಾರಿಯಾಗಿ ನಡೆಯಿತು. ವಾರ್ಷಿಕ ವರದಿ, ಲೆಕ್ಕ ಪತ್ರಗಳ ಅನುಮೋದನೆ ,ಅಂದಾಜು ಬಜೆಟ್ ಅನುಮೋದನೆ ಲೆಕ್ಕ ಪರಿಶೋಧಕರ ನೇಮಕಾತಿ ಮುಂತಾದ ವಿಷಯಗಳ ಚರ್ಚೆ ಹಾಗು ವಿಷಯಗಳ ಸರ್ವ ಸಮ್ಮತವಾದ ಅನುಮೋದನೆಯ ನಂತರ ರಜತ ಮಹೋತ್ಸವದ ಅಂಗವಾಗಿ ಸದಸ್ಯರಿಗೆ ನೆನಪಿನ ಕಾಣಿಕೆಯಾಗಿ ಏನಾದರೂ ಕೊಡಬೇಕು ಎಂಬ ಸದಸ್ಯರ ಪ್ರಸ್ತಾವನೆಯ ನಂತರ ಬಳಿಕ ಈ ವರ್ಷ ಸಹಕಾರಿ 72.40 ಲಾಭ ಗಳಿಸಿದ್ದು ಸದಸ್ಯರಿಗೆ 15% ಡಿವಿಡೆಂಡ ನೀಡಲಾಗುವುದು ಹಾಗು ಉದಯ ಸೌಹಾರ್ದ ಸಹಕಾರಿಯ ರಜತ ಮಹೋತ್ಸವದ ಅಂಗವಾಗಿ ಎಲ್ಲ ಸದಸ್ಯರಿಗೆ 25 ಗ್ರಾಮ ಬೆಳ್ಳಿಯ ಪದಕವನ್ನು ನೀಡಲಾಗುವುದು ಎಂದು ಅಧ್ಯಕ್ಷರು ಘೋಷಣೆಯೊಂದಿಗೆ ಸಾಮಾನ್ಯ ಸಭೆ ಮುಕ್ತಾಯವಾಯಿತು.

**ರಜತೋತ್ಸವ ಕಾರ್ಯಕ್ರಮಗಳ ವಿಜೇತರಿಗೆ ಬಹುಮಾನ, ಹಿರಿಯ ಸದಸ್ಯರಿಗೆ ಸನ್ಮಾನ ಹಾಗು ಪ್ರತಿಭಾ ಪುರಸ್ಕಾರ ಕಾರ್ಯಕ್ರಮ**

ನಂತರದಲ್ಲಿ ರಜತಮಹೋತ್ಸವದ ಅಂಗವಾಗಿ ನಡೆಸಿದ ಚರ್ಚಾಸ್ಪರ್ದೆ, ಗಾಯನ ಸ್ಪರ್ಧೆ, ಚಿತ್ರಬಿಡಿಸುವ ಚೆಸ್ಸ್ ಕೇರಂ ಹಾಗೂ ವಿವಿಧ ಸ್ಪರ್ಧೆಗಳಲ್ಲಿ ವಿಜೇತರಿಗೆ ಬಹುಮಾನಗಳನ್ನು, ಹಿರಿಯ ನಾಗರಿಕರಿಗೆ ಗೌರವ ಸಲ್ಲಿಸುವುದು, ಸನ್ಮಾನಿಸುವುದು, ಒಳ್ಳೆಯ ಗಾಹಕರನ್ನು ಸನ್ಮಾನಿಸುವುದು, ಪ್ರತಿಭಾ ಪುರಸ್ಕಾರ ಕಾರ್ಯಕ್ರಮಗಳನ್ನು ಏರ್ಪಡಿಸಲಾಗಿತ್ತು. ಈ ಕಾರ್ಯಕ್ರಮಕ್ಕೆ ಮುಖ್ಯ ಅತಿಥಿಗಳಾಗಿ ಹಿರಿಯ ಸಹಕಾರಿ ರತ್ನ ಪ್ರಶಸ್ತಿ ಪುಸ್ಕೃತ ರಾಷ್ಟ್ರೀಯ ಸಹಕಾರ ಭಾರತಿ ಮಾಜಿ ಅಧ್ಯಕ್ಷ ಹಾಗು ಸಲಹೆಗಾರ ಶ್ರೀ ರಮೇಶ ವೈದ್ಯರು ಸಂಯುಕ್ತ ಸಹಕಾರಿಯ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ.ಜಿ.ಪಾಟೀಲ ರವರು ಆಗಮಿಸಿ ಕಾರ್ಯಕ್ರಮ ನಡೆಸಿಕೊಟ್ಟರು.

**ಸಹಕಾರ ಸಂಸ್ಕೃತಿ ಬೆಳೆಸುವತ್ತ ಗಮನ ಹರಿಸುವುದು ಅವಶ್ಯ : ಶ್ರೀ ರಮೇಶ ವೈದ್ಯ.**

ಕಾರ್ಯಕ್ರಮದ ಮುಖ್ಯ ಅತಿಥಿಗಳಾಗಿ ಆಗಮಿಸಿ ಬಹುಮಾನ ಗಳನ್ನು ನೀಡಿದ ನಂತರ ಮಾತನಾಡಿದ ಶ್ರೀ ರಮೇಶ ವೈದ್ಯರವರು ಉದಯ ಸೌಹಾರ್ದ ಸಹಕಾರಿ ಅಧ್ಯಕ್ಷರು, ಆಡಳಿತ ಮಂಡಳಿ ಸದಸ್ಯರು ಹಾಗು ಸಿಬ್ಬಂದಿಯವರನ್ನು ಅಭಿನಂದಿಸಿ ರಾಷ್ಟ್ರದಲ್ಲಿ ಸಹಕಾರ ಕ್ಷೇತ್ರದ ಗುಣಮಟ್ಟ ಸುಧಾರಣೆಗೆ ಸಹಕಾರ ಕ್ಷೇತ್ರ ದೇಶದ ಅರ್ಥವ್ಯವಸ್ಥೆಯ ಮುಖ್ಯವಾಹಿನಿಯಲ್ಲಿರಬೇಕಾದರೆ ನಮ್ಮ ಸದಸ್ಯರಲ್ಲಿ ಸಹಕಾರ ಸಂಸ್ಕೃತಿಯನ್ನು ಬೆಳೆಸುವಲ್ಲಿ ಆದ್ಯ ಗಮನ ಹರಿಸುವುದು ಅಗತ್ಯ. ಸಂಸ್ಕಾರ ವಿಲ್ಲದೆ ಸಹಕಾರ ವಿಲ್ಲ ಸಹಕಾರ ವಿಲ್ಲದೆ ಸಂಸ್ಕಾರ ಬರುವುದಿಲ್ಲ ಎಂದು

ತಿಳಿಸಿದರು.

**ಸಹಕಾರಿ ಸಂಸ್ಥೆಗಳು ಉತ್ತಮ ರಾಷ್ಟ್ರವನ್ನು ನಿರ್ಮಾಣ ಮಾಡುತ್ತವೆ. : ಶ್ರೀ ಶರಣಗೌಡ ಜಿ. ಪಾಟೀಲ್**

ಕಾರ್ಯಕ್ರಮದ ಮುಖ್ಯ ಅತಿಥಿಗಳಾಗಿ ಆಗಮಿಸಿ ಪ್ರತಿಭಾ ಪುರಸ್ಕಾರ, ಹಿರಿಯ ಸದಸ್ಯರಿಗೆ ಸನ್ಮಾನ ಹಾಗು ವಿವಿಧ ಸ್ಪರ್ಧೆಗಳಲ್ಲಿ ವಿಜೇತರಿಗೆ ಬಹುಮಾನ ಗಳನ್ನು ನೀಡಿದ ನಂತರ ಮಾತನಾಡಿದ ಸಂಯುಕ್ತ ಸಹಕಾ–ರಿಯ ವ್ಯವಸ್ಥಾಪಕ ನಿರ್ದೇಶಕ ಶ್ರೀ ಶರಣಗೌಡ ಪಾಟೀಲ ರವರು "ಯೂನಿಟಿ ಇಜ ಸ್ಟ್ರಂಗ್ಥ್" ಒಕ್ಕಟ್ಟಿನಲ್ಲಿ ಬಲವಿದೆ ಎಂಬುವುದಕ್ಕೆ ಸಹಕಾರ ಕ್ಷೇತ್ರ ಸಾಕ್ಷಿ. ಉತ್ತಮ ಸಮಾಜವನ್ನು ನಿರ್ಮಾಣ ಮಾಡುವುದರ ಜೊತೆಗೆ ಉತ್ತಮ ರಾಷ್ಟ್ರವನ್ನು ಸಹಕಾರ ಕ್ಷೇತ್ರ ನಿರ್ಮಾಣ ಮಾಡುತ್ತದೆ ಎಂಬುದನ್ನು ಸಹಕಾರ ಕ್ಷೇತ್ರ ಪುಷ್ಠಿಕರಿಸುತ್ತದೆ.

ವಿಶ್ವ ಅತ್ಯಂತ ಬಲವಾದ ಆರ್ಥಿಕ ಹಾಗೂ ಸಾಮಾಜಿಕ ಚಳುವಳಿ ಈ ಸಹಕಾರ ಕ್ಷೇತ್ರ ಎಂದು ತಿಳಿಸಿ ಉದಯ ಸೌಹಾರ್ದ ಸಹಕಾರಿಯ ಅಧ್ಯಕ್ಷರಾದಿಯಾಗಿ ಎಲ್ಲರನ್ನು ಅಭಿನಂದಿಸಿದರು.

ಶ್ರೀ ಪ್ರವೀಣ ಗೋಡ್ಖಿಂಡಿ ಅವರ ಅದ್ಭುತ ಸುಶ್ರಾವ್ಯ ಕೊಳಲುವಾದನ ಅವರ ಕುಮಾರ ಷಡ್ಜ ಇವರ ಸಹಯೋಗದೊಂದಿಗೆ ಉತ್ಕೃಷ್ಟವಾಗಿತ್ತು.

ಉದಯ ಸೌಹಾರ್ದ ಸಹಕಾರಿಯ ನಿರ್ದೆಶಕ ಶ್ರೀ ಮುನಿರಾಜುರವರು ವಂದನಾರ್ಪಣೆ ಮಾಡಿದರು. ಕಾರ್ಯಕ್ರಮದಲ್ಲಿ ಬೆಳಿಗ್ಗೆ ಉಪಹಾರ, ಮಧ್ಯಾಹ್ನ ಊಟ ನಂತರ ಸಾಯಂಕಾಲವೂ ಊಟದ ವ್ಯವಸ್ಥೆ ಅತ್ಯಂತ ಉತ್ತಮವಾಗಿತ್ತು.

## ಸವಿತಾ ಸಮಾಜ ವಿವಿಧೋದ್ದೇಶ ಸೌಹಾರ್ದ ಸಹಕಾರಿ 5ನೇ ಶಾಖೆ ಉದ್ಘಾಟನೆ



**ಉಡುಪಿ :** ದಿನಾಂಕ 05–07–2022 ರಂದು ಬ್ರಹ್ಮಾವರದಲ್ಲಿ ಸಹಕಾರಿಯ 5ನೇ ಶಾಖೆ ಆರಂಭವಾಯಿತು. ಈ ಶಾಖಾ ಉದ್ಘಾಟನೆಯನ್ನು ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷ ಬಿ ಹೆಚ್ ಕೃಷ್ಣಾರೆಡ್ಡಿ ಇವರು ನೆರವೇರಿಸಿದರು. ಮುಖ್ಯ ಅಥಿತಿಗಳಾಗಿ ಶ್ರೀ ಭಾಸ್ಕರ್‌ಕಾಮತ್, ಶ್ರೀ ವೆಂಕಟೇಶ್ ಶಿಕಾರಿಪುರ, ಶ್ರೀ ವಿಶ್ವನಾಥ ಸಾಲ್ಯನ್ ಬಂಟ್ವಾಳ, ಶ್ರೀ ವಿಶ್ವನಾಥ ಭಂಡಾರಿ ಶ್ರೀ ನಿಂಜೂರು, ಶ್ರೀ ರಾಜೇಶ್ ಶೆಟ್ಟಿ, ಶ್ರೀ ಶ್ರೀಧರ್ ಹೆಗ್ಡೆ ಶಿವಮೊಗ್ಗ, ಶ್ರೀ ಎಸ್ ನಾರಾಯಣ ವಾರಂಬಳ್ಳಿ, ಶ್ರೀ ಸದಾಶಿವ ಬಂಗೇರ ಕುರ್ಕಾಲು, ಶ್ರೀ ಶಿವರಾಮ ಭಂಡಾರಿ ಹಂದಾಡಿ, ಶ್ರೀ ಪವನ್ ಬ್ರಹ್ಮಾವರ, ಶ್ರೀ ಬನ್ನಂಜೆ ಗೋವಿಂದ ಭಂಡಾರಿ ಉಪಸ್ಥಿತರಿದ್ದರು. ಅಧ್ಯಕ್ಷತೆಯನ್ನು ಸಹಕಾರಿ ಅಧ್ಯಕ್ಷ ನವೀನ್ ಚಂದ್ರ ಭಂಡಾರಿ ಮಣಿಪಾಲ ಇವರು ವಹಿಸಿದ್ದರು.

ಅಂಬಲಪಾಡಿ ಸವಿತಾ ಸಮಾಜ ವಿವಿಧೋದ್ದೇಶ ಸೌಹಾರ್ದ ಸಹಕಾರಿ ವತಿಯಿಂದ ಜಿಲ್ಲಾ ಸವಿತಾ ಸಮಾಜದ ಸಹಯೋಗದೊಂದಿಗೆ ಸವಿತಾ ಸಮಾಜಕ್ಕೆ ಸಹಕಾರಿ ಸಂಘಗಳ ಅವಶ್ಯಕತೆ ಮತ್ತು ಅನುಷ್ಠಾನ ಕುರಿತು ರಾಜ್ಯ ಮಟ್ಟದ ವಿಚಾರ ಸಂಕಿರಣವನ್ನು ಅಂಬಲಪಾಡಿ ಜಿಲ್ಲಾ ಸವಿತಾ ಸಮಾಜ ಸಮುದಾಯ ಭವನದಲ್ಲಿ ಆಯೋಜಿಸಲಾಯಿತು. ಈ ಸಂದರ್ಭದಲ್ಲಿ ಎಲ್ಲಾ ಜಿಲ್ಲೆಯ ಸವಿತಾ ಸಮಾಜದ ಮುಖಂಡರು ಹಾಗೂ ಸಿಬ್ಬಂದಿಗಳು ಉಪಸ್ಥಿತರಿದ್ದರು.

---

**ಚಿಕ್ಕಬಳ್ಳಾಪುರ :** ಶಿಕ್ಷಣ ಕ್ಷೇತ್ರದಲ್ಲಿ ವಿದ್ಯಾರ್ಥಿಗಳ ವಿದ್ಯಾರ್ಜನೆಗೆ ಪ್ರೋತ್ಸಾಹ ಮಾಡುವ ಉದ್ದೇಶದಿಂದ ಆಶೀರ್ವಾದ ಸೌಹಾರ್ದ ಸಹಕಾರಿ ನಿಯಮಿತ ಗೌರಿಬಿದನೂರು ರವರು ದಿನಾಂಕ 9.07.2022 ರಂದು ಗ್ರಾಮದ ಸರ್ಕಾರಿ ಪದವಿ ಪೂರ್ವ ಕಾಲೇಜಿನ ದ್ವಿತೀಯ ಪಿಯುಸಿಯ ಕಲಾವಿಭಾಗ ವಾಣಿಜ್ಯ ವಿಭಾಗ ಹಾಗೂ ವಿಜ್ಞಾನ ವಿಭಾಗದಲ್ಲಿ ಅತ್ಯುನ್ನತ ಶ್ರೇಣಿಯಲ್ಲಿ ತೇರ್ಗಡೆಯಾದ ವಿದ್ಯಾರ್ಥಿಗಳಿಗೆ ಮೂವಿಂಗ್ ಟ್ರೋಫಿ ಯನ್ನು ಕೊಡುವುದು ಅಲ್ಲದೆ ಉತ್ತಮ ಅಂಕಗಳನ್ನು ಗಳಿಸಿರುವ 9 ವಿದ್ಯಾರ್ಥಿಗಳಿಗೆ ರೂ.7500 ಗಳ ಸಹಾಯಧನ ಹಾಗೂ 380 ನೋಟ್ ಬುಕ್ ಮತ್ತು ಲೇಖನಿಗಳನ್ನು ವಿತರಿಸಲಾಯಿತು ಈ ಕಾರ್ಯಕ್ರಮದ ಅಧ್ಯಕ್ಷತೆಯನ್ನು ಪ್ರಾಂಶುಪಾಲರಾದ ಸತ್ಯೇಂದ್ರ ರವರು ಹಾಗೂ ಉಪ ಪ್ರಾಂಶುಪಾಲರಾದ ಸುಬ್ರಹ್ಮಣ್ಯಂ ಹಾಗೂ ಸಹಕಾರಿಯ ಸಿಇಓ ರವರಾದ ಶ್ರೀಮತಿ ಅನುಷಾ ಕೃಷ್ಣ ನಿರ್ದೇಶಕರಾದ ಹರೀಶ್ ಎಂಎಲ್ ಹಾಗೂ ಸಿಬ್ಬಂದಿ ವರ್ಗದವರು ಹಾಜರಿದ್ದರು.

---

**ಮಂಗಳೂರು :** ಮಿರಾಕಲ್ಸ್ ಆಫ್ ಮಿಲಾಗ್ರಿಸ್ ಕ್ರೆಡಿಟ್ ಸೌಹಾರ್ದ ಸಹಕಾರಿ ನಿ., ಇದರ 2ನೇ ವಾರ್ಷಿಕೋತ್ಸವದ ಅಂಗವಾಗಿ ದಿನಾಂಕ 08.07.2022 ರಂದು ಆಡಳಿತ ಮಂಡಳಿಯ ಪ್ರಾಯೋಜಕತ್ವದಲ್ಲಿ ಸಮಾಜ ಸೇವಾ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು. ಈ ನಿಟ್ಟಿನಲ್ಲಿ ವೆನ್ಲಾಕ್ ಆಸ್ಪತ್ರೆಯಲ್ಲಿನ ರೋಗಿಗಳ ಜೊತೆಯಲ್ಲಿರುವ ಸುಮಾರು 500ಕ್ಕೂ ಹೆಚ್ಚಿನ ಮಂದಿಗೆ ರಾತ್ರಿಯ ಊಟದ ವ್ಯವಸ್ಥೆಯನ್ನು ಮಾಡಲಾಯಿತು. ಈ ಸಂದರ್ಭದಲ್ಲಿ ದಕ್ಷಿಣ ಕನ್ನಡ ಜಿಲ್ಲಾ ಒಕ್ಕೂಟದ ಅಧ್ಯಕ್ಷರಾದ ಸುರೇಶ ರೈ, ಜಿ.ಕೆ ಟಯರ್ಸ್‌ನ ಮಾಲೀಕರಾದ ಜಯಪ್ರಕಾಶ್, ಮಿರಾಕಲ್ಸ್ ಸಂಸ್ಥೆಯ ವ್ಯವಸ್ಥಾಪಕ ನಿರ್ದೇಶಕರಾದ ಮೊಹಮ್ಮದ್ ಇಕ್ಬಾಲ್ ಶೇಖ್ ಹಾಗೂ ಸಂಸ್ಥೆಯ ನಿರ್ದೇಶಕರು ಮತ್ತು ಸಿಬ್ಬಂದಿಗಳು ಉಪಸ್ಥಿತರಿದ್ದರು.

## ಸತತ ಲಾಭದಲ್ಲಿ ಮುನ್ನಡಿಯುತ್ತಿರುವ ಕಲ್ಯಾಣ ಪತ್ತಿನ ಸೌಹಾರ್ದ ಸಹಕಾರಿ ನಿ., ಬೀದರ. ಇದರ 22ನೇ ಸಾಮಾನ್ಯ ಸಭೆ.



**ಬೀದರ :** ಆಡಳಿತ ಮಂಡಳಿಯ ಮಾರ್ಗದರ್ಶನ ಹಾಗೂ ಸದಸ್ಯರ ಸಹಕಾರದಿಂದ ಕಲ್ಯಾಣ ಪತ್ತಿನ ಸೌಹಾರ್ದ ಸಹಕಾರಿಯು ಸತತ ಲಾಭದತ್ತ ಮುನ್ನುಗ್ಗುತ್ತಿದೆ ಎಂದು ಸಹಕಾರಿಯ ಅಧ್ಯಕ್ಷರಾದ ಗುರುನಾಥ ಜ್ಯಾಂತಿಕರ ನುಡಿದರು. ನಗರದ ಕಾಳಿದಾಸರಾವ ದೇಶಪಾಂಡೆ ಕಾಂಪ್ಲೇಕ್ಸ್ ನಲ್ಲಿ ಆಯೋಜಿಸಿದ ಕಲ್ಯಾಣ ಪತ್ತಿನ ಸೌಹಾರ್ದ ಸಹಕಾರಿ ನಿ., ಬೀದರ ಇದರ 22ನೇ ಸಾಮಾನ್ಯ ಸಭೆಯನ್ನು ಉದ್ಘಾಟಿಸಿ ಮಾತನಾಡಿದರು. ಕಳೆದ ಇಪ್ಪತ್ತೊಂದು ವರ್ಷದಲ್ಲಿ ಅನೇಕ ಪೈಪೋಟಿಯ ಮಧ್ಯ ಸತತ ಲಾಭದಲ್ಲಿ ನಡೆಯುತ್ತಿದೆ. ಇದಕ್ಕೆ ಆಡಳಿತ ಮಂಡಳಿಯ ನಿರ್ದೇಶಕರ, ಸದಸ್ಯರ ಹಾಗೂ ಸಿಬ್ಬಂದಿಗಳ ಸತತ ಪ್ರಯತ್ನದ ಫಲವಾಗಿದೆ ಎಂದರು. ಸಾಮಾನ್ಯ ಸಭೆಯಲ್ಲಿ 2021–22ನೇ ಸಾಲಿನಲ್ಲಿ ಸದಸ್ಯರಿಗೆ ನಿವಳ 11% ಲಾಭಾಂಶವನ್ನು ವಿತರಿಸಲು ಸಭೆಯಲ್ಲಿ ಸರ್ವಾನುಮತದಿಂದ ತೀರ್ಮಾನಿಸಲಾಯಿತ್ತು.

**ಸನ್ಮಾನ :** ಇದೇ ಸಂದರ್ಭದಲ್ಲಿ ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು ಇದರ ರಾಜ್ಯಮಟ್ಟದ ಆಡಳಿತ ಮಂಡಳಿಯ ಚುನಾವಣೆಯಲ್ಲಿ ಕಲಬುರಗಿ ಪ್ರಾಂತದಿಂದ ಅತಿ ಹೆಚ್ಚು ಮತಗಳಿಂದ ಸತತ ಐದನೆ ಬಾರಿ ಆಯ್ಕೆಯಾದ ಸಹಕಾರಿ ರತ್ನ ಗುರುನಾಥ ಜ್ಯಾಂತಿಕರ್ ಇವರಿಗೆ ಬೀದರ ಜಿಲ್ಲಾ ಒಕ್ಕೂಟದ ಆಡಳಿತ ಮಂಡಳಿ ಹಾಗೂ ಕಲ್ಯಾಣ ಪತ್ತಿನ ಸೌಹಾರ್ದ ಸಹಕಾರಿಯ ಆಡಳಿತ ಮಂಡಳಿ ಹಾಗೂ ಸಿಬ್ಬಂದಿ ವರ್ಗದವರಿಂದ ಹಾಗೂ ಜಿಲ್ಲೆಯ ವಿವಿಧ ಸಂಘ ಸಂಸ್ಥೆಗಳಿಂದ ಗಣ್ಯರಿಂದ ಸನ್ಮಾನಿಸಲಾಯಿತ್ತು.

ಸಹಕಾರಿ ವತಿಯಿಂದ ಉತ್ತಮ ಅಂಕಗಳಿಸಿದ ಸದಸ್ಯರ ಮಕ್ಕಳಾದ ವಿನಾಯಕ ಎಸ್, ಹೊಸಮನಿ, ವಿವೇಕ ಎ. ಹೊಸಮನಿ, ಮಾಹಾಂತೇಶ ತಂದೆ ನಾಗರಾಜ, ಕು ರಿತಿಕಾ ತಂದೆ ಸುನೀಲಕುಮಾರ ಅಗ್ರವಾಲ್, ಸೌಮ್ಯ ತಂದೆ ಜೈರಾಜ, ಹಾಗೂ ರಾಸೂರೆ ರಜತ, ಇವರಿಗೆ ಸನ್ಮಾನಿಸಲಾಯಿತ್ತು. ಅದೆ ರೀತಿ ಉತ್ತಮ ಗ್ರಾಹಕರಾದ ಶೇಖಿಬೊದಿನ್, ಅನಿತಾ ಕುಂಬಾರ ಹಾಗೂ ಶರಣಪ್ಪ ಕುಂಬಾರ ಇವರಿಗೆ ಸನ್ಮಾನಿಸಲಾಯಿತ್ತು. ಸಭೆಯಲ್ಲಿ ಉಪಾಧ್ಯಕ್ಷರಾದ ಬಸವರಾಜ ಸ್ವಾಮಿ, ನಿರ್ದೇಶಕರುಗಳಾದ ರಾಜಕುಮಾರ ಧೂಮನಸೂರೆ, ದೀಪಾ ಅಗ್ರವಾಲ್, ರೂಮಾದೇವಿ ಎಸ್ ಹುಡೆದ್, ಮುಜಾಹಿದ್ ಪರ್ವಿನ್, ರಾಜು ಬೇಮಳಖೇಡಕರ್, ಮುಖ್ಯ ಕಾರ್ಯನಿರ್ವಾಹಕರಾದ ಶಿವರಾಜ ಹೂಗಾರ, ಸಿಬ್ಬಂದಿಗಳಾದ ಅನೀಲಕುಮಾರ ಕೊಡಂಬಲ್, ಶಿವಾನಂದ ಬಸಣೋರ್, ಸಂಜೀವಕುಮಾರ,ಶ್ರೀಕಾಂತ ಮನ್ಮಥಪ್ಪಾ ದೇವಿ ವರ್ಮಾ, ಪವನಕುಮಾರ ರವಿಕುಮಾರ ಲದ್ದೆ, ರಾಹುಲ್, ಸದಸ್ಯರು ಗ್ರಾಹಕರು ಉಪಸ್ಥಿತರಿದ್ದರು.

## ಶ್ರೀಶಾ ಸೌಹಾರ್ದ ಸಹಕಾರಿಯಿಂದ ಮತ್ತೊಂದು ಮಹತ್ವದ ಯೋಜನೆ.




**ಮಂಗಳೂರು :** ಮಂಗಳೂರು ಹೊರವಲಯದ ಪಜೀರುನಲ್ಲಿನ ಗೋಶಾಲೆಯ ಆವರಣದಲ್ಲಿ "ನಾವ್ಯೆನೂರು" ಸಂಸ್ಥೆಯ ಮುಖ್ಯಸ್ಥರಾದ ಡಾ. ಮನೋಹರ ಉಪಾಧ್ಯಾಯರ ಮಾರ್ಗದರ್ಶನದಲ್ಲಿ ಮತ್ತು ಕುತ್ತಾರಿನ ಬಾಲಸಂರಕ್ಷಣಾ ಕೇಂದ್ರದ ಸಹಕಾರದೊಂದಿಗೆ ಸುಮಾರು 50 ಹಣ್ಣು ಕೊಡುವ ಸಸಿಗಳನ್ನು ನೆಡಲಾಯಿತು. ಈ ಗಿಡಗಳು ಮರಗಳಾಗಿ ಬೆಳೆದು ಅವು ಕೊಡುವ ಹಣ್ಣುಗಳು ಮುಖ್ಯವಾಗಿ ಪಕ್ಷಿಗಳಿಗೆ,ಮಂಗಗಳಿಗೆ ಹಾಗೂ ಮತ್ತಿತರ ಪ್ರಾಣಿಗಳಿಗೆ ದೊರೆಯಬೇಕು, ಉಳಿದದ್ದು ಮನುಷ್ಯರಿಗೆ ಎಂಬ ಸದುದ್ದೇಶದಿಂದ ಈ ಕಾರ್ಯಕ್ರಮ ಕಾಡುಮಾವು, ನೇರಳೆ, ಹಲಸು.ಮುಂತಾದ ಹಣ್ಣು ಕೊಡುವ ಸಸಿಗಳನ್ನು ಮಾತ್ರ ನೆಟ್ಟದ್ದು.

ನಾವು ನೆಡುವ ಸಸಿಗಳಿಗೆ ಪ್ರಾಣಿಗಳಿಂದ ರಕ್ಷಣೆ ಮತ್ತು ಬೇಸಿಗೆಯಲ್ಲಿ ನೀರುಣಿಸುವ ಜವಾಬ್ದಾರಿಯನ್ನು ವಹಿಸಿಕೊಳ್ಳುವ ಸಂಸ್ಥೆಗಳಿಗೆ ಮಾತ್ರ ನಮ್ಮ ಈ ಕಾರ್ಯಕ್ರಮಗಳಿಗೆ ಸಹಯೋಗ ನೀಡಲು ಅವಕಾಶ. ಶ್ರೀಶಾ ಸೌಹಾರ್ದ ಸಹಕಾರಿಯು, ನಮ್ಮ ದೇಶಕ್ಕೆ ಸ್ವಾತಂತ್ರ ಬಂದು 75 ವರ್ಷಗಳಾದ ಪ್ರಯುಕ್ತ ಇದೇ ವರ್ಷದಲ್ಲಿ ಇಂತಹ 75 ವಿವಿಧ ಸ್ಥಳಗಳಲ್ಲಿ ವಿವಿಧ ಸಂಘ ಸಂಸ್ಥೆಗಳ ಸಹಕಾರ ಸಹಯೋಗದೊಂದಿಗೆ ಇಂತಹ ಕಾರ್ಯಕ್ರಮಗಳನ್ನು ಒಂದು ವರ್ಷದ ಅವಧಿಯಲ್ಲಿ ಹಮ್ಮಿಕ್ಕೊಳ್ಳಲು ಯೋಜನೆ ರೂಪಿಸಿದೆ.

ಶ್ರೀಶಾ ಹಮ್ಮಿಕ್ಕೊಳ್ಳುತ್ತಿರುವ ಇಂತಹ ಕಾರ್ಯಕ್ರಮಗಳಲ್ಲಿ ನೆಡುವ ಸಸಿಗಳಲ್ಲಿ 50 % ಉಳಿದು ಬೆಳೆದು ಹೂ ಹಣ್ಣು ಹಂಪಲುಗಳು ನೀಡುವಂತಾಗಿ, ಲಕ್ಷಾಂತರ ಪ್ರಾಣಿ ಪಕ್ಷಿಗಳಿಗೆ ಮತ್ತು ಮನುಷ್ಯರಿಗೆ ದೊರೆಯುವಂತಾದರೆ ಶ್ರೀಶಾದ ಈ ಶ್ರಮ ಸಾರ್ಥಕ. ಕಾಡನ್ನು ನಾಡು ಮಾಡಿಕೊಂಡಿರುವ ನಾವು ಅಂಗಡಿಗಳಲ್ಲಿ ಆಹಾರ ಪದಾರ್ಥಗಳನ್ನು ಖರೀದಿಸುತ್ತೇವೆ. ಆದರೆ ಕಾಡುಗಳನ್ನೆ ಅವಲಂಬಿಸಿರುವ ಈ ಪ್ರಾಣಿ ಪಕ್ಷಿಗಳು ತಮ್ಮ ಆಹಾರ ವಿಹಾರಕ್ಕಾಗಿ ಎಲ್ಲಿ ಹೋಗಬೇಕು? ಎಂಬ ಚಿಂತನೆಯ ಫಲವೇ ಈ ಯೋಜನೆ.

## "ಸಹಕಾರ ಸಂಸ್ಥೆಗಳಲ್ಲಿ ಪ್ರಜಾಪ್ರಭುತ್ವ, ಪ್ರಾಮಾಣಿಕತೆ ಮತ್ತು ಪಾರದರ್ಶಕತೆ"

– ಶ್ರೀ ಶಂಕರ ಹೆಗಡೆ

ಈ ಹಿಂದೆ ದೇಶದಲ್ಲಿ ಸ್ವಾತಂತ್ರ್ಯ ಚಳುವಳಿಯು ಜನಸಮುದಾಯದ ಚಳುವಳಿಯಾದಂತೆ ಸಹಕಾರಿ ಆಂದೋಲನವಾಗಿ ಗುರುತಿಸಿಕೊಂಡಿತು. ಸಣ್ಣ ಮತ್ತು ಅತಿಸಣ್ಣ ರೈತರು, ಭೂರಹಿತ ಕಾರ್ಮಿಕರು, ಮೀನುಗಾರರು, ಕುಶಲಕರ್ಮಿಗಳ ಒತ್ತಾಸೆ ಮತ್ತು ಆಕಾಂಕ್ಷೆಗಳೇ ಪ್ರಮುಖವಾಗಿ ಅಡಕವಾಗಿದ್ದವು. ಸಹಕಾರ ಚಳುವಳಿಯ ಬಗ್ಗೆ ನಾವು ತಿಳಿದುಕೊಳ್ಳಬೇಕಾದರೆ ಸುಮಾರು 5 ಶತಾಬ್ಧಿಗಳ ಹಿಂದಕ್ಕೆ ಹೋಗಬೇಕಾಗುತ್ತದೆ. 1844ರಲ್ಲಿ ಇಂಗ್ಲೆಂಡಿನಲ್ಲಿ ಗ್ರಾಹಕ ಚಳುವಳಿಯ ಮೂಲಕ ಪ್ರಾರಂಭವಾದ ಸಹಕಾರಿ ಸಂಸ್ಥೆಗಳು ಭಾರತದಲ್ಲಿ ಸರ್ಕಾರದವರ ಕೃಪಾಪೋಷಿತವಾಗಿ 1905ರಲ್ಲಿ ಗದಗ್ ಜಿಲ್ಲೆಯ ಕಣಗಿನಹಾಳದಲ್ಲಿ ಮೊಟ್ಟಮೊದಲ ಸಹಕಾರಿ ಸಂಘ ಪ್ರಾರಂಭವಾಗಿದ್ದು ಒಂದು ಇತಿಹಾಸ. ಸಹಕಾರ ಸಂಸ್ಥೆಗಳು ಪ್ರಜಾಸತ್ತಾತ್ಮಕ ತಳಹದಿಯ ಮೇಲೆ ಸ್ಥಾಪಿಸಲಾದ ಸಂಸ್ಥೆಗಳಾಗಿದ್ದು ಸಂಪೂರ್ಣ ನಿಯಂತ್ರಣ ಸಂಘದ ಸದಸ್ಯರುಗಳಿಗೆ ಒಳಪಟ್ಟಿರುತ್ತದೆ. ಸಂಘದ ಕಾರ್ಯನೀತಿಯನ್ನು ರೂಪಿಸುವಲ್ಲಿ ಮತ್ತು ತೀರ್ಮಾನಗಳನ್ನು ಕೈಗೊಳ್ಳುವಲ್ಲಿ ಭಾಗವಹಿಸುತ್ತಾರೆ. ಈ ಸಂಸ್ಥೆಗಳ ಚುನಾಯಿತ ಪ್ರತಿನಿಧಿಗಳು ಸದಸ್ಯರುಗಳಿಗೆ ಜವಾಬ್ದಾರರಾಗಿರುತ್ತಾರೆ. ಮತ್ತು ಉತ್ತರದಾಯಿತ್ವವನ್ನು ಹೊಂದಿರುತ್ತಾರೆ.

ಸಹಕಾರಿ ಕ್ಷೇತ್ರದ ಮುಖ್ಯ ತಾಕತ್ತು ಎಂದರೆ ಅದರಲ್ಲಿಯ ಸಮುದ್ರಸದೃಶಗುಣ. ಸಮುದ್ರಕ್ಕೆ ನೀವು ಬಾಟಲಿ, ಪ್ಲಾಸ್ಟಿಕ್ ಕಪ್, ಬೀರು ಬಾಟಲಿ ಮುಂತಾದ ಕಸ ಎಸೆಯಿರಿ ಅದು ಕೆಲ ಸಮುದ್ರದಲ್ಲಿ ಹೊರತಳ್ಳಿಬಿಡುತ್ತದೆ. ಸಹಕಾರ ಕ್ಷೇತ್ರದ್ದೂ ಇದೇ ಕೆಲಸ. ಭ್ರಷ್ಟರು ಕೆಲಕಾಲ ಮೆರೆದಿರಬಹುದು. ಆದರೆ ಅವರು ಇಲ್ಲಿಯೂ ಸಹ ಸಮುದ್ರಕ್ಕೆ ಎಸೆಯುವ ಕಸವೇ. ಆದರೆ ಈ ಕ್ಷೇತ್ರದಲ್ಲಿ ಮಹಾತ್ಮರು ಮಾಡಿರುವ ಅನೇಕ ವರ್ಷಗಳ ಸಾಧನೆ ಒಮ್ಮೊಮ್ಮೆ ವ್ಯರ್ಥವಾಗಿ ಹೋಗುವುದು. ಮತ್ತೊಂದು ಅಘಾತಕಾರಿ ವಿಷಯವೆಂದರೆ ವಂಚನೆಯ ಜಾಲದಲ್ಲಿ ಸಂಸ್ಥೆಗಳು ಕೂಡ ಕಣ್ಮರೆಯಾಗುವುದು ಒಂದು ಆತಂಕಕಾರಿ ವಿಷಯ. ಇಂದಿನ ದಿನಮಾನದ ವಾಣಿಜ್ಯೀಕರಣ ಕಂಪನಿ ಲಾಭಿ ಖಾಸಗೀಕರಣ ವಾತಾವರಣದಲ್ಲಿ ಕೊನೆಗೂ ಸಹಕಾರ ಚಳುವಳಿಯೇ ಉತ್ತಮ ಉಪಾಯವಾಗಿರುತ್ತದೆ.

ಸಹಕಾರ ಸಂಸ್ಥೆಯಲ್ಲಿ ಪಾರದರ್ಶಕತೆ ಇರಲೇಬೇಕು. ಪಾರದರ್ಶಕತೆ ಪ್ರಾಮಾಣಿಕತೆ ಮತ್ತು ವಿಶ್ವಾಸಾರ್ಹತೆ ಸಹಕಾರ ಸಂಘದ ಮೂಲಮಂತ್ರವಾಗಿರಬೇಕು. ಒಮ್ಮೊಮ್ಮೆ ವ್ಯಕ್ತಿಗಳ ಭ್ರಷ್ಟಾಚಾರ ಸರ್ಕಾರದ ಅಪರಿಮಿತ ಹಸ್ತಕ್ಷೇಪ ಅಧಿಕಾರಿಗಳ ಭ್ರಷ್ಟಾಚಾರದಿಂದ ಸಹಕಾರ ಸಂಸ್ಥೆಗಳು ನೆಲಕಚ್ಚಿಸಿಬಿಡುವುದು ಘೋರ ದುರಂತ. ಆದರೆ ಸಂಘದಲ್ಲಿ ನಿಷ್ಠವಂತ ಸಹಕಾರಿಗಳ ಮತ್ತು ಪ್ರಾಮಾಣಿಕ ಅಧಿಕಾರಿ ವರ್ಗದ ಬದ್ಧತೆಯುಳ್ಳ ಸಹಕಾರಿಗಳ ಬಲದೊಂದಿಗೆ ಸಹಕಾರ ಸಂಸ್ಥೆಗಳು ಪುನಶ್ಚೇತನ ಪಡೆಯಬಲ್ಲವು. ಎಲ್ಲಿಯವರೆಗೆ ಸಂಘಗಳು ಕಾರ್ಯಾಚರಣೆಯಲ್ಲಿ ಪಾರದರ್ಶಕತೆ ಮತ್ತು ಪ್ರಾಮಾಣಿಕತೆ ಇರುತ್ತದೆಯೋ ಅಲ್ಲಿಯವರೆಗೆ ಸಂಘಗಳು ಉತ್ತಮ ರೀತಿಯಿಂದ ಅಭಿವೃದ್ಧಿ ಹೊಂದಬಲ್ಲವು. ಈ ಹಿನ್ನೆಲೆಯಲ್ಲಿ ಸಹಕಾರ ಶಿಕ್ಷಣ ಮತ್ತು ತರಬೇತಿ ಮಾರ್ಗದರ್ಶನ ಅತಿ ಅವಶ್ಯ ಒಟ್ಟಿನಲ್ಲಿ ಹೇಳಬೇಕಾದರೆ 1914 ರಲ್ಲಿ ರಚನೆಗೊಂಡ ಸರ್ ಎಡ್ವರ್ಡ್ ಮೆಕ್ಲಗಾನ್ ಸಮಿತಿ ಹೇಳಿದಂತೆ "ಶಿಕ್ಷಣವಿಲ್ಲದೇ ಸಹಕಾರವಿಲ್ಲ"" ಎಂಬ ಹೇಳಿಕೆ ನಿರಂತರವೂ ಸಹಕಾರಿ ಚಳುವಳಿಯ ಮುನ್ನಡೆಯಲ್ಲಿ ಮಾರ್ಗದರ್ಶನವಾಗಿ ನಿಲ್ಲಬಲ್ಲದು.

ಜೈ ಹಿಂದ್ ಜೈ ಸಹಕಾರ

---

**ಕೊಪ್ಪಳ :** ವಿಕಾಸಜ್ಯೋತಿ ಪತ್ತಿನ ಸೌಹಾರ್ದ ಸಹಕಾರಿ ನಿ., ಯಲಬುರ್ಗಾ ಜಿ॥ ಕೊಪ್ಪಳ ಇದರ ಅಧ್ಯಕ್ಷರಾಗಿ ಶ್ರೀ ಶಿವನಗೌಡ ಬನಪ್ಪಗೌಡ್ರ ಹಾಗೂ ಉಪಾಧ್ಯಕ್ಷರಾಗಿ ಶ್ರೀಮತಿ ವಿದ್ಯಾ ಶ್ರೀಶೈಲಪ್ಪ ಹಳ್ಳಿಕೇರಿ ಇವರುಗಳು ಅವಿರೋಧವಾಗಿ ಆಯ್ಕೆಯಾಗಿರುತ್ತಾರೆ.

---

## ಶ್ರೀ ಸೀತಾರಾಘವ ಸೌಹಾರ್ದ ಸಹಕಾರಿಯ ವಾರ್ಷಿಕ ಸಾಮಾನ್ಯ ಸಭೆ

**ಹೊಸದುರ್ಗ :** ದಿನಾಂಕ 21.07.2022 ರಂದು ಶ್ರೀ ಸೀತಾರಾಘವ ಸೌಹಾರ್ದ ಸಹಕಾರ ಬ್ಯಾಂಕ್ ನಿ., ಹೊಸದುರ್ಗ ಇದರ 2021–22ನೇ ಸಾಲಿನ ಸರ್ವಸದಸ್ಯರ ವಾರ್ಷಿಕ ಮಹಾಸಭೆಯು ಶ್ರೀ ಗಣೇಶ ಸದನ, ಬಸ್ ನಿಲ್ದಾಣ, ಹೊಸದುರ್ಗದಲ್ಲಿ ಬ್ಯಾಂಕಿನ ಅಧ್ಯಕ್ಷರಾದ ಶ್ರೀಯುತ ಹಂಜಿ ಶಿವಸ್ವಾಮಿ ಇವರ ಅಧ್ಯಕ್ಷತೆಯಲ್ಲಿ ನಡೆಯಿತು.

## ಸಮನ್ವಯ ಸಮಿತಿ ಸಭೆ

**ತುಮಕೂರು :** ದಿನಾಂಕ 05.07.2022 ರಂದು ತುಮಕೂರು ಸಂಘಗಳ ಲೆಕ್ಕಪರಿಶೀಧನಾ ಇಲಾಖೆ ವತಿಯಿಂದ ತುಮಕೂರು ಜಿಲ್ಲೆಯ ಉಪನಿಬಂಧಕರ ಕಚೇರಿಯಲ್ಲಿ ತುಮಕೂರು ಜಿಲ್ಲೆಯ ಸಮನ್ವಯ ಸಮಿತಿ ಸಭೆಯನ್ನು ಆಯೋಜಿಸಲಾಗಿತ್ತು. ಸದರಿ ಸಭೆಯಲ್ಲಿ ತುಮಕೂರು ಜಿಲ್ಲಾ ಸಂಯೋಜಕರಾದ ಶ್ರೀ ಉಮೇಶ್ ಎ.ಎಸ್. ಇವರು ಭಾಗವಹಿಸಿ ತುಮಕೂರು ಜಿಲ್ಲೆಯ ಸೌಹಾರ್ದ ಸಹಕಾರಿಗಳಿಗೆ ಸಂಬಂಧಿಸಿದಂತೆ ಮಾಹಿತಿ ನೀಡಿದರು.

# ಉತ್ತಮ ರಾಷ್ಟ್ರವನ್ನು ನಿರ್ಮಿಸುವತ್ತ ಭಾರತದ ಸಹಕಾರಿ ಸಂಸ್ಥೆಗಳ ಸಾಧನೆಗಳ ಮೈಲಿಗಲ್ಲು

ಮೂಲ : "ದಿ ಕೋ-ಆಪರೇಟರ್" ಮಾಸ ಪತ್ರಿಕೆ ಕನ್ನಡ ಅನುವಾದ : ಶ್ರೀಮತಿ ಕವಿತ ಆರ್, ಕಿರಿಯ ವ್ಯವಸ್ಥಾಪಕರು, ಕ.ರಾ.ಸೌ.ಸಂ.ಸ.ನಿ., ಬೆಂಗಳೂರು.

ಭಾರತದಲ್ಲಿ, ದೇಶವು ಆರ್ಥಿಕ ಸುಸ್ಥಿರತೆಯನ್ನು ಸಾಧಿಸಲು ಸಹಕಾರಿ ಸಂಸ್ಥೆಗಳು ಹಲವಾರು ಪ್ರಯೋಜನಗಳನ್ನು ನೀಡುತ್ತವೆ. ಐತಿಹಾಸಿಕ ದಾಖಲೆಗಳ ಪ್ರಕಾರ, ಭಾರತದ ರೈತರನ್ನು ಶ್ರೀಮಂತರ ಸಾಲಗಳಿಂದ ರಕ್ಷಿಸಲು ಅಂದಿನ ಬ್ರಿಟೀಶ್ ಸರಕಾರ 1904ರಲ್ಲಿ ಸಹಕಾರ ಕಾಯ್ದೆಯನ್ನು ಜಾರಿ ಮಾಡುವ ಮೂಲಕ ಸಹಕಾರ ಚಳುವಳಿಯನ್ನು ಪ್ರಾರಂಭಿಸಲಾಯಿತು. ಗ್ರಾಮೀಣ ಭಾರತದಲ್ಲಿ 98% ವ್ಯಾಪ್ತಿಯೊಂದಿಗೆ, ಸಹಕಾರಿಗಳು ಆರ್ಥಿಕತೆಯಲ್ಲಿ ಮಹತ್ವದ ಪಾತ್ರವನ್ನು ವಹಿಸುತ್ತವೆ.

ಸಹಕಾರಿ ಸಂಸ್ಥೆಗಳು ಗ್ರಾಮೀಣ ಆರ್ಥಿಕತೆಯ ಬೆನ್ನೆಲುಬು, ಸುಸ್ಥಿರ ಜೀವನೋಪಾಯ ಮತ್ತು ಬಡವರಿಗೆ ಆದಾಯವನ್ನು ಖಾತ್ರಿಪಡಿಸುತ್ತದೆ. ಭಾರತದಲ್ಲಿ ಸಹಕಾರ ಸಂಸ್ಥೆಗಳು ಕೃಷಿ, ಹೈನುಗಾರಿಕೆ, ಅರಣ್ಯ, ಮೀನುಗಾರಿಕೆ, ಸಾಲ ಮತ್ತು ಬ್ಯಾಂಕಿಂಗ್, ವಸತಿ ಮತ್ತು ನಿರ್ಮಾಣ ಸೇರಿದಂತೆ ವಿವಿಧ ಕೈಗಾರಿಕೆಗಳಲ್ಲಿ ರೈತರು, ಮಹಿಳೆಯರು, ಯುವಕರು, ಬಡವರು ಮತ್ತು ಅಂಚಿನಲ್ಲಿರುವವರನ್ನು ಬೆಂಬಲಿಸುತ್ತವೆ.

ಬ್ರಿಟಿಷ್ ವಸಾಹತುಶಾಹಿ ಆಳ್ವಿಕೆಯಲ್ಲಿ ಸ್ಥಾಪನೆಯಾದ ಏಷ್ಯಾ ಮತ್ತು ಪೆಸಿಫಿಕ್‌ನಲ್ಲಿನ ಇತರ ಸಹಕಾರಿ ಸಂಸ್ಥೆಗಳಿಗೆ ಭಾರತೀಯ ಸಹಕಾರ ಚಳುವಳಿಯು ಮಾದರಿಯಾಗಿ ಕಾರ್ಯನಿರ್ವಹಿಸುತ್ತಿದೆ. ಸಹಕಾರ ನಮ್ಮ ದೇಶದಲ್ಲಿ ಜೀವನ ಪದ್ಧತಿಯಾಗಿ ಬೆಳೆದಿದೆ. ಇದಕ್ಕೆ ಪರ್ಯಾಯ ವ್ಯವಸ್ಥೆ ಇರದಿರುವುದು ಸಹಕಾರ ಕ್ಷೇತ್ರದ ಹೆಮ್ಮೆ.

1990ರ ದಶಕದ ಆರಂಭದಲ್ಲಿ, ಭಾರತದಲ್ಲಿ ಬ್ರಿಟಿಷ್ ವಸಾಹತುಶಾಹಿ ಆಡಳಿತವು ಸಹಕಾರಿಗಳನ್ನು ಉತ್ತೇಜಿಸಿತು. ಬಡ ರೈತರನ್ನು ಲೇವಾದೇವಿದಾರರ ಕಿರುಕುಳದಿಂದ ರಕ್ಷಿಸಲು, ರೈಫಿಸೆನ್ ಸಹಕಾರಿ ಬ್ಯಾಂಕ್ ಪರಿಕಲ್ಪನೆಯ ಆಧಾರದ ಮೇಲೆ ಗ್ರಾಮೀಣ ಭಾರತದಲ್ಲಿ ಸಾಲ ಸಹಕಾರಿಗಳನ್ನು ಪ್ರೋತ್ಸಾಹಿಸಲಾಯಿತು.

1903ರಲ್ಲಿ ಬಂಗಾಳ ಸರ್ಕಾರದ ಸಹಾಯದಿಂದ ಸ್ಥಾಪಿಸಲಾದ ಮೊದಲ ಸಾಲ ಸಹಕಾರ ಸಂಘವನ್ನು ಬ್ರಿಟಿಷ್ ಸರ್ಕಾರದ ಸೌಹಾರ್ದ ಸೊಸೈಟೀಸ್ ಆಕ್ಟ್ ಅಡಿಯಲ್ಲಿ ನೋಂದಾಯಿಸಲಾಯಿತು. ಸಹಕಾರ ಸಂಘಗಳ ಪ್ರತಿನಿಧಿಗಳು ಮತ್ತು ಬೆಂಬಲಿಗರು 1990ರ ದಶಕದ ಮಧ್ಯಭಾಗದಲ್ಲಿ ಸಹಕಾರ ಚಳುವಳಿಗೆ ಸ್ವಾಯತ್ತತೆ ಮತ್ತು ಸ್ವಾತಂತ್ರ್ಯವನ್ನು ಉತ್ತೇಜಿಸಲು ಕ್ರಮಗಳನ್ನು ತೆಗೆದುಕೊಂಡರು.

ಕೇಂದ್ರ ಸರ್ಕಾರವು 2002 ರಲ್ಲಿ ಹೊಸ ರಾಷ್ಟ್ರೀಯ ಸಹಕಾರ ನೀತಿಯನ್ನು ಜಾರಿಗೆ ತಂದಿತು. ಈ ಹೊಸ ಕಾರ್ಯ ತಂತ್ರವನ್ನು ಸಹಕಾರಿಗಳನ್ನು ಬಲಪಡಿಸಲು ಮತ್ತು ದುರ್ಬಲರ ರಕ್ಷಣೆಗಾಗಿ ಮಾರುಕಟ್ಟೆ ವ್ಯವಸ್ಥೆಗೆ ಸಮರ್ಥ ಪರ್ಯಾಯವಾಗಿ ಉತ್ತೇಜಿಸಲು ರಚಿಸಲಾಗಿದೆ. ಭಾರತೀಯ ಸಂವಿಧಾನದ 97ನೇ ತಿದ್ದುಪಡಿಯನ್ನು (2012) ನ್ಯಾಷನಲ್ ಕೋ-ಆಪರೇಟಿವ್ ಯೂನಿಯನ್ ಆಫ್ ಇಂಡಿಯಾ ಮತ್ತು ಇತರ ಸಹಕಾರಿ ಚಳುವಳಿ ಬೆಂಬಲಿಗರ ಸಹಾಯದಿಂದ ಸಹಕಾರ ಚಳುವಳಿಯ ಪರವಾಗಿ ಅಂಗೀಕರಿಸಲಾಯಿತು. ತಿದ್ದುಪಡಿಯು ಸಹಕಾರಿ ರಚನೆಯನ್ನು ಭಾರತೀಯ ನಿವಾಸಿಗಳ ಮೂಲಭೂತ ಹಕ್ಕು ಎಂದು ಗುರುತಿಸಿದೆ ಮತ್ತು ರಾಜ್ಯ ಸರ್ಕಾರಗಳು ಸ್ವಾಯತ್ತ ಸಹಕಾರಿಗಳ ಬೆಳವಣಿಗೆಗೆ ಅನುಕೂಲಕರವಾದ ಕಾನೂನು ವಾತಾವರಣವನ್ನು ಸೃಷ್ಟಿಸಲು ಅಗತ್ಯವಿದೆ.

ಯುವ ಸಹಕಾರ್ (ಯುವ ಸಹಕಾರಿ) ಯೋಜನೆಯನ್ನು 2018 ರಲ್ಲಿ ಎನ್‌ಸಿಡಿಸಿಯು ಸಹಕಾರಿ ಉದ್ಯಮ ನೆರವು ಮತ್ತು ನವೋದ್ಯಮ ಯೋಜನೆಯಾಗಿ ಯುವ ಉದ್ಯಮಿಗಳನ್ನು ಸಹಕಾರಿಗಳನ್ನು ರಚಿಸಲು ಪ್ರೋತ್ಸಾಹಿಸಲು ಪರಿಚಯಿಸಿತು. ಈ ಕಾರ್ಯಕ್ರಮದ ಮೂಲಕ ಯುವಕರು ಯೋಜನೆಯ ವೆಚ್ಚದ 80% ವರೆಗೆ ಪಡೆಯಬಹುದು. ಬ್ಯಾಂಕಿಂಗ್ ನಿಯಂತ್ರಣ ತಿದ್ದುಪಡಿ ಸಹಕಾರಿ ಬ್ಯಾಂಕ್‌ಗಳನ್ನು ಭಾರತೀಯ ರಿಸರ್ವ್ ಬ್ಯಾಂಕ್‌ನ ನೇರ ಮೇಲ್ವಿಚಾರಣೆಗೆ ಒಳಪಡಿಸುವ ಮಸೂದೆಯನ್ನು 2020ರಲ್ಲಿ ಸಂಸತ್ತಿನಲ್ಲಿ ಅಂಗೀಕರಿಸಲಾಯಿತು. ಠೇವಣಿದಾರರನ್ನು ರಕ್ಷಿಸಲು ಮತ್ತು ಸಹಕಾರಿ ಬ್ಯಾಂಕ್‌ಗಳು ಪಾರದರ್ಶಕ ಮತ್ತು ಜವಾಬ್ದಾರಿಯುತವಾಗಿರುವುದನ್ನು ಖಚಿತಪಡಿಸಿಕೊಳ್ಳಲು ಈ ಮಸೂದೆಯನ್ನು ಅಂಗೀಕರಿಸಲಾಗಿದೆ. ದೇಶದ ಸಹಕಾರ ಚಳುವಳಿಗೆ ಪ್ರತ್ಯೇಕ ಆಡಳಿತಾತ್ಮಕ, ಕಾನೂನು ಮತ್ತು ನೀತಿ ಚೌಕಟ್ಟನ್ನು ನೀಡಲು ಭಾರತ ಸರ್ಕಾರವು 2021 ರಲ್ಲಿ ಸಹಕಾರ ಸಚಿವಾಲಯವನ್ನು ಸ್ಥಾಪಿಸಿತು.

ಭಾರತದ ಸಹಕಾರಿ ವ್ಯವಸ್ಥೆಯು ಸ್ವಾತಂತ್ರ್ಯದ ನಂತರ ಸಾಧಿಸಿದ ಕೆಲವು ಪ್ರಮುಖ ಮೈಲಿಗಲ್ಲುಗಳು ಈ ಕೆಳಗಿನಂತಿವೆ

**1. ಮಿಶ್ರ ಆರ್ಥಿಕತೆಯ ಭಾಗ :** ಸ್ವಾತಂತ್ರ್ಯದ ನಂತರ, ದೇಶವು ಮೂರು ವಲಯಗಳನ್ನು ಒಳಗೊಂಡಿರುವ ಮಿಶ್ರ ಆರ್ಥಿಕತೆಯನ್ನು ರಚಿಸಲು ಯೋಜಿತ ಆರ್ಥಿಕ ಬೆಳವಣಿಗೆಯ ತಂತ್ರವನ್ನು ಅನುಸರಿಸಿತು: (ಎ) ಸಾರ್ವಜನಿಕ, (ಬಿ) ಖಾಸಗಿ ಮತ್ತು (ಸಿ) ಸಹಕಾರಿ. ಸಹಕಾರಿ ಸಂಸ್ಥೆಗಳು ಸಾರ್ವಜನಿಕ ಮತ್ತು ಖಾಸಗಿ ವಲಯಗಳ ನಡುವಿನ ಸಮತೋಲನ ಶಕ್ತಿಯಾಗಿ ಕಲ್ಪಿಸಲಾಗಿದೆ.

**2. ಪಂಚವಾರ್ಷಿಕ ಯೋಜನೆಗಳ ಭಾಗ :** ಸಹಕಾರಿ ಸಂಸ್ಥೆಗಳು ಪಂಚವಾರ್ಷಿಕ ಯೋಜನೆಗಳ (FYPs) ಪ್ರಮುಖ ಲಕ್ಷಣವಾಗಿದೆ. ಪಂಡಿತ್ ಜವಾಹರಲಾಲ್ ನೆಹರು ಅವರು ಭಾರತೀಯ ಸಹಕಾರಿ ಸಂಸ್ಥೆಗಳು, ಪಂಚಾಯತ್‌ಗಳು ಮತ್ತು ಶಾಲೆಗಳನ್ನು ಪ್ರಜಾಪ್ರಭುತ್ವದ ಮೂರು ಅಡಿಪಾಯಗಳೆಂದು ಪರಿಗಣಿಸಿದ್ದಾರೆ.

**3. ಸಹಕಾರಿಗಳ ರಾಷ್ಟ್ರೀಯ ನೀತಿ :** ರಾಷ್ಟ್ರೀಯ ಅಭಿವೃದ್ಧಿ ಮಂಡಳಿ (NDC) ಸಲಹೆ- 1958ರಲ್ಲಿ ರಾಷ್ಟ್ರೀಯ ಸಹಕಾರಿ ನೀತಿ, ಜೊತೆಗೆ ಸಿಬ್ಬಂದಿ ತರಬೇತಿ ಮತ್ತು ಸಹಕಾರಿ ಮಾರುಕಟ್ಟೆ ಸಂಘಗಳ ರಚನೆ ಹಾಗು 2002ರಲ್ಲಿ ಭಾರತ ಸರ್ಕಾರವು ರಾಷ್ಟ್ರೀಯ ನೀತಿ ಸಹಕಾರಿಗಳನ್ನು ಘೋಷಿಸಿತು.

**4. ರಾಷ್ಟ್ರೀಯ ಸಹಕಾರ ಅಭಿವೃದ್ಧಿ ನಿಗಮ ಸ್ಥಾಪನೆ :** 1962ರ ರಾಷ್ಟ್ರೀಯ ಸಹಕಾರ ಅಭಿವೃದ್ಧಿ ನಿಗಮ ಕಾಯಿದೆಯನ್ನು ಶಾಸನಬದ್ಧ ನಿಗಮವಾಗಿ ಸ್ಥಾಪಿಸಿತು.

**5. ಸಹಕಾರಿ ಕ್ಷೇತ್ರದ ಸಾಧನೆ ಅಧ್ಯಯನಕ್ಕಾಗಿ ಸಮಿತಿಗಳ ರಚನೆ :** 1954ರಲ್ಲಿ, ಗ್ರಾಮೀಣ ಸಾಲ ಸಮೀಕ್ಷೆ ಸಮಿತಿಯು ಸಹಕಾರಿ ಸಂಘಗಳಲ್ಲಿ ಎಲ್ಲಾ ಹಂತದ ಸರ್ಕಾರದ ಭಾಗವಹಿಸುವಿಕೆಯನ್ನು ಸೂಚಿಸಿತು. ಎಸ್.ಟಿ. ಸಹಕಾರಿ ಕಾನೂನಿಗೆ ಬದಲಾವಣೆಗಳನ್ನು ಶಿಫಾರಸು ಮಾಡಲು ರಾಜಾ ಸಮಿತಿಯನ್ನು ಭಾರತ ಸರ್ಕಾರವು ನೇಮಕ ಮಾಡಿದೆ. ಈ ಸಮಿತಿಯು ರಾಜ್ಯಗಳು ಬೆಂಬಲಿತ ಸಹಕಾರ ಸಂಘಗಳ ನಿರ್ವಹಣೆಯಲ್ಲಿ ಭಾಗವಹಿಸಲು ಮತ್ತು ಸರ್ಕಾರಿ ನಾಮನಿರ್ದೇಶಿತರನ್ನು ನೇಮಿಸಲು ಅನುಮತಿಸುವ ಮಾದರಿ ಕಾಯಿದೆಯನ್ನು ರಚಿಸಿದೆ.

**6. ಭಾರತದಲ್ಲಿ ಯಶಸ್ವಿ ಸಹಕಾರಿ ಸಂಸ್ಥೆಗಳು :** ರಾಷ್ಟ್ರೀಯ ಸಹಕಾರಿ ಅಭಿವೃದ್ಧಿ ನಿಗಮ (ಓಆಆಅ), ಭಾರತೀಯ ರಾಷ್ಟ್ರೀಯ ಕೃಷಿ–ಸಾಂಸ್ಕೃತಿಕ ಸಹಕಾರಿ ಮಾರುಕಟ್ಟೆ ಒಕ್ಕೂಟ (NAFED), ಇಂಡಿಯನ್ ಫಾರ್ಮರ್ಸ್ ಫರ್ಟಿಲೈಸರ್ಸ್ ಸಹಕಾರಿ ಲಿಮಿಟೆಡ್ (IFFCO), ಅಮೂಲ್, ಮ್ಯಾಮ್ಕೋ, ಕ್ಯಾಂಪ್ಕೋ, ಪಟ್ಟಣ ಸಹಕಾರ ಬ್ಯಾಂಕುಗಳು, ಕ್ರೆಡಿಟ್ ಸಹಕಾರ ಸಂಘಗಳು ಮತ್ತು ಕೋ–ಆಪರೇಟಿವ್ ರೂರಲ್ ಡೆವಲಪ್‌ಮೆಂಟ್ ಟ್ರಸ್ಟ್ (CORDET), ಪಂಜಾಬ್ ಮತ್ತು ಮಹಾರಾಷ್ಟ್ರ ಸಹಕಾರಿ (PMC) ಬ್ಯಾಂಕ್, ಭಾರತ್ ಸಹಕಾರಿ ಬ್ಯಾಂಕ್ ಮತ್ತು ಸಾರಸ್ವತ್ ಸಹಕಾರಿ ಬ್ಯಾಂಕ್ ಬ್ಯಾಂಕಿಂಗ್ ವಲಯದ ಬ್ಯಾಂಕುಗಳಾಗಿವೆ.

**ಸುಸ್ಥಿರತೆ – ಸಹಕಾರಿ ಸಂಸ್ಥೆಗಳ ಪ್ರಮುಖ ಕೊಡುಗೆ :** ಭಾರತದ ಉಪರಾಷ್ಟ್ರಪತಿ ಶ್ರೀ ಎಂ ವೆಂಕಯ್ಯ ನಾಯ್ಡು, ಭಾರತದಂತಹ ಅಭಿವೃದ್ಧಿಶೀಲ ರಾಷ್ಟ್ರಗಳಿಗೆ ಉತ್ತಮ ನಿರ್ಮಾಣಕ್ಕಾಗಿ ಮಾತ್ರವಲ್ಲದೆ ದೀರ್ಘಾವಧಿಯ ಆರ್ಥಿಕ ಸುಸ್ಥಿರತೆಗಾಗಿ ಸಹಕಾರಿ ಸಂಸ್ಥೆಗಳು ಪ್ರಮುಖವಾಗಿವೆ ಎಂದು ಹೇಳಿದರು. ಇದಲ್ಲದೆ, ಶ್ರೀ ನಾಯ್ಡು ಅವರು ರಸಗೊಬ್ಬರ ಜ್ಞಾನವನ್ನು ಹೆಚ್ಚಿಸಲು ಮತ್ತು ಆಧುನಿಕ ಕೃಷಿ ವಿಧಾನಗಳನ್ನು ಅರ್ಥಮಾಡಿಕೊಳ್ಳಲು ರೈತರಿಗೆ ತರಬೇತಿ ನೀಡಲು ಒತ್ತಾಯಿಸಿದರು. ನಾವು ಸಹಕಾರ ಸಂಘಗಳನ್ನು ನಿರ್ಮಿಸಬೇಕು ಇದರಿಂದ ಅವರು ರೈತರ ಅನುಕೂಲಕ್ಕಾಗಿ ಕೆಲಸ ಮಾಡಬಹುದು ಮತ್ತು ಅವರಿಗೆ ಸಮಂಜಸವಾದ ಬಡ್ಡಿದರದಲ್ಲಿ ಅವರಿಗೆ ಅಗತ್ಯವಿರುವಾಗ ಹಣಕಾಸು ಒದಗಿಸಬೇಕು. ಹೆಚ್ಚುವರಿಯಾಗಿ, ನಗರ–ಗ್ರಾಮೀಣ ಅಂತರವನ್ನು ನಿವಾರಿಸಲು ಮತ್ತು ಆದಾಯ–ಉತ್ಪಾದನೆಯ ಅವಕಾಶಗಳನ್ನು ಸ್ಥಾಪಿಸಲು ಸಹಕಾರಿ ಚಳುವಳಿಗಳಲ್ಲಿ ಮಹಿಳೆಯರು ಹೆಚ್ಚು ಭಾಗವಹಿಸುವಂತೆ ಉಪರಾಷ್ಟ್ರಪತಿ ಪ್ರತಿಪಾದಿಸಿದರು. ಮಹಿಳೆಯರ ಸಹಭಾಗಿತ್ವವು ಗ್ರಾಮೀಣ ಪ್ರದೇಶಗಳಲ್ಲಿ ಆರ್ಥಿಕ ಚಟುವಟಿಕೆಯನ್ನು ಇನ್ನಷ್ಟು ಉತ್ತೇಜಿಸುತ್ತದೆ. ಇದಲ್ಲದೆ, ಇಂತಹ ಪ್ರಕ್ರಿಯೆಯು ಸಮತೋಲಿತ ರಸಗೊಬ್ಬರ ಬಳಕೆಯ ಮೂಲಕ ಸಾಗುವಳಿ ವೆಚ್ಚವನ್ನು ಹೇಗೆ ಕಡಿಮೆ ಮಾಡುವುದು, ನೀರಿನ ಬಳಕೆಯ ದಕ್ಷತೆಯನ್ನು ಸುಧಾರಿಸುವುದು, ಉತ್ಪನ್ನಗಳ ಸಂಕಷ್ಟದ ಮಾರಾಟವನ್ನು ತಪ್ಪಿಸಲು ಹೆಚ್ಚಿನ ಗೋದಾಮುಗಳನ್ನು ನಿರ್ಮಿಸುವುದು, 2022ರ ವೇಳೆಗೆ ಅವರ ಆದಾಯವನ್ನು ದ್ವಿಗುಣಗೊಳಿಸಲು ರೈತರಿಗೆ ಸಹಾಯ ಮಾಡುತ್ತದೆ. ಅಲ್ಲದೆ ಮಾರುಕಟ್ಟೆ, ಮೌಲ್ಯವರ್ಧನೆಗೆ ಒತ್ತು ನೀಡಿ, ಮತ್ತು ಕೋಳಿ, ಜೇನುಸಾಕಣೆ ಮತ್ತು ಮೀನುಗಾರಿಕೆಯಂತಹ ಇತರ ಸಂಬಂಧಿತ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳಲು ರೈತರನ್ನು ಪ್ರೋತ್ಸಾಹಿಸಿ. ಸಹಕಾರಿಗಳ ಉಪಕ್ರಮಗಳು ಗ್ರಾಮೀಣ ಯುವಕರಿಗೆ ತರಬೇತಿ ನೀಡುವಲ್ಲಿ ಸಕ್ರಿಯ ಪಾತ್ರವನ್ನು ವಹಿಸುತ್ತವೆ ಮತ್ತು ಅವರ ಕಾರ್ಯಾಚರಣೆಗಳಲ್ಲಿ, ವಿಶೇಷವಾಗಿ ಆಡಳಿತ, ಬ್ಯಾಂಕಿಂಗ್ ಮತ್ತು ವ್ಯವಹಾರದಲ್ಲಿ ಡಿಜಿಟಲ್ ತಂತ್ರಜ್ಞಾನಗಳನ್ನು ಸಮರ್ಥವಾಗಿ ಬಳಸಿಕೊಳ್ಳುತ್ತವೆ.

**ಸಹಕಾರಿ ಸಂಸ್ಥೆಗಳು ಉತ್ತಮ ರಾಷ್ಟ್ರ ನಿರ್ಮಾಣ ಮಾಡಬಲ್ಲವು –**

ಭಾರತ ಸರ್ಕಾರವು ಭಾರತೀಯ ರಾಷ್ಟ್ರೀಯ ಕೃಷಿ ಸಹಕಾರಿ ಮಾರುಕಟ್ಟೆ ಒಕ್ಕೂಟಕ್ಕೆ 40,000 ಕೋಟಿ ಮೊತ್ತದ ಗ್ಯಾರಂಟಿಯನ್ನು ಒದಗಿಸಿದೆ. ಸಹಕಾರಿಗಳು ತಮ್ಮ ದೀರ್ಘಾವಧಿಯ ಕಾರ್ಯಸಾಧ್ಯತೆಯನ್ನು ಖಚಿತಪಡಿಸಿಕೊಳ್ಳಲು ಮತ್ತು ತಮ್ಮ ಸದಸ್ಯರಿಗೆ ಉತ್ತಮವಾಗಿ ಸೇವೆ ಸಲ್ಲಿಸಲು ಜೇನುನೊಣ ಉತ್ಪಾದನೆ, ಕಡಲಕಳೆ ಕೃಷಿ ಮತ್ತು ಇತರ ಕ್ಷೇತ್ರಗಳಂತಹ ಹೊಸ ಕ್ಷೇತ್ರಗಳಲ್ಲಿ ತಮ್ಮ ಚಟುವಟಿಕೆಗಳನ್ನು ವೈವಿಧ್ಯಗೊಳಿಸಲು ಪ್ರಾರಂಭಿಸಿದ್ದಾರೆ. ಇತರ ಯಾವುದೇ ಸಂಸ್ಥೆಗಳಿಗಿಂತಲೂ ಹೆಚ್ಚು ಸಹಕಾರಿ ಸಂಘಗಳು ಗ್ರಾಮೀಣ ಪ್ರದೇಶದಲ್ಲಿ ತಮ್ಮ ವ್ಯಾಪಕವಾದ ಜಾಲದಿಂದಾಗಿ ರೈತರ ವಿಶ್ವಾಸವನ್ನು ಗಳಿಸಿವೆ. ಜನ್ ಧನ್ ಯೋಜನೆ, ಪ್ರಧಾನ ಮಂತ್ರಿ ಫಸಲ್ ಬಿಮಾ ಯೋಜನಾ, ಪ್ರಧಾನ ಮಂತ್ರಿ ಕೃಷಿ ಸಿಂಚಾಯಿ ಯೋಜನೆ ಮತ್ತು ಮುದ್ರಾ ಯೋಜನೆಗಳಂತಹ ವಿವಿಧ ಸರ್ಕಾರಿ ಕಾರ್ಯಕ್ರಮಗಳು ಸಹಕಾರಿ ಸಂಸ್ಥೆಗಳಿಗೆ ಸರ್ಕಾರದೊಂದಿಗೆ ಕೆಲಸ ಮಾಡಲು ಮತ್ತು ಅನೇಕ ಪ್ರಯೋಜನಗಳನ್ನು ಉಪಯೋಗಿಸಿಕೊಳ್ಳಲು ಅತ್ಯುತ್ತಮ ಅವಕಾಶವನ್ನು ಒದಗಿಸುತ್ತವೆ.

ಪ್ರಸ್ತುತ, ಸಹಕಾರಿಗಳ ಮೂರನೇ ಅಂಶವು ಸಾರ್ವಜನಿಕ–ಖಾಸಗಿ–ಸಹಕಾರಿ ಸಹಯೋಗವಾಗಿದೆ, ಇದು ಹಳ್ಳಿಗಳಲ್ಲಿ ಕೃಷಿ ಸಮುದಾಯಕ್ಕೆ ಸಂಬಂಧಿಸಿದ ಅಭಿವೃದ್ಧಿಯ ಹೊಸ ಮಾದರಿಯನ್ನು ಸ್ಥಾಪಿಸುವ ಸಾಮರ್ಥ್ಯವನ್ನು ಹೊಂದಿದೆ. ನಿರುದ್ಯೋಗದ ಸಮಸ್ಯೆಯನ್ನು ಪರಿಹರಿಸುವುದು, ವಿಶೇಷವಾಗಿ ಬಡವರು ಕೌಶಲ್ಯದ ಕೊರತೆಯಿರುವ ಗ್ರಾಮೀಣ ಪ್ರದೇಶಗಳಲ್ಲಿ, ಸಹಕಾರಿಗಳ ಮೂಲಕ ನಿರ್ಮೂಲನೆಗೆ ಒಂದು ಮಹತ್ವದ ಹೆಜ್ಜೆಯಾಗಿದೆ.

ಎನ್‌ಸಿಯುಐ, ಎನ್‌ಸಿಡಿಸಿ, ಇಫ್ಕೋ ಮತ್ತು ಮುಂತಾದ ಅನೇಕ ಸಹಕಾರಿ ಸಂಸ್ಥೆಗಳು ಇತರರು, ಗ್ರಾಮೀಣ ಪ್ರದೇಶಗಳಲ್ಲಿ ಉಪಕ್ರಮಗಳು ಮತ್ತು ಕಾರ್ಯಕ್ರಮಗಳನ್ನು ಹೊಂದಿದ್ದಾರೆ. ಪರಿಣಾಮವಾಗಿ, ಕೌಶಲ್ಯ ಅಭಿವೃದ್ಧಿಯ ಮೇಲೆ ಈ ಕಾರ್ಯಕ್ರಮಗಳನ್ನು ಕೇಂದ್ರೀಕರಿಸುವುದರಿಂದ ಗ್ರಾಮೀಣ ಮಕ್ಕಳನ್ನು ಕೆಲಸದ ಜೀವನಕ್ಕೆ ಸಿದ್ಧಪಡಿಸಬಹುದು ಮತ್ತು ಉತ್ತಮ ಉದ್ಯಮಿಗಳಾಗಲು ಅವಕಾಶಗಳನ್ನು ಅನ್ವೇಷಿಸಲು ಸಾಧ್ಯವಾಗುತ್ತದೆ. ಉರಾಲುಂಗಲ್ ಲೇಬರ್ ಕಾಂಟ್ರಾಕ್ಟ್ ಮತ್ತು ಕನ್ಸ್ಟ್ರಕ್ಷನ್ ಸೊಸೈಟಿಯಂತಹ ಕಾರ್ಮಿಕ ಮತ್ತು ಗುತ್ತಿಗೆ ಸಹಕಾರ ಸಂಘಗಳ ಸೇವೆಗಳನ್ನು ಬಳಸಿಕೊಂಡು ವಿವಿಧ ರಾಜ್ಯಗಳಲ್ಲಿ 100 ಸ್ಮಾರ್ಟ್ ಸಿಟಿಗಳನ್ನು ಸ್ಥಾಪಿಸುವ ಗುರಿಯನ್ನು ಭಾರತ ಹೊಂದಿದೆ, ಇದು ಆಧುನಿಕ ಮತ್ತು ಹೈಟೆಕ್ ಮೂಲಸೌಕರ್ಯ ಅಭಿವೃದ್ಧಿಯಲ್ಲಿ ತೊಡಗಿಸಿಕೊಳ್ಳಬೇಕು. ಇತರ ಪ್ರಸ್ತಾವಿತ ನಗರಗಳಲ್ಲಿ ಪುನರಾವರ್ತಿಸಬಹುದು. ಡಿಜಿಟಲ್ ತಂತ್ರಜ್ಞಾನದ ಬಳಕೆಯು ಇಂದು ಬ್ಯಾಂಕಿಂಗ್ ಮತ್ತು ಕಂಪನಿಯ ಆಡಳಿತವನ್ನು ಪರಿವರ್ತಿಸಿದೆ. ಪರಿಣಾಮವಾಗಿ, ಸಹಕಾರಿ ಸಂಸ್ಥೆಗಳು ತಮ್ಮ ಕಾರ್ಯಾಚರಣೆಗಳಲ್ಲಿ ತಂತ್ರಜ್ಞಾನದ ಶಕ್ತಿಯನ್ನು ಸಂಪೂರ್ಣವಾಗಿ ಬಳಸಿಕೊಳ್ಳಲು ಪ್ರೋತ್ಸಾಹಿಸಲಾಗುತ್ತಿದೆ. 63,000 ಕ್ಕೂ ಹೆಚ್ಚು ಪ್ರಾಥಮಿಕ ಕೃಷಿ ಸಹಕಾರ

ಸಂಘಗಳು ಭಾರತ ಸರ್ಕಾರದ (PACS) ದೊಡ್ಡ ಧನಸಹಾಯದ ನೆರವಿನಿಂದ ರೈತರು ಗಣಕೀಕರಣಗೊಂಡಿದ್ದಾರೆ. ಗ್ರಾಮೀಣ ಪ್ರದೇಶದ ರೈತರ ಪ್ರಾಥಮಿಕ ಕೃಷಿ ಸಹಕಾರ ಸಂಘಗಳಿಂದ ಸೇವೆ ಸಲ್ಲಿಸುತ್ತಾರೆ, ಅವು ಅತ್ಯಂತ ಪ್ರಮುಖ ಸಹಕಾರ ಗುಂಪುಗಳಾಗಿವೆ.

**ಸವಾಲುಗಳು :**

ಭಾರತೀಯ ಸಹಕಾರ ಸಂಸ್ಥೆಗಳು ಎದುರಿಸುತ್ತಿರುವ ಪ್ರಮುಖ ಸವಾಲುಗಳು ಈ ಕೆಳಗಿನಂತಿವೆ:

**1. ಸಹಕಾರ ಕಾನೂನುಗಳು:** ಭಾರತದಲ್ಲಿ ಸಹಕಾರಿ ಸಂಸ್ಥೆಗಳು ವಿವಿಧ ಕ್ಷೇತ್ರಗಳಲ್ಲಿ ಕಾರ್ಯನಿರ್ವಹಿಸುತ್ತವೆ. ಭಾರತೀಯ ಸಂವಿಧಾನದ ಅಡಿಯಲ್ಲಿ, ಸಹಕಾರಿ ಸಂಸ್ಥೆಗಳು ರಾಜ್ಯದ ವಿಷಯವಾಗಿದೆ; ಆದ್ದರಿಂದ ರಾಜ್ಯ ಸಹಕಾರ ಕಾನೂನುಗಳು ಮತ್ತು ಅವುಗಳ ಅನುಷ್ಠಾನವು ಬಹಳವಾಗಿ ಬದಲಾಗುತ್ತವೆ.

**2. ಬೇಜವಾಬ್ದಾರಿ ಮತ್ತು ಲೆಕ್ಕಿಸದಿರುವುದು :** ಗಂಭೀರ ಆಡಳಿತ ದೋಷಗಳು, ವಿಶೇಷವಾಗಿ ನಿರ್ದೇಶಕರ ಮಂಡಳಿಗಳ ಕಾರ್ಯಗಳು ಮತ್ತು ಕಟ್ಟುಪಾಡುಗಳಿಗೆ ಸಂಬಂಧಿಸಿದವು. ಅನೇಕ ಅನಾನುಕೂಲತೆಗಳಿಗೆ ನಿರ್ದೇಶಕರ ಮಂಡಳಿಯು ಜವಾಬ್ದಾರರಾಗಿರುವುದಿಲ್ಲ.

**3. ಮನ್ನಣೆಯ ಕೊರತೆ :** ನೀತಿ ನಿರೂಪಕರು ಮತ್ತು ಸಾರ್ವಜನಿಕರಲ್ಲಿ ಆರ್ಥಿಕ ಸಂಸ್ಥೆಗಳಾಗಿ ಸಹಕಾರಿಗಳ ಬಗ್ಗೆ ತಿಳುವಳಿಕೆಯ ಕೊರತೆಯಿದೆ. ಸಾಮಾನ್ಯವಾಗಿ ಸಹಕಾರಿ ಸಂಸ್ಥೆಗಳು ಅರ್ಹ ಸಿಬ್ಬಂದಿಯನ್ನು ಆಕರ್ಷಿಸಲು ಮತ್ತು ನಿರ್ವಹಿಸಲು ಸಾಧ್ಯವಾಗುವುದಿಲ್ಲ.

**4. ಬಂಡವಾಳ ರಚನೆಯ ಕೊರತೆ :** ಬಂಡವಾಳ ರಚನೆಯ ಉಪಕ್ರಮಗಳ ಕೊರತೆ, ವಿಶೇಷವಾಗಿ ಸದಸ್ಯ ಇಕ್ವಿಟಿ ಮತ್ತು ಮಾಲೀಕತ್ವವನ್ನು ಹೆಚ್ಚಿಸುವ ಗುರಿಯನ್ನು ಹೊಂದಿರುವವು ಸಹಕಾರಿಗಳನ್ನು ಹಿಮ್ಮೆಟ್ಟಿಸುತ್ತದೆ.

**5. ನಿಯಮಗಳ ಅರಿವಿನ ಕೊರತೆ :** ಸಹಕಾರಿ ಆಂದೋಲನದ ಗುರಿಗಳು, ಹಾಗೆಯೇ ಸಹಕಾರಿ ಸಂಸ್ಥೆಗಳನ್ನು ನಿಯಂತ್ರಿಸುವ ನಿಯಮಗಳು ಮತ್ತು ನಿಯಮಗಳ ಬಗ್ಗೆ ಜನರಿಗೆ ತಿಳಿದಿಲ್ಲ.

**ಉಪಸಂಹಾರ :**

ಒಂದು ರಾಷ್ಟ್ರವು ವಿವಿಧ ಅಭಿವೃದ್ಧಿ ಯೋಜನೆಗಳ ಮೂಲಕ ಅಭಿವೃದ್ಧಿ ಹೊಂದಬಹುದು, ಆದರೆ ಎಲ್ಲಾ ಆರ್ಥಿಕ ಚಟುವಟಿಕೆಗಳಲ್ಲಿ ಸಹಕಾರಿಗಳನ್ನು ಸ್ಥಾಪಿಸುವುದು ದೀರ್ಘಾವಧಿಯ ಆರ್ಥಿಕ ಸುಸ್ಥಿರತೆಯನ್ನು ಸಾಧಿಸಲು ಅತ್ಯಂತ ನಿರ್ಣಾಯಕ ಮತ್ತು ಪರಿಣಾಮಕಾರಿ ವಿಧಾನವಾಗಿದೆ. ಪರಿಣಾಮವಾಗಿ, ಪ್ರಸ್ತುತ ಲೇಖನವು ಸಹಕಾರ ರಚನೆ ಮತ್ತು ಸುಧಾರಣೆಯ ಅಗತ್ಯತೆಯ ಹಿನ್ನೆಲೆಯಲ್ಲಿ ವಿಕಸನಗೊಂಡಿದೆ, ಜೊತೆಗೆ ತಂತ್ರಜ್ಞಾನದಂತಹ ಇತರ ಕ್ಷೇತ್ರಗಳಲ್ಲಿ ಪ್ರಗತಿಯಾಗಿದೆ. ಭಾರತವು ಅಭಿವೃದ್ಧಿ ಹೊಂದುತ್ತಿರುವ ದೇಶವಾಗಿದ್ದು, ಸ್ವಾತಂತ್ರ್ಯದ ಮೊದಲು ಮತ್ತು ನಂತರ ಎರಡೂ ಕ್ರಮಗಳನ್ನು ತೆಗೆದುಕೊಂಡಿದೆ.

ಇದಲ್ಲದೆ, ಭಾರತದಲ್ಲಿ ಆರ್ಥಿಕ ಚಟುವಟಿಕೆಯ ದೀರ್ಘಾವಧಿಯ ಕಾರ್ಯಸಾಧ್ಯತೆಗೆ ಸಹಕಾರಿಗಳ ಕೊಡುಗೆಯನ್ನು ಅಧ್ಯಯನವು ಎತ್ತಿ ತೋರಿಸುತ್ತದೆ. ಜೊತೆಗೆ, ಭಾರತದ ಸಹಕಾರಿ ಹಿರಿಯರು ಹಲವಾರು ಸಹಕಾರಿ–ಆಧಾರಿತ ಸ್ಟಾರ್ಟ್–ಅಪ್ ಕಾರ್ಯಕ್ರಮಗಳು ಇಂದಿನ ಸಂದರ್ಭದಲ್ಲಿ ಮಾತ್ರವಲ್ಲದೆ ಭವಿಷ್ಯದ ಭಾರತಕ್ಕೂ ನಿರ್ಣಾಯಕ ಎಂದು ಒಪ್ಪಿಕೊಂಡರು. ಸಹಕಾರಿ ಸಂಸ್ಥೆಗಳಿಗೆ ಹಲವಾರು ಅನಾನುಕೂಲತೆಗಳಿದ್ದರೂ, ಉತ್ತಮ ರಾಷ್ಟ್ರವನ್ನು ರೂಪಿಸುವಲ್ಲಿ ಸಹಾಯ ಮಾಡಲು ಭವಿಷ್ಯದ ಚೇತರಿಕೆ ಮತ್ತು ಬೆಳವಣಿಗೆಗೆ ಅವರು ಎಲ್ಲಾ ಪ್ರಯತ್ನಗಳನ್ನು ಮಾಡುತ್ತಿದ್ದಾರೆ.

## ತತ್ವಮಸಿ ಪತ್ತಿನ ಸೌಹಾರ್ದ ಸಹಕಾರಿ ಸಂಘ ಇದರ 6ನೇ ವಾರ್ಷಿಕ ಮಹಾಸಭೆ



**ಕೊಪ್ಪಳ :** ತತ್ವಮಸಿ ಪತ್ತಿನ ಸೌಹಾರ್ದ ಸಹಕಾರಿ ಸಂಘ ನಿಯಮಿತ, ಹುಲಿಗಿ, ಕೊಪ್ಪಳ ಇದರ 6ನೇ ವಾರ್ಷಿಕ ಸಾಮಾನ್ಯ ಮಹಾಸಭೆಯ ಅಂಗವಾಗಿ 5 ದಿನಗಳ ಸಾಮಾಜಿಕ ಕಾರ್ಯಕ್ರಮಗಳು, ವಿವಿಧ ಕ್ಷೇತ್ರಗಳ ಸಾಧಕರಿಗೆ ಸನ್ಮಾನ ಹಾಗೂ ಉಚಿತ ಆರೋಗ್ಯ ತಪಾಸಣ ಶಿಬಿರಗಳಂತಹ ಕಾರ್ಯಕ್ರಮಗಳನ್ನು ಆಯೋಜಿಸಿ ಯಶಸ್ವಿಗೊಳಿಸಲಾಯಿತು.

ಮೊದಲ ದಿನ ಸ್ವಚ್ಛತಾ ಅಭಿಯಾನದಲ್ಲಿ ಗ್ರಾಮದ ದೇವಸ್ಥಾನ, ಬಸ್ ನಿಲ್ದಾಣ ಹಾಗೂ ಸರಕಾರಿ ಆಸ್ಪತ್ರೆ ಆವರಣದಲ್ಲಿ ಸ್ವಚ್ಛತೆ ಕೈಗೊಂಡು ಗ್ರಾಮ ಪಂಚಾಯತಿಯ ಪೌರ ಕಾರ್ಮಿಕರಿಗೆ ಸನ್ಮಾನಿಸಿ, ಗೌರವಿಸಿ ಸಾರ್ವಜನಿಕರಲ್ಲಿ ಸ್ವಚ್ಛತೆಯ ಅರಿವು ಮೂಡಿಸುವುದರ ಮೂಲಕ ಮಾದರಿ ಗ್ರಾಮವನ್ನಾಗಿ ಮಾಡುವ ಸಂಕಲ್ಪ ಮಾಡಲಾಯಿತು.

ಎರಡನೇ ದಿನ ಪರಿಸರ ಸಂರಕ್ಷಣಾ ಅಭಿಯಾನದಲ್ಲಿ ಗ್ರಾಮದ ಪ್ರಾಥಮಿಕ ಶಾಲೆ, ಪ್ರೌಢಶಾಲೆ, ದೇವಸ್ಥಾನ ಆವರಣ ಮತ್ತು ಸುತ್ತಮುತ್ತಲಿನ ಸಾರ್ವಜನಿಕ ಸ್ಥಳಗಳಲ್ಲಿ ವಿವಿಧ ರೀತಿಯ 301 ಸಸಿಗಳನ್ನು ನೆಡುವುದರ ಮೂಲಕ ಸದಸ್ಯರಲ್ಲಿ ಪರಿಸರ ಸಂರಕ್ಷಣಾ ಅರಿವು ಮೂಡಿಸಲಾಯಿತು. ಮೂರನೇ ದಿನ ಮಾನಸಿಕ ಮತ್ತು ದೈಹಿಕ ಸದೃಡತೆಯ ಸ್ಥಿರತೆಗೆ ಯೋಗ ತರಬೇತಿ ಮತ್ತು ಕ್ರೀಡಾಕೂಟವನ್ನು ಆಯೋಜಿಸಲಾಯಿತು. ಯೋಗ ತರಬೇತಿಯನ್ನು ನುರಿತ ಯೋಗ ಪಟುಗಳಿಂದ ತರಬೇತಿ ನೀಡಿ ನಂತರ ವಿವಿಧ ಕ್ರೀಡೆಗಳನ್ನು ಆಯೋಜಿಸಲಾಯಿತು. ನಾಲ್ಕನೇ ದಿನ ಗ್ರಾಮದ ಸಾರ್ವಜನಿಕರ ಹಾಗೂ ಸಹಕಾರಿಯ ಸದಸ್ಯರ ಆರೋಗ್ಯ ಹಿತದೃಷ್ಟಿಯಿಂದ ಉಚಿತ ಆರೋಗ್ಯ ತಪಾಸಣಾ ಶಿಬಿರದಲ್ಲಿ ನುರಿತ ತಜ್ಞ ವೈದ್ಯರಿಂದ ಚಿಕಿತ್ಸೆ ಮತ್ತು ಔಷಧ ವಿತರಣೆ ಮಾಡಿ ಸದಸ್ಯರಿಗೆ ಉಚಿತ ಆರೋಗ್ಯ ಸೇವೆ ಒದಗಿಸಲಾಯಿತು. ಐದನೇ ದಿನ ಸಹಕಾರಿಯ 6ನೇ ವಾರ್ಷಿಕ ಸಾಮಾನ್ಯ ಮಹಾಸಭೆ ಹಾಗೂ ಸಮಾರೋಪ ಕಾರ್ಯಕ್ರಮದಲ್ಲಿ ಮಕ್ಕಳ ಸಾಂಸ್ಕೃತಿಕ ಕಾರ್ಯಕ್ರಮಗಳೊಂದಿಗೆ ವಿವಿಧ ಕ್ಷೇತ್ರಗಳ ಸಾಧಕರಿಗೆ ಸನ್ಮಾನಿಸಿ ನಂತರ ಸಹಕಾರಿ ಸದಸ್ಯರ ಸಮಾನ್ಯ ಸಭೆಯಲ್ಲಿ ವಾರ್ಷಿಕ ವರಧಿಯನ್ನು ಒಪ್ಪಿಸಿ ಅನುಮೊದನೆ ಪಡೆಯಲಾಯಿತು. ಕಾರ್ಯಕ್ರಮದಲ್ಲಿ ಸಹಕಾರಿಯ ಸರ್ವ ಸದಸ್ಯರು, ಆಡಳಿತ ಮಂಡಳಿ ಪದಾಧಿಕಾರಿಗಳು, ಸಿಬ್ಬಂದಿಗಳು ಹಾಗೂ ಪಿಗ್ಮಿ ಸಂಗ್ರಾಹಕಾರರು ಭಾಗವಹಿಸಿ ಸಭೆಯನ್ನು ಯಶಸ್ವಿಗೊಳಿಸಲಾಯಿತು.

# ದೇಶದ ಪ್ರಥಮ ಪ್ರಜೆಯಾಗಿ ದ್ರೌಪದಿ ಮುರ್ಮು - 15ನೇ ರಾಷ್ಟ್ರಪತಿಯಾಗಿ ಆಯ್ಕೆ ರಾಷ್ಟ್ರದ ಅತ್ಯುನ್ನತ ಸ್ಥಾನದ ಕಿರೀಟ ಬುಡಕಟ್ಟು ಮಹಿಳೆಗೆ - ಮಹಿಳೆಯರಿಗೆ ಉತ್ಸಾಹದ ಚೈತನ್ಯ ಚಿಲುಮೆ

– ಶ್ರೀಮತಿ ದಿವ್ಯ.ಟಿ., ಹಿರಿಯ ಸಹಾಯಕಿ, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು.



ದೇಶದ 15ನೇ ರಾಷ್ಟ್ರಪತಿಯಾಗಿ ದ್ರೌಪದಿ ಮುರ್ಮುರವರು ಆಯ್ಕೆಯಾಗುವುದರೊಂದಿಗೆ ರಾಷ್ಟ್ರಪತಿ ಹುದ್ದೆಗೆ ಏರಿದ ಮೊದಲ ಬುಡಕಟ್ಟು ಮಹಿಳೆ, ಪ್ರತಿಭಾ ಪಾಟೀಲ್ ಬಳಿಕ ಭಾರತದ ರಾಷ್ಟ್ರಪತಿಯಾಗುತ್ತಿರುವ ಎರಡನೆಯ ಮಹಿಳೆ, 1947ರ ಬಳಿಕ ಜನಿಸಿದವರಲ್ಲಿ ಮೊದಲ ಬಾರಿಗೆ ರಾಷ್ಟ್ರಪತಿ ಸ್ಥಾನವನ್ನು ಅಲಂಕರಿಸುತ್ತಿರುವ ಪ್ರಥಮ ವ್ಯಕ್ತಿ, ಭಾರತದ ರಾಷ್ಟ್ರಪತಿ ಹುದ್ದೆ ಏರಿದ ಅತಿ ಕಿರಿಯ ವ್ಯಕ್ತಿ ಎಂಬ ಹೆಗ್ಗಳಿಕೆಗೆ ಪಾತ್ರವಾಗುವುದರ ಮೂಲಕ ಅನೇಕ ದಾಖಲೆಗಳನ್ನು ಸೃಷ್ಟಿಸಿ, ಮಹಿಳೆಯರಿಗೆ ಉತ್ಸಾಹದ ಚೈತನ್ಯ ಚಿಲುಮೆಯಾಗಿದ್ದಾರೆ. ಈ ಮೂಲಕ ಮಹಿಳೆಯೊಬ್ಬರು ರಾಷ್ಟ್ರಪತಿ ಸ್ಥಾನವನ್ನು ಅಲಂಕರಿಸುತ್ತಿರುವುದು ಹೆಮ್ಮೆಯ ವಿಷಯವಾಗಿದೆ. ಸ್ವಾತಂತ್ರ್ಯದ 75ನೇ ವರ್ಷಾಚರಣೆಯ ಈ ಸುಸಂದರ್ಭದಲ್ಲಿ ಮಹಿಳೆಗೆ ಅವಕಾಶ ನೀಡುವುದರ ಮೂಲಕ ಮಹಿಳಾ ಸಬಲೀಕರಣಕ್ಕೆ ಹೆಚ್ಚಿನ ಆದ್ಯತೆಯನ್ನು ತಂದಿದೆ.

**ವೈಯಕ್ತಿಕ ಜೀವನ :**

ದ್ರೌಪದಿ ಮುರ್ಮುರವರು ದಿನಾಂಕ 20 ಜೂನ್ 1958ರಂದು ಒಡಿಶಾದ ರೈರಂಗ್‌ಪುರದ ಬೈಡಾಪೋಸಿ ಗ್ರಾಮದಲ್ಲಿ ಜನಿಸಿದರು. ಇವರು 'ಸಂತಾಲಿ' ಬುಡಕಟ್ಟು ಜನಾಂಗಕ್ಕೆ ಸೇರಿದವರಾಗಿದ್ದು, ಸಂತಾಲಿ ಬುಡಕಟ್ಟು ಸಂಪ್ರದಾಯದಂತೆ ಹುಟ್ಟಿದಾಗ ಇವರಿಗೆ 'ಪುತಿ' ಎಂದು ಹೆಸರಿಡಲಾಗಿತ್ತು. ನಂತರ ಶಿಕ್ಷಕರೊಬ್ಬರು ಒಳ್ಳೆಯದಾಗಲೆಂಬ ಹಾರೈಕೆಯೊಂದಿಗೆ 'ದ್ರೌಪದಿ' ಎಂದು ಬದಲಾಯಿಸಿದರು. ಇವರ ತಾತ ಮತ್ತು ತಂದೆಯವರು ಗ್ರಾಮದ ಮುಖ್ಯಸ್ಥರಾಗಿದ್ದರು. ಬಡಕುಟುಂಬದಲ್ಲಿ ಜನಿಸಿ, ಅತ್ಯಂತ ಕಷ್ಟದಲ್ಲೇ ಶಿಕ್ಷಣವನ್ನು ಪೂರೈಸಿದರು.

ದ್ರೌಪದಿಯವರು 1980ರಲ್ಲಿ ಶ್ಯಾಮ್‌ಚರಣ್ ಮುರ್ಮು ಅವರವನ್ನು ವಿವಾಹವಾದರು. ಅವರಿಗೆ ಇಬ್ಬರು ಗಂಡು ಮಕ್ಕಳು ಹಾಗೂ ಒಬ್ಬರು ಹೆಣ್ಣು ಮಕ್ಕಳು. ದುರದೃಷ್ಟವಶಾತ್ ಅವರು ತಮ್ಮ ಪತಿ ಮತ್ತು ಇಬ್ಬರು ಗಂಡು ಮಕ್ಕಳನ್ನು ಕಳೆದುಕೊಂಡರು. ಇದರಿಂದುಂಟಾದ ಖಿನ್ನತೆಯಿಂದ ಹೊರಬರಲು ಬ್ರಹ್ಮಕುಮಾರಿ ಆಧ್ಯಾತ್ಮ ಚಳುವಳಿಯನ್ನು ಅನುಸರಿಸಲು ಪ್ರಾರಂಭಿಸಿದರು.

**ವೃತ್ತಿ ಜೀವನ :**

ರಮಾದೇವಿ ಮಹಿಳಾ ಕಾಲೇಜಿನಲ್ಲಿ ಪದವಿ ಪೂರೈಸಿ, ಶಿಕ್ಷಣದ ಬಳಿಕ ಇವರು ಒಡಿಶಾದ ರಾಜ್ಯ ನೀರಾವರಿ ಮತ್ತು ಇಂಧನ ಇಲಾಖೆಯಲ್ಲಿ ಜೂನಿಯರ್ ಅಸಿಸ್ಟೆಂಟ್ ಆಗಿ 1979 ರಿಂದ 1983ರವರೆಗೆ ಕಾರ್ಯನಿರ್ವಹಿಸಿದರು. ನಂತರ ತಮ್ಮ ಮಕ್ಕಳ ಪಾಲನೆಗಾಗಿ ಕೆಲಸವನ್ನು ತೊರೆದರು. ನಂತರ ಗೌರವ ಪ್ರಾಧ್ಯಾಪಕಿಯಾಗಿ ಯಾವುದೇ ಸಂಬಳವಿಲ್ಲದೇ ಸಂಸ್ಥೆಯೊಂದರಲ್ಲಿ ಸೇವೆ ಸಲ್ಲಿಸಿದ್ದರು. 1997ರವರೆಗೆ ಶಿಕ್ಷಕಿಯಾಗಿ ರೈರಂಗ್‌ಪುರದಲ್ಲಿ ಕಾರ್ಯನಿರ್ವಹಿಸಿದರು. ತಮ್ಮ ಪ್ರದೇಶದ ಸಾಮಾಜಿಕ ಕಾರ್ಯದಲ್ಲಿ ಬಹಳ ಸಕ್ರಿಯರಾಗಿದ್ದ ಇವರು ಬುಡಕಟ್ಟು ಜನರ ಶೈಕ್ಷಣಿಕ ಹಾಗೂ ಸಾಮಾಜಿಕ ಉನ್ನತೀಕರಣದ ಜೊತೆಗೆ ಮಹಿಳಾ ಸಬಲೀಕರಣವನ್ನು ಉತ್ತೇಜಿಸಿದರು.

**ರಾಜಕೀಯ ಜೀವನ :**

1997ರಲ್ಲಿ ರೈರಂಗ್‌ಪುರ ನಗರ ಪಂಚಾಯತ್ ಕೌನ್ಸಿಲರ್ ಆಗಿ ರಾಜಕೀಯ ಜೀವನವನ್ನು ಆರಂಭಿಸಿದರು. 2000ನೇ ಇಸವಿಯಲ್ಲಿ ರೈರಂಗ್‌ಪುರ ಕ್ಷೇತ್ರದಿಂದ ಸ್ಪರ್ಧಿಸಿ, ಎರಡು ಬಾರಿ ಶಾಸಕಿಯಾಗಿ ಆಯ್ಕೆಯಾದರು. ಒಡಿಶಾ ಸರ್ಕಾರದಲ್ಲಿ ಹಲವು ಖಾತೆಗಳನ್ನು ನಿರ್ವಹಿಸಿದ್ದಾರೆ. ದಿನಾಂಕ 06 ಮಾರ್ಚ್ 2000 ದಿಂದ 06 ಆಗಸ್ಟ್ 2002ರವರೆಗೆ ವಾಣಿಜ್ಯ ಮತ್ತು ಸಾರಿಗೆಯ ಸ್ವತಂತ್ರ ಉಸ್ತುವಾರಿಯೊಂದಿಗೆ ಒಡಿಶಾ ರಾಜ್ಯ ಸಚಿವರಾಗಿ ಸೇವೆ ಸಲ್ಲಿಸಿದ್ದಾರೆ. ದಿನಾಂಕ 06 ಆಗಸ್ಟ್ 2002 ರಿಂದ 16 ಮೇ 2004ರವರೆಗೆ ಮೀನುಗಾರಿಕೆ ಮತ್ತು ಪ್ರಾಣಿ ಸಂಪನ್ಮೂಲ ಅಭಿವೃದ್ಧಿ ಸಚಿವರಾಗಿ ಸೇವೆ ಸಲ್ಲಿಸಿದ್ದಾರೆ. 2015–2021ರವರೆಗೆ ಜಾರ್ಖಂಡ್ ರಾಜ್ಯಪಾಲರಾಗಿ ಸೇವೆ ಸಲ್ಲಿಸಿದ್ದಾರೆ. ಐದು ವರ್ಷಗಳ ಅಧಿಕಾರಾವಧಿಯನ್ನು ಪೂರ್ಣಗೊಳಿಸಿದ ಜಾರ್ಖಂಡ್‌ನ ಮೊದಲ ರಾಜ್ಯಪಾಲರಾಗಿದ್ದಾರೆ. ಹಾಗೆಯೇ, ಜಾರ್ಖಂಡ್ ರಾಜ್ಯದ ಪ್ರಥಮ ಮಹಿಳಾ ರಾಜ್ಯಪಾಲರಾಗಿದ್ದಾರೆ.

**ಪ್ರಶಸ್ತಿ :**

ಒಡಿಶಾ ರಾಜ್ಯದ ಉತ್ತಮ ಶಾಸಕಿಯಾಗಿ ಕಾರ್ಯನಿರ್ವಹಿಸುವುದರ ಮೂಲಕ ರಾಜ್ಯದ ನೀಲ ಕಂಠ ಪ್ರಶಸ್ತಿಯನ್ನು ಪಡೆದುಕೊಂಡಿದ್ದಾರೆ.

ಪ್ರಸ್ತುತ ಭಾರತದ 15ನೇ ರಾಷ್ಟ್ರಪತಿಯಾಗಿ ಆಯ್ಕೆಯಾಗಿರುವ ದ್ರೌಪದಿ ಮುರ್ಮುರವರು ಬುಡಕಟ್ಟು ಸಮುದಾಯದಿಂದ ಬಂದಂತಹ ಅವರ ಪರಿಶ್ರಮ, ರಾಷ್ಟ್ರ ಪ್ರೇಮ, ದಕ್ಷತೆ ಅವರನ್ನು ಈ ಉನ್ನತ ಸ್ಥಾನಕ್ಕೆ ಕೊಂಡೊಯ್ದಿದೆ. ದ್ರೌಪದಿ ಮುರ್ಮು ಅವರ ವೈಯಕ್ತಿಕ ಜೀವನದಲ್ಲಿ ಅನುಭವಿಸಿದ ದುಃಖ ಹಾಗೂ ಎದುರಿಸಿದ ಸವಾಲುಗಳು ಮತ್ತು ಜೀವನದ ಪ್ರತಿ ಹಂತದಲ್ಲೂ ನಿರ್ವಹಿಸಿದ ಪಾತ್ರ ದೇಶದ ಪ್ರತಿಯೊಬ್ಬ ಮಹಿಳೆಗೂ ಸ್ಫೂರ್ತಿಯಾಗಲಿದೆ. ಒಂದು ಸಾಮಾನ್ಯ ಕುಟುಂಬದಿಂದ ಬಂದಂತಹ ದ್ರೌಪದಿ ಮುರ್ಮು ಅವರಿಗೆ ತಳಹದಿಯ ಸಮಸ್ಯೆಗಳ ಬಗ್ಗೆ ಅರಿವಿರುವುದರಿಂದ ಅವುಗಳ ಪರಿಹಾರಕ್ಕೆ ಅಗತ್ಯ ಕ್ರಮವಿಡುತ್ತಾರೆಂಬ ವಿಶ್ವಾಸದೊಂದಿಗೆ ಜಾಗತಿಕ ಮಟ್ಟದಲ್ಲಿ ರಾಷ್ಟ್ರದ ಗಮನ ಸೆಳೆಯುವಂತಾಗಲಿ ಎಂದು ಆಶಿಸುತ್ತಾ ಸದರಿಯವರಿಗೆ ಎಲ್ಲಾ ಸಹಕಾರಿಗಳ ಪರವಾಗಿ ಗೌರವಪೂರ್ವಕವಾಗಿ ಅಭಿನಂದನೆಗಳೊಂದಿಗೆ ಶುಭಾಶಯಗಳು.

# ಗೌರಿ ಗಣೇಶ ಹಬ್ಬದ ಆಚರಣೆ, ಪೂಜಾ ವಿಧಾನ ಹಾಗೂ ಮಹತ್ವ

– ಶ್ರೀ ಶಂಕರ ಎಸ್, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಮೈಸೂರು ವಿಭಾಗ.

"ಸರ್ವಮಂಗಳ ಮಾಂಗಲ್ಯೇ ಶಿವೇ ಸರ್ವಾರ್ಥ ಸಾಧಿಕೇ
ಶರಣ್ಯೇ ತ್ರ್ಯಂಬಕೇ ಗೌರಿ ನಾರಾಯಣೀ ನಮೋಸ್ತುತೇ".

**ಗೌರಿ ಗಣೇಶ ಹಬ್ಬ :** ಗಣೇಶ ಚತುರ್ಥಿ ಎಂದರೆ ಎಲ್ಲೆಲ್ಲೂ ಸಡಗರ, ಸಂಭ್ರಮ. ಮನೆಗಳಲ್ಲಿ ಹೊಸಬಟ್ಟೆ ತೊಟ್ಟು ಮನೆಗಳಲ್ಲಿ, ಬೀದಿಗಳಲ್ಲಿ ಕೂರಿಸಿದ ಗಣಪನನ್ನು ನೋಡಲು ಹೋಗುವುದೇ ಒಂದು ಆನಂದ. ಡೊಳ್ಳು ಹೊಟ್ಟೆ ಬೃಹತ್ ಕಾಯ, ಆನೆಯ ಸೊಂಡಿಲು, ಅಗಲವಾದ ಕಿವಿ, ಬಗೆ ಬಗೆಯಲ್ಲಿ ಪ್ರತಿಷ್ಠಾಪಿತ ಗಣಪ ಆಹಾ ಎಷ್ಟೊಂದು ಸುಂದರ. ಗಣೇಶ ಚತುರ್ಥಿಯ ಹಿಂದಿನ ದಿನ ಗೌರಿ ಹಬ್ಬವನ್ನು ಆಚರಿಸಲಾಗುತ್ತದೆ. ಪಾರ್ವತಿ ದೇವಿಯ ಅವತಾರವಾದ ಗೌರಿಯನ್ನು ಈ ಹಬ್ಬದಂದು ಪೂಜಿಸಲಾಗುತ್ತದೆ. ಆ ಹಬ್ಬವು ಮಹಿಳೆಯರಿಗೆ ಅತ್ಯಂತ ವಿಶೇಷವಾಗಿದ್ದು, ಈ ದಿನ ಮಹಿಳೆಯರು ಗೌರಿಯ ಆಶೀರ್ವಾದವನ್ನು ಪಡೆಯಲು ಹಾಗೂ ಸುಖಮಯ ವೈವಾಹಿಕ ಜೀವನಕ್ಕಾಗಿ ಗೌರಿ ದೇವಿಯನ್ನು ಪೂಜಿಸುತ್ತಾರೆ.



**ಗೌರಿ ಹಬ್ಬದ ಪೂಜಾ ವಿಧಾನ ಮತ್ತು ಪ್ರಯೋಜನ :** ಈ ದಿನ ಗೌರಿಯನ್ನು ಪೂಜಿಸುವುದರಿಂದ ತಾಯಿ ಗೌರಿಯು ಮುತ್ತೈದೆಯಂತೆ ಮನೆಗೆ ಪ್ರವೇಶಿಸುತ್ತಾಳೆನ್ನುವ ನಂಬಿಕೆಯಿದೆ. ಗೌರಿ ಹಬ್ಬವನ್ನು ಮಹಾರಾಷ್ಟ್ರ ಸೇರಿದಂತೆ ಇನ್ನಿತರ ಉತ್ತರ ಭಾರತದ ರಾಜ್ಯಗಳಲ್ಲಿ ಹರ್ತಾಲಿಕಾ ತೀಜ್ ಎಂದು ಕರೆಯುತ್ತಾರೆ. ಗೌರಿ ಹಬ್ಬವನ್ನು ಮಂಗಳ ಗೌರಿ ಪೂಜೆಯೆಂದೂ ಕರೆಯುತ್ತಾರೆ.

**ಗೌರಿಯನ್ನು ಮನೆಗೆ ಆಹ್ವಾನಿಸುವ ವಿಧಾನ :** ಸಮೃದ್ಧಿ, ಸುಖ ಮತ್ತು ಶಕ್ತಿ ದೇವತೆಯೆಂದು ಪರಿಗಣಿಸಲಾಗುವ ಗೌರಿ ದೇವಿಯನ್ನು ಗಣೇಶ ಚುತರ್ಥಿಗೂ ಮುನ್ನ ಮನೆಗೆ ಸ್ವಾಗತಿಸಲಾಗುತ್ತದೆ. ಗೌರಿ ಪೂಜೆಯ ವಿಧಿ–ವಿಧಾನಗಳು ಪ್ರದೇಶಕ್ಕೆ ಅನುಗುಣವಾಗಿ ಬದಲಾಗುತ್ತದೆ. ಗಣೇಶವನ್ನು ಮನೆಗೆ ಆಹ್ವಾನಿಸುವ ಮುನ್ನ ಆತನ ತಾಯಿ ಗೌರಿ ಅಂದರೆ ಪಾರ್ವತಿಯನ್ನು ಮನೆಗೆ ಸ್ವಾಗತಿಸಲಾಗುತ್ತದೆ. ಗೌರಿಯನ್ನು ಮನೆಯಲ್ಲಿ ಕೂರಿಸುವುದರಿಂದ ಆ ಮನೆಯ ಸಮೃದ್ಧಿ ಮತ್ತು ಸಂಪತ್ತು ಹೆಚ್ಚಾಗುತ್ತದೆ ಎಂಬುದು ನಂಬಿಕೆ. ಈ ದಿನ ಸುಮಂಗಲಿಯರು ಮನೆ ಮುಂದೆ ರಂಗೋಲಿಯನ್ನು ಹಾಕಿ, ಮನೆಯನ್ನು ಶುದ್ಧಗೊಳಿಸಿ, ಅಲಂಕಾರವನ್ನು ಮಾಡಿ ಗೌರಿಯನ್ನು ಆಹ್ವಾನಿಸಬೇಕು.

**ಗೌರಿ ಪೂಜಾ ವಿಧಾನ :** ಗೌರಿ ದೇವಿಯ ಮೂರ್ತಿಯನ್ನು ಗಣೇಶ ಚತುರ್ಥಿ ಹಿಂದಿನ ದಿನ ಮನೆಗೆ ತರಲಾಗುತ್ತದೆ. ಗೌರಿಯನ್ನು ಮನೆಗೆ ಆಹ್ವಾನಿಸುವ ಮುನ್ನ ಆ ಮನೆಯ ಮಹಿಳೆಯರು ಶುದ್ಧರಾಗಿ ಮನೆಯನ್ನು ಅಲಂಕರಿಸಿ ಮನೆ ಮುಂದೆ ರಂಗೋಲಿಯನ್ನು ಹಾಕುತ್ತಾರೆ. ಸ್ವರ್ಣ ಗೌರಿ ಹಬ್ಬವೆಂದು ಕರೆಯಲಾಗುವ ಗೌರಿ ಹಬ್ಬದಂದು ಮಹಿಳೆಯರು ಸಾಂಪ್ರದಾಯಿಕ ಉಡುಪನ್ನು ಧರಿಸಿ, ನಂತರ ಅರಿಶಿಣದಿಂದ ಗೌರಿ ವಿಗ್ರಹವನ್ನು ರಚಿಸಬೇಕು. ಹಾಗೂ ಮಂತ್ರದ ಮೂಲಕ ಗೌರಿಯನ್ನು ಆಹ್ವಾನಿಸಬೇಕು. ಅರಶಿಣದಿಂದ ತಯಾರಿಸಿದ ಗೌರಿ ವಿಗ್ರಹವನ್ನು ಅಕ್ಕಿ ಮತ್ತು ಧಾನ್ಯಗಳನ್ನು ಹಾಕಿರುವ ಬಟ್ಟಲಿನಲ್ಲಿ ಇಡಬೇಕು. ನಂತರ ಗೌರಿಗೆ ಸ್ವಚ್ಛತೆ ಮತ್ತು ಭಕ್ತಿಯಿಂದ ಪೂಜೆ ಮಾಡಬೇಕು.

**ಗೌರಿ ಹಬ್ಬದಲ್ಲಿ ಬಾಗಿನ ಮಹತ್ವ :** ಗೌರಿಯಿಟ್ಟ ಜಾಗದಲ್ಲಿ ಬಾಳೆಗಿಡವನ್ನು ಇಟ್ಟು, ಸುತ್ತಲೂ ಮಾವಿನ ಎಲೆಗಳನ್ನು ಕಟ್ಟಿ ದೇವಿಗೆ ಮಂಟಪವನ್ನು ರಚಿಸಲಾಗುತ್ತದೆ. ಈ ಮಂಟಪವನ್ನು ಹೂವು ಹಾಗೂ ಇನ್ನಿತರ ವಸ್ತುಗಳಿಂದ ಅಲಂಕಾರ ಮಾಡಬಹುದು. ಗೌರಿ ಪೂಜೆಯಲ್ಲಿ ಮಹಿಳೆಯರು ಗೌರಿದಾರವೆಂದು ಕರೆಯಲಾಗುವ ಅರಶಿಣದ ದಾರವನ್ನು 16 ಸುತ್ತು ಬರುವವರೆಗೆ ತಮ್ಮ ಕೈ ಮಣಿಕಟ್ಟಿಗೆ ಕಟ್ಟಿಕೊಳ್ಳುತ್ತಾರೆ. ಗೌರಿ ಪೂಜೆಯಂದು ಮಹಿಳೆಯರು 5 ಬಾಗಿನವನ್ನು ತಯಾರಿಸಿ, ಒಂದನ್ನು ದೇವಿಗೆ ಅರ್ಪಿಸಿ ನಂತರ ಉಳಿದ ನಾಲ್ಕು ಬಾಗಿನವನ್ನು ಮುತ್ತೈದೆಯರಿಗೆ ನೀಡಲಾಗುತ್ತದೆ.

ಮನೆಗಳಲ್ಲಿ ಚಕ್ಕಲಿ, ಕಾಯಿ ಕಡುಬು, ಕರ್ಜಿಕಾಯಿ ಹೀಗೆ ಒಬ್ಬೊಬ್ಬರ ಮನೆಯಲ್ಲಿ ಒಂದೊಂದು ರೀತಿಯ ಬಗೆ ಬಗೆಯ ಸಿಹಿ ತಿಂಡಿಗಳನ್ನು ಮಾಡುವುದು ಅವರವರ ಪದ್ಧತಿ. ಮನೆಯಲ್ಲಿ ಗಣಪತಿ ತರದಿದ್ದರೆ ತಂದವರ ಮನೆಗೆ ಹೋಗಿ ನೋಡಿ ಬರುವುದು ಹಾಗೂ ಗಣಪನನ್ನು ನೋಡಿದರೆ ಸಕಲ ಪಾಪಗಳು ನಿವಾರಣೆ ಆಗುತ್ತದೆ ದೇವಿಗೆ ಕೇವಲ ಸಿಹಿ ಖಾದ್ಯವನ್ನು ಅರ್ಪಿಸಬೇಕು. ಪೂಜೆಯಲ್ಲಿ ದೇವಿಗೆ ಹೋಳಿಗೆ ಮತ್ತು ಪಾಯಸವನ್ನು ಮಾಡಿ ಅರ್ಪಿಸುತ್ತಾರೆ. ಮರುದಿನ ಗಣೇಶನನ್ನು ಮನೆಗೆ ಸ್ವಾಗತಿಸಲಾಗುತ್ತದೆ. ಪೂಜೆಯ ನಂತರ ಗಣೇಶ ವಿಗ್ರಹವನ್ನು ಮತ್ತು ಗೌರಿ ವಿಗ್ರಹವನ್ನು ನೀರಿನಲ್ಲಿ ವಿಸರ್ಜಿಸಲಾಗುತ್ತದೆ.

**ಮೈತ್ರೈದೆಯರಿಗೆ ಬಾಗಿನ ಕೊಡುವುದು :** ಮೊರದ ಬಾಗಿನಕ್ಕೆ ಅಣಿಯಾದ ಮೊರವನ್ನು ಶುದ್ಧಗೊಳಿಸಿ ಅದಕ್ಕೆ ಅರಶಿಣ ಮತ್ತು ಕುಂಕುಮವನ್ನು ಹಚ್ಚಬೇಕು. ನಂತರ ಬಾಗಿನಕ್ಕಾಗಿ ಧ್ಯಾನ್ಯಗಳನ್ನು, ಬಳೆಗಳು, ತೆಂಗಿನಕಾಯಿಯನ್ನು, ಕನ್ನಡಿ, ಬಳೆಬಿಚ್ಚೋಲೆ, 5 ಬಗೆಯ ಹಣ್ಣುಗಳು, ತಾಯಿಗೆ ಹಾಗೂ ಅತ್ತಿಗೆಗೆ ಸೇರಿದಂತೆ ನಾದಿನಿಯರಿಗೆ ಸೀರೆ, ರವಿಕೆ ಬಟ್ಟೆ ಮತ್ತು ಸುಮಂಗಲಿಯರು ಬಳಸುವ ವಸ್ತುಗಳನ್ನು, ಖಾದ್ಯಗಳನ್ನು ಇಟ್ಟು ಮೊರದ ಬಾಗಿನ ಸಿದ್ಧ ಪಡಿಸಿ ಮುತ್ತೈದೆಯರಿಗೆ ನೀಡುತ್ತಾರೆ.

**ಹಬ್ಬದ ಮಹತ್ವ :** ಗೌರಿ ಗಣೇಶ ಹಬ್ಬದಂದು ಮನೆಯ ಹೆಣ್ಣು ಮಕ್ಕಳು ಕೈಗಳಿಗೆ ಗೋರಟ್ಟಿಯನ್ನು ಹಾಕಿಕೊಂಡು ಸುಂದರವಾಗಿ ಅಲಂಕಾರವನ್ನು ಮಾಡಿಕೊಳ್ಳುತ್ತಾರೆ. ಗೌರಿ ಹಬ್ಬದಂದು ತಾಯಿ ಪಾರ್ವತಿಯು ತನ್ನ ತಂದೆಯ ಮನೆಗೆ ಬರುತ್ತಾಳೆ ಎನ್ನುವ ನಂಬಿಕೆಯಿದೆ. ಆಕೆ ತಂದೆಯ ಮನೆಗೆ ಒಂದು ಬಾಗಿನವನ್ನು ಸ್ವೀಕರಿಸುತ್ತಾಳೆ ಎನ್ನುವ ನಂಬಿಕೆಯಿರುವುದರಿಂದ ಈ ದಿನ ಬಾಗಿನಕ್ಕೆ ಹೆಚ್ಚಿನ ಮಹತ್ವವನ್ನು ನೀಡಲಾಗುತ್ತದೆ. ಗೌರಿ ಪೂಜೆಯನ್ನು ಮಾಡುವುದರಿಂದ ಮನೆಯಲ್ಲಿ ಸಂತೋಷ, ಸಮೃದ್ಧಿ, ಆಯಸ್ಸು ಮತ್ತು ಆರೋಗ್ಯ ಹೆಚ್ಚಾಗುತ್ತದೆ. ನಾಡಿನ ಸಮಸ್ತ ಜನತೆಗೆ ಗೌರಿ–ಗಣೇಶ ಹಬ್ಬದ ಹಾರ್ದಿಕ ಶುಭಾಶಯಗಳು.

# ದೃಷ್ಠಿ ಬದಲಾದರೆ ಭಾವನೆ ಬದಲಾದಿತು

– ಶ್ರೀ ಸೂರ್ಯಕಾಂತ ರ್‍ಯಾಕಲೆ, ಕಾನೂನು ವ್ಯವಸ್ಥಾಪಕರು, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಕಲಬುರಗಿ ವಿಭಾಗ.

ಮುಂಗಾರೂ ಇನ್ನೂ ಹದಿನ್ಯೆದು ದಿವಸದ ಮುಂಚೆ ಕಛೇರಿಯ ಕೆಲಸದ ನಿಮಿತ್ತ ಗಂಗಾವತಿ ನಗರ ಪೋಲಿಸ ಠಾಣೆಗೆ ಮಧ್ಯಾಹ್ನ 1.00 ಘಂಟೆಯ ಸುಮಾರಿಗೆ ಪ್ರವೇಶಿದಾಗ ಠಾಣೆಯ ಜಮಾದರ (ಹೆಡ್ ಕಾನ್ಸಿಟೆಬಲ್) ಎನು ಕೆಲಸವಿದೆ ಎಂದು ಏರು ಧ್ವನಿಯಲ್ಲಿ ವಿಚಾರಿಸಿದಾಗ ಪೊಲಿಸ್ ಸಬ್ ಇನ್ನಿಪೆಕ್ಟರನ್ನು ಕಾಣಬೇಕು ಎಂದು ಎತ್ತರ ಧ್ವನಿಯಲ್ಲಿ ಹೇಳಿದಾಗ ಸಾಹೆಬರು ರೌಂಡ್ಸನಲ್ಲಿ ಇದ್ದಾರೆ 2.00ಗಂಟೆಗೆ ಬರುತ್ತಾರೆ ಬನ್ನಿ ಎಂದು ಜಮಾದರ ಹೆಳಿದಾಗ, ಜಮಾದರ ಹಾಗೂ ಇನ್ಸಿಪೆಕ್ಟರ್ ಮೊಬೈಲ ನಂಬರ ಪಡೆದು ಸಾಹೇಬರು ಬಂದ ತಕ್ಷಣ ಪೋನ್ ಮಾಡಲು ಹೇಳಿ ಎಂದು ನನ್ನ ನಂಬರ ನೀಡಿ ಹೊರಗಡೆ ಬಂದೆ. ಒಂದು ತಾಸು ಎನು ಮಾಡುದು ಎಂದು ವಿಚಾರ ಮಾಡುವಾಗ, ರಾತ್ರಿ ಕಲಬುರಗಿಗೆ ವಾಪಸ್ಸು ಹೊಗಲು ಬಸ್ಸ ಟಿಕೆಟ ಕಾಯ್ದಿರಿಸೋಣ ಎಂದು ಪೋಲಿಸ್ ಠಾಣೆಯಿಂದ 300 ಮಿಟರ ದೂರದಲ್ಲಿರುವ ಬಸ್ಸ ನಿಲ್ದಾಣ ಕ್ಕೆ ಹೋಗಿ ಮುಂಗಡ ಟಿಕೆಟ ಮಾಡಿಕೊಂಡು ಹೊರಗೆ ಬಂದಾಗ ಲಿಂಗಾಯತ ಖಾನವಳಿ ಕಣ್ಣಿಗೆ ಬಿತ್ತು. ಬೆಳಗ್ಗೆ ತಿಂಡಿ ಜೋರಾಗಿದ್ದರಿಂದ ಹಸಿವು ಆಗಲಿಲ್ಲ ಅರ್ಧ ಗಂಟೆವರೆಗೆ ಸಮಯ ಕಳೆಯುವುದು ಹೇಗೆ ಎಂದು ಪ್ರಶ್ನೇ ಹಾಕಿಕೊಂಡೆ. ಹಸಿವೆ ಇಲ್ಲದಿದ್ದರು ಸಹ ಊಟ ಮಾಡೂಣ ಎಂದು ಲಿಂಗಾಯತ ಖಾನವಳಿಗೆ ಪ್ರವೇಶಿಸಿದೆ ಸುಮಾರು 15–20 ಜನ ಕುಡುವಷ್ಟು ತಗಡಿನ ಸೀಟ ಹೊಂದಿರುವ ಖಾನವಳಿ ಕೈತೊಳಿಯಲು ಸಿಂಕ ಇರಲಿಲ್ಲ ಬಾಗಿಲಿನ ಪಕ್ಕದಲ್ಲೆ ಬಕೆಟನಲ್ಲಿ ನೀರು ಮತ್ತು ಮಗ್ಗ ಹೊಂದಿತ್ತು. ಕೈ ತೊಳೆದು ಕೊಳ್ಳಲು ಹೊಗುವಾಗ ಗೋದಿ ಬಣ್ಣದ ಉದ್ದ ಮುಖ, ಚಿಗುರೊಡೆದ ಮಿಸೆ ಕುರುಚಲ ಗಡ್ಡ ಹೊಂದಿದದ ಸುಮಾರ 19–20 ವಯಸ್ಸಿನ ಯುವಕ ಜಗತ್ತಿನ ಎಲ್ಲಾ ಸಮಸ್ಯಗಳು ಎದುರಿಸಿ ಬಸವಳಿದಂತೆ ನಿರಾಸೆಯಿಂದ ಕೂಡಿದ ಸಪ್ಪೆ ಮುಖವನ್ನು ಗಮನಿಸಿದೆ. ಇಂತಹ ವಯಸ್ಸಿನ ಯುವಕರು ಎಷ್ಟು ಕ್ರಿಯಾಶೀಲವಾಗಿ ನಗುಮುಖದಿಂದ ಇರದನ್ನು ಬಿಟ್ಟು ಜೋತು ಮುಖ ಹಾಕಿಕೊಂಡು ಬದುಕುತ್ತಾರಲ್ಲ ಎಂದು ಅವನ ಮೆಲೆ ಜಿಗುಪ್ಸೆ ಹಾಗೂ ಕೋಪ ಮನದಲ್ಲಿ ಬಂತ್ತು. ನನ್ನ ಪಾಡಿಗೆ ನಾನು ಕೈಯನ್ನು ತೋಳಿದು ಕೈಯಲ್ಲಿರುವ ದಾಖಲಾತಿಯ ಫೈಲ ಒಂದು ಕಡೆ ಇಟ್ಟು ರೊಟ್ಟಿ ಊಟ ಬಡಿಸುವಂತೆ ಖಾನವಳಿ ಮಾಲಿಕನಿಗೆ ಹೇಳಿದೆ, ಊಟ ಬಡಿಸುವ ಹುಡುಗ ಊಟ ನೀಡಿದ ನಂತರ ಒಂದು ರೊಟ್ಟಿ ಊಟ ಮಾಡಿದ ನಂತರ ನನ್ನ ಗಮನ ನನ್ನ ಪಕ್ಕದ ಒಂದು ಟೆಬಲ ಬಿಟ್ಟು ಇನ್ನೊಂದು ಟೇಬಲ ಕಡೆ ಹೊದಾಗ ಹೊರಗಡೆ ನೋಡಿದ ಯುವಕ ಕಾಣಿಸಿದ. ಹುಡುಗನ ಪಕ್ಕದಲ್ಲ್ಲಿ ಸುಮಾರು 50–52 ವಯಸ್ಸಿನ ಹಿರಿಯ ಜೀವಿ ಒಬ್ಬರು ಕುತಿದರು ಇಬ್ಬರ ನಡುವೆ ಒಂದೆ ತಟ್ಟೆ ಅದರಲ್ಲಿ ಅನ್ನ ಸಾಂಬರ ಇರುವುದನ್ನು ನೋಡಿ ಇಂತಹವರು ಯಾಕೆ ಹೋಟಲಗೆ ಬಂದು ಒಂದೆ ತಟ್ಟೆಯಲ್ಲಿ ಊಟ ಮಾಡಬೇಕು ಬೇಕಾದರೆ ಪಾರ್ಸಲ್ ತೆಗೆದು ಕೊಂಡು ಹೊಗಿ ಹೊರಗಡೆ ಊಟ ಮಾಡಬೇಕು ಎಷ್ಟು ಜೀಪುಣರು ಎಂದು ಅಂದುಕೊಂಡಾಗ, ಅದೇ ಮನ್ನಸು ಇನ್ನೊಂದು ಕಡೆ ಪಾಪ ಅವರ ಹತ್ತಿರ ಕಡಿಮೆ ಹಣ ಇರಬಹುದು ಹಸಿವೆ ಆಗಿರಬಹುದು ಅದಕ್ಕೆ ಒಂದೆ ಊಟ ಹೇಳಿ ಇಬ್ಬರು ಸಹ ಊಟ ಮಾಡುತ್ತಿರಬಹುದು ಎಂದು ಮನ ಕರಗಿತ್ತು. ಮನಸ್ಸು ತಡೆಯದೆ ಪುನ ಪುನಹ ಆ ಕಡೆ ನೋಡುತಿತ್ತು ಯುವಕ ತಾನು ಊಟ ಮಾಡದೆ ಪಕ್ಕದಲ್ಲಿ ಕುಳಿತಿರುವ ಹಿರಿ ಜೀವಿಗೆ ತನ್ನ ಕೈಯಿಂದ ಊಣ್ಣಿಸುತಿದ್ದ. ಆಗ ಓ! ಹಿರಿ ಜೀವಿಗೆ ಅನಾರೋಗ್ಯ ವಿರಬಹುದು, ಸದಕ್ಕೆ ಹುಡಗ ಊಟ ಮಾಡಿಸಿ ಹುಡಗ ಊಟ ಮಾಡಬಹುದು ಎಂದುಕೊಂಡೆ ಮತ್ತೆ ನನ್ನ ದೃಷ್ಠಿ ಆ ಕಡೆ ಹರಿದಾಗ ಪಕ್ಕದಲ್ಲಿ ಕುತಿರುವ ಹಿರಿಯ ಜೀವಿ ಅರ್ದ ತೋಳಿನ ಪಟ್ಟೆ ಪಟ್ಟೆ ಅಂಗಿ ಹಾಕಿಕೊಂಡಿದ್ದಾರೆ ಮುಖದಲ್ಲಿ ಅನಾರೋಗ್ಯದ ಭಾವನೆ ಇರಲಿಲ್ಲ ಯಾಕೆ ಹುಡಗ ಊಟ ಮಾಡಿಸುತಿದ್ದಾನೆ ಎಂದು ದಿಟ್ಟಿಸಿ ನೋಡಿದಾಗ ಹಿರಿ ಜೀವಿಯ ಅಂಗಿಯ ಅರ್ಧ ತೊಳು ಕಾಣುತ್ತಿತ್ತು ಆದರೆ ಎರಡು ಕೈ ಕಾಣಲಿಲ್ಲ. ಒಂದೆ ಸಮನೆ ಆಶ್ಚರ್ಯವಾಗಿ ನನ್ನ ಮನಸಿಗೆ ಬರೆ ಬಡೆದಂತೆ ಆಯಿತ್ತು. ನಾನು ಎಂತಹ ತಪ್ಪು ಗ್ರಹಿಕೆ ಮಾಡಿಕೊಂಡೆ ಎಂದು ಮನ ಕಾಡಲು ಪ್ರಾರಂಭಿಸಿತ್ತು. ಎರಡು ಕೈಗಳನ್ನು ಇಲ್ಲದ ಹಿರಿಯ ಜೀವಿ ಅವರ ತಂದೆ ಯಾಗಿದ್ದರೂ ಅಥವಾ ಸಂಬಂಧಿಕರು ಆಗಿದ್ದರು ಎಂಬುದನ್ನು ಗೊತ್ತಿಲ್ಲ ಆದರು ಆ ಹುಡಗನ ಮೆಲೆ ಮೂಡಿದ ಜಿಗುಪ್ಸೆ ಮತ್ತು ಕೋಪದ ಭಾವನೆ ಬದಲಾಗಿ ಅವನ ಮೇಲೆ ಕರುಣೆ ಹಾಗೂ ಆಭಿಮಾನ ಮೂಡಿತ್ತು. ನನ್ನ ಪಕ್ಕದಲ್ಲಿ ಊಟ ಮಾಡುತಿರುವವರನ್ನು ಸರ್ ನೋಡಿ ಅವರನ್ನು ಇದರಲ್ಲಿ ಊಟ ಮಾಡುವವನು ಮತ್ತು ಊಟ ಮಾಡಿಸುವವನು ಇಬ್ಬರು ಪುಣ್ಯವಂತರೇ ಎಂದು ಹೇಳಿದಾಗ ಅವರು ತಲೆಯಾಡಿಸಿ ಅಭಿಮಾನ ತೊರಿಸಿದರು. ನನ್ನ ಊಟ ಮುಗಿದ ನಂತರ ಕೈತೊಳೆದು ಕೊಳ್ಳಲು ಹೊರಗೆ ಹೋಗಿ ಆ ಹುಡಗನನ್ನು ಮಾತನಾಡಿಸಲು ಒಳಗಡೆ ಬಂದಾಗ, ಹುಡಗ ಮತ್ತು ಹಿರಿಯ ಜೀವಿ ಊಟ ಮುಗಿಸಿಕೊಂಡು ಹೊಗಿರುತ್ತಾರೆ. ಅವರನ್ನು ಮಾತನಾಡಿಸಲು ಆಗಲಿಲ್ಲ. ಆದರೆ ಆ ಘಟನೆ ನನ್ನನು ಮತ್ತೆ ಮತ್ತೆ ಕಾಡುತ್ತಿದೆ.

**(ಜೂನ ಮಾಹೆಯಲ್ಲಿ ಗಂಗಾವತಿಗೆ ಕೆಲಸದ ನಿಮಿತ್ತ ಹೊದಾಗ ಜರುಗಿರುವ ನೈಜ ಘಟನೆ)**



# ಸಹಕಾರ ಸಂಸ್ಥೆಗಳ ಮಂಡಳಿ ರಚನೆ ನಿಬಂಧಕರ ಜವಾಬ್ದಾರಿ

– ಶ್ರೀ ಸಿ.ಎನ್ ಪರಶಿವಮೂರ್ತಿ, ನಿವೃತ್ತ ಸಹಕಾರ ಸಂಘಗಳ ಅಪರ ನಿಬಂಧಕರು, ಮೈಸೂರು.

ಸಹಕಾರ ಸಂಘಗಳ ಕಾರ್ಯ ನಿರ್ವಹಣೆ ಮಾಡಲು ಆಡಳಿತ ಮಂಡಳಿ ರಚನೆ ಆಗುತ್ತದೆ. ಅದನ್ನು 1959ರ ಕಾಯಿದೆ ಕಲಂ.29ಎ ಅಡಿ ನಿಯಂತ್ರಿಸಲಾಗುತ್ತದೆ. 97ನೇ ಸಂವಿದಾನ ತಿದ್ದುಪಡಿ ಹಾಗೂ ಆನಂತರ ಕರ್ನಾಟಕ ಸಹಕಾರ ಸಂಘಗಳಲ್ಲಿ ತಿದ್ದುಪಡಿ 2013ರಲ್ಲಿ ಮಾಡಲಾಗಿದೆ. ಅದರನ್ವಯ ಕಾರ್ಯಕ್ಷೇತ್ರಕ್ಕೆ ಅನುಗುಣವಾಗಿ ಕನಿಷ್ಟ 13 ಹಾಗೂ ಗರಿಷ್ಟ 21 ಸಂಖ್ಯೆಯನ್ನು ಹೊಂದಲು ಅವಕಾಶ ಕಲ್ಪಿಸಿದೆ. ಇದರ ಜೊತೆಗೆ ಮಂಡಳಿಗೆ ತಾಂತ್ರಿಕ ಮಾರ್ಗದರ್ಶನ ನೀಡಲು 2ಕ್ಕೂ ಮೀರದಂತೆ ವೃತ್ತಿಪರ ನಿರ್ದೇಶಕರನ್ನು ನೇಮಿಸಿಕೊಳ್ಳಲು ಸಂವಿಧಾನ ಮತ್ತು ಸಹಕಾರ ಕಾಯಿದೆಯಲ್ಲಿ ಸೇರಿಸಲಾಗಿದೆ. ಇದರ ಜೊತೆಗೆ ಉಪಕಲಂ.4(ಎ) ಅಡಿ ವೃತ್ತಿಪರ ನಿರ್ದೇಶಕರಿಗೆ ಇರಬೇಕಾದ ಪರಿಣತಿಯನ್ನು ನಿಗದಿಪಡಿಸಿದೆ. ಬ್ಯಾಂಕಿಂಗ್, ವ್ಯವಸ್ಥಾಪನೆ, ಹಣಕಾಸು ಕ್ಷೇತ್ರಗಳ ಅನುಭವವಿರುವ ಅಥವಾ ಸಹಕಾರ ಸಂಘವು ಕೈಗೊಳ್ಳಬೇಕಾದ ಉದ್ದೇಶಗಳಿಗೆ ಮತ್ತು ಚಟುವಟಿಕೆಗಳಿಗೆ ಸಂಬಂದಿಸಿದ ಯಾವುದೇ ಇತರ ಕ್ಷೇತ್ರ ದಲ್ಲಿ ಪರಿಣತಿ ಹೊಂದಿರುವ ವ್ಯಕ್ತಿಯು ಮಂಡಳಿ ಸದಸ್ಯರನ್ನಾಗಿ ನೇಮಿಸಿಕೊಳ್ಳತಕ್ಕದ್ದು ಎಂದಿದೆ ಮತ್ತು ಈ ಸಂಖ್ಯೆ ಎರಡಕ್ಕೆ ಮಿರತಕ್ಕದ್ದಲ್ಲವೆಂದೆ ತಿಳಿಸಿದೆ.

ಈ ತಿದ್ದುಪಡಿ ಕಾಯಿದೆ 2013ರಲ್ಲಿ ಜಾರಿಯಾಗಿದೆ(11–02–2013) ಇದೇ ದಿನಾಂಕದಿಂದ ಕಲಂ12(1)ರ ಪರಂತಕವೂ ಸೇರ್ಪಡೆಯಾಗಿದೆ. ಈ ಪರಂತಕದಲ್ಲಿ ಸ್ಪಷ್ಟವಾಗಿ ಸೇರಿಸಲಾಗಿರುವ ಅವಕಾಶ ಈ ಕೆಳಕಂಡಂತೆ ಇದೆ. "ಪ್ರತಿಯೊಂದು ಸಹಕಾರ ಸಂಘವು ಸದರಿ ತಿದ್ದುಪಡಿಗಳು ದಿನಾಂಕದಿಂದ 90 ದಿನಗಳ ಒಳಗಾಗಿ, ಕಾಲಕಾಲಕ್ಕೆ, ಈ ಅದಿನಿಯಮ ಅಥವಾ ನಿಯಮಗಳಿಗೆ ಮಾಡಲಾದ ತಿದ್ದುಪಡಿಗಳಿಗೆ ಅನುಸಾರವಾಗಿ ತಿದ್ದುಪಡಿಮಾಡತಕ್ಕದ್ದು." ಇದನ್ನು ಉಪವಿಧಿಗಳ ತಿದ್ದುಪಡಿ(ಕಲಂ.12) ಸೇರಿಸುವುದರಿಂದ ಸಂಘದ ಉಪನಿಯಮಗಳಿಗೆ ತಿದ್ದುಪಡಿತರುವ ಬಗ್ಗೆ ಉಲ್ಲೇಖಿಸಿದೆ.

ಅಂದರೆ ಸಹಕಾರ ಸಂಘಗಳ ಉಪನಿಯಮಗಳಿಗೆ ತಿದ್ದುಪಡಿ ಮಾಡುವ ಜವಾಬ್ದಾರಿ ಸಂಬಂಧಪಟ್ಟ ಸಹಕಾರ ಸಂಘಗಳಿಗೆ ನೀಡಲಾಗಿದೆ. ತಿದ್ದುಪಡಿ ಮಾಡಿರುವುದನ್ನು ದೃಡೀಪಡಿಸಿಕೊಳ್ಳುವುದು ನಿಬಂಧಕರ ಜವಾಬ್ದಾರಿ, ಏಕೆಂದರೆ ಕಲಂ.12ನ್ನು ನಿಬಂಧಕರು ಮತ್ತು ಅವರ ನಿಯಂತ್ರಣದಲ್ಲಿರುವ ಸಹಾಯಕ, ಉಪ, ಸಂಯುಕ್ತ ಮತ್ತು ಅಪರ ನಿಬಂಧಕರುಗಳು ನಿರ್ವಹಿಸುವಂತೆ ನಿಯಂತ್ರಿಸುವ ಅಧಿಕಾರ ನಿಬಂಧಕರಿಗೆ ಮಾತ್ರ ಇದೆ. ಆದರೆ ಉಪವಿಧಿಗಳ ತಿದ್ದುಪಡಿಮಾಡಿಕೊಂಡಬಗ್ಗೆ ಕಾರ್ಯಕ್ಷೇತ್ರದ ಅಧಿಕಾರಿಗಳು ಗಮನಿಸುವುದೇ ಇಲ್ಲ. ಉಪವಿಧಿಗಳ ತಿದ್ದುಪಡಿ ಪ್ರಸ್ತಾವನೆ ಸಲ್ಲಿಸಿದಾಗ ಈ ವೃತ್ತಿಪರ ನಿರ್ದೇಶಕರ ಸೇರ್ಪಡೆ ಬಗ್ಗೆ ಅಥವಾ ಸೇರ್ಪಡೆಇಲ್ಲದಬಗ್ಗೆ ಗಮನ ಹರಿಸುವುದೇ ಇಲ್ಲ.

ರಾಜ್ಯ ಮಟ್ಟದ ಮಹಾಮಂಡಳಿಗಳಲ್ಲಿ ನಿಬಂಧಕರೇ ನಿರ್ದೇಶಕರಾಗಿದ್ದಾರೆ ಅಥವಾ ಅಪರನಿಬಂಧಕರು ನಿರ್ದೇಶಕರಾಗಿದ್ದಾರೆ. ರಾಜ್ಯ ಅಪೆಕ್ಸ್‌ಬ್ಯಾಂಕ್, ರಾಜ್ಯ ಭೂಬ್ಯಾಂಕ್, ಮಾರಾಟ ಮಹಾಮಂಡಳ, ಗ್ರಾಹಕರ ಮಹಾಮಂಡಳ, ರಾಜ್ಯ ಸಹಕಾರ ಮಹಾಮಂಡಳ, ಪಟ್ಟಣಬ್ಯಾಂಕ್‌ಗಳ ಮಹಾಮಂಡಳ, ರಾಜ್ಯ ಎಣ್ಣೆ ಸಹಕಾರ ಮಹಾಮಂಡಳ ಮತ್ತಿತರೇ. ಈ ಸಂಘಗಳು ವೃತ್ತಿಪರ ನಿರ್ವಾಹಕರ ಆಯ್ಕೆ ಮಾಡುವಾಗ ಕಲಂ.28ಎ (4ಎ) ಅನ್ವಯ ಅರ್ಹತೆ ಪಡೆದ ವ್ಯಕ್ತಿಗಳನ್ನು ಪರಿಶೀಲಿಸುವುದೇ ಇಲ್ಲ. ಈ ಪಟ್ಟಿಯನ್ನು ಗಮನಿಸಿದಾಗ ಚುನಾವಣೆಯಲ್ಲಿ ಸ್ಪರ್ಧಿಸಲು ಅವಕಾಶಸಿಗದ/ ಅಥವಾ ಸ್ಪರ್ಧಿಸಬೇಡವೆಂದು ನಿರ್ಧರಿಸಿದ ವ್ಯಕ್ತಿಗಳನ್ನು ವೃತ್ತಿಪರ ನಿರ್ದೇಶಕರನ್ನಾಗಿ ನೇಮಿಸಿಕೊಳ್ಳಲಾಗುತ್ತದೆ. ನಿಬಂಧಕರು ಆಸಂಬಂಧಪಟ್ಟ ಆಡಳಿತ ಮಂಡಳಿ ಸದಸ್ಯರಾಗಿದ್ದರೂ ಇದಕ್ಕೆ ಪ್ರತಿರೋದ ವ್ಯಕ್ತಪಡಿಸುವುದೇ ಇಲ್ಲ. ಇದು ಅವರ ಜವಾಬ್ದಾರಿಅಲ್ಲವೇ?

ಇದಕ್ಕೆ ಒಂದು ಉದಾಹರಣೆ ಕೊಡುವುದಾದರೆ ರಾಜ್ಯ ಪಟ್ಟಣ ಸಹಕಾರ ಸಂಘಗಳ ಮಹಾಮಂಡಳದ ಆಡಳಿತ ಮಂಡಳಿಯಲ್ಲಿ ನಿಬಂಧಕರನ್ನು ಸೇರಿಸಿ (ಮುಖ್ಯಕಾರ್ಯ ನಿರ್ವಾಹಕರನ್ನು ಹೊರತುಪಡಿಸಿ) 19 ನಿರ್ದೇಶಕರಿದ್ದಾರೆ, ಇವರ ಜೊತೆಗೆ ನಾಲ್ವರು ವ್ಯಕ್ತಿಗಳನ್ನು ವಿಶೇಷ ಆಹ್ವಾನಿತರುಗಳೆಂದು ಸೇರಿಸಿಕೊಳ್ಳಲಾಗಿದೆ. ಅಂದರೆ ಈ ನಾಲ್ಕು ವ್ಯಕ್ತಿಗಳು ಪ್ರತಿ ಆಡಳಿತ ಮಂಡಳಿ ಸಭೆಗೆ ಹಾಜರಾಗುತ್ತಾರೆ. ನಿರ್ದೇಶಕರುಗಳಿಗೆ ಸಿಗುವ ಎಲ್ಲಾ ಆರ್ಥಿಕ ಸವಲತ್ತು ಪಡೆಯುತ್ತಾರೆ. ಇದರ ಜೊತೆಗೆ ಮತ್ತೊಂದು ವಿರೋದಾಭಾಸದ ಅವಕಾಶ ಕಲ್ಪಿಸಿರುವುದು ನಿಬಂಧಕರ ಗಮನಕ್ಕೆ ಬರುವುದೇ ಇಲ್ಲ. ಅದೆಂದರೆ ಶಿಕ್ಷಣಾ ಸಲಹಾ ಸಮಿತಿ ರಚನೆ 1960 ನಿಯಮ 20ರಲ್ಲಿ ರಾಜ್ಯ ಸಹಕಾರ ಮಹಾಮಂಡಳದ ಅಧ್ಯಕ್ಷರ ಜೊತೆ ರಾಜ್ಯ ಮಟ್ಟದ ನಾಲ್ಕು ಮಹಾಮಂಡಳಗಳ ಅಧ್ಯಕ್ಷರು ಸದಸ್ಯರಾಗಿದ್ದಾರೆ, ಪ್ರಾದೇಶಿಕ ಸಹಕಾರ ಸಂಸ್ಥೆ ನಿರ್ದೇಶಕರು, ನಿಬಂಧಕರು ಅಥವಾ ಅವರ ಪ್ರತಿನಿಧಿ ಹಾಗೂ ಮಹಾಮಂಡಳದ ಮುಖ್ಯ ಕಾರ್ಯನಿರ್ವಾಹಕ ಸದಸ್ಯ ಕಾರ್ಯದರ್ಶಿಯಾಗಿದ್ದಾರೆ. ಆದರೆ ಪಟ್ಟಣ ಸಹಕಾರ ಮಹಾಮಂಡಳದ ಶಿಕ್ಷಣ ಸಲಹಾ ಸಮಿತಿಯಲ್ಲಿ ಮಹಾಮಂಡಳದ ಅಧ್ಯಕ್ಷರು ಮತ್ತು ಮುಖ್ಯಕಾರ್ಯ ನಿರ್ವಾಹಕರು ಸದಸ್ಯರೇ ಅಲ್ಲ. ಹಾಗೂ ಸೇರಿಸಲಾದ 8 ಸದಸ್ಯರಲ್ಲಿ ಆರ್‌ಐಸಿಎಂ ನಿರ್ದೇಶಕರನ್ನು ಹೊರತುಪಡಿಸಿ ಉಳಿದ 7 ಸದಸ್ಯರು ಚುನಾಯಿತರಾಗಲು ಅರ್ಹರಿದ್ದು ಅಥವಾ ಸ್ಪರ್ಧಿಸದಂತೆ ನಿರ್ಬಂದಿಸಲಾದ ವ್ಯಕ್ತಿಗಳು. ಇವರು ಸಹಕಾರ ಶಿಕ್ಷಣ ತಜ್ಞರಲ್ಲ ಆದರೂ ನಿಬಂಧಕರು ಈ ಬಗ್ಗೆ ವಿಮರ್ಶೆ ಮಾಡುವುದೇ ಇಲ್ಲ.

Swabhimani Sahakari, Kannada, English Monthly, Publishing Date 5th, Posting Day 8th
posted at Bangalore PSO, Mysore Road, Bangalore-560026
Registered No. KA/BGW/1744/2020-2022 RNI NO. KARBIL-2004/18001/Pages 32
Licensed to post without Prepayment License No. PMG BG/WPP-384/2020-2022.

ಯಾವುದೇ ಸಮಿತಿ/ಉಪಸಮಿತಿಯಲ್ಲಿ ಮುಖ್ಯಕಾರ್ಯನಿರ್ವಾಹಕನಿಲ್ಲದಿದ್ದರೆ ಆ ನಡಾವಳಿಗಳಿಗೆ ಸಿಂಧುತ್ವವಿರುವುದಿಲ್ಲ. ಏಕೆಂದರೆ ಪ್ರತಿಯೊಂದು ಸಮಿತಿಯಲ್ಲಿ ಅಧ್ಯಕ್ಷರು/ ಮುಖ್ಯಕಾರ್ಯನಿರ್ವಾಹಕ ಇಲ್ಲದಿದ್ದರೆ ನಡಾವಳಿಗಳ ಜಾರಿಗೆ ತರುವ ಜವಾಬ್ದಾರಿ ಇರುವುದಿಲ್ಲ. ಇದನ್ನು ನಿಬಂಧಕರು ಮಾರ್ಗದರ್ಶನ ನೀಡಿಲ್ಲ ಏಕೆ?

ಮತ್ತೊಂದು ಉದಾಹರಣೆ ನೀಡುವುದಾದರೆ ಚಿತ್ರದುರ್ಗ ಜಿಲ್ಲಾ ಸಹಕಾರ ಬ್ಯಾಂಕಿನ ವ್ಯವಸ್ಥಾಪಕ ನಿರ್ದೇಶಕರು ಸಂಯುಕ್ತ ನಿಬಂಧಕರು, ಮಾನ್ಯ ಜಿಲ್ಲಾ ಉಪನಿಬಂಧಕರು ನಿರ್ದೇಶಕರು ಆದರೆ ಆ ಮಂಡಳಿಯಲ್ಲಿ ಮೂರು ವೃತ್ತಿಪರ ನಿರ್ದೇಶಕರು ಇದ್ದಾರೆ, ಇದು ಕಾನೂನು ಉಲ್ಲಂಗನೆ ಎಂದು ಇಬ್ಬರೂ ಅಧಿಕಾರಿಗಳಿಗೂ ತಿಳಿದಿದ್ದರೂ, ಅವಕಾಶ ಹೇಗೆ ನೀಡಿದರು ಎಂದು ನಿಬಂಧಕರು ಕೇಳುವುದೇ ಇಲ್ಲ. ಇದೇ ರೀತಿ ರಾಜ್ಯ ಸಹಕಾರಿ ಮಹಾಮಂಡಳ. ರಾಜ್ಯ ಸಹಕಾರಿ ಆಂದೋಲನದ ಮಾದರಿ ಸಂಸ್ಥೆ ಮತ್ತು ಮಾರ್ಗದರ್ಶನ ನೀಡುವ ಸಂಸ್ಥೆ. ಈ ಸಂಸ್ಥೆಯಲ್ಲಿ ಇಬ್ಬರು ವೃತ್ತಿಪರ ನಿದೇಶಕರನ್ನು ಸೇರಿಸಿಕೊಂಡಿದ್ದಾರೆ ಆದರೆ ಅವರು ಸಂವಿದಾನದನ್ವಯ ಸಹಕಾರಕಾಯಿದೆ ಕಲಂ.28ಎ(4ಎ) ಅಡಿ ಅರ್ಹರೆಂದು ಪರಿಶಿಲಿಸಿಯೇ ಇಲ್ಲ.

ಈ ಲೇಖನದ ಮುಖ್ಯ ಉದ್ದೇಶ, ಸಂವಿಧಾನ ತಿದ್ದುಪಡಿ ಮತ್ತು 1959ರ ಕಾಯ್ದೆ ಕಲಂ.28ಎ(4ಎ) ಗೆ ತಿದ್ದುಪಡಿ ತಂದ ಉದ್ದೇಶ ಚುನಾಯಿತ ಮಂಡಳಿಯಲ್ಲಿ, ಆ ಸಂಸ್ಥೆ ನಡೆಸುತ್ತಿರುವ ವ್ಯವಹಾರದ ಬಗ್ಗೆ ವೃತ್ತಿಪರರಮಾರ್ಗದರ್ಶನದ ಅವಶ್ಯಕತೆ ಇದೆ ಎಂದು. ಇದರ ಜೊತೆಗೆ ಪ್ರತಿಯೊಬ್ಬ ಚುನಾಯಿತ ನಿರ್ದೇಶಕನು ಆ ಸಂಸ್ಥೆ ನಡೆಸುತ್ತಿರುವ ವ್ಯವಹಾರದ ಬಗ್ಗೆ ಸಾಮಾನ್ಯ ತಿಳುವಳಿಕೆ ಇದ್ದರೂ, ವ್ಯವಸ್ಥಾಪನೆ, ತೀರ್ಪುಗಳ, ಹಣಕಾಸು, ಕಾನೂನು ಇವುಗಳ ಬಗ್ಗೆ ವಿಮರ್ಷೆ ಮಾಡಲು ಶಕ್ತಿ ಇಲ್ಲದೇ ಇರಬಹುದು, ಸ್ವಾತಂತ್ರ ವೃತ್ತಿಪರರು ತಮ್ಮ ಮಾರ್ಗದರ್ಶನವನ್ನು, ಮಂಡಳಿ ಸದಸ್ಯರಿಗೆ ನೀಡಿ ಸಹಕಾರಿ ಸಂಘದ ವೃತ್ತಿಪರ ನಿರ್ವಹಣೆಗೆ ಸಹಕಾರಿ ಯಾಗಲೆಂದು. ಆದರೆ ಇದನ್ನು ಸಂವಿದಾನದಲ್ಲಿ ಮತ್ತು ಕಾಯ್ದೆಯಲ್ಲಿ ಸೇರಿಸಿ 10 ವರ್ಷಗಳಾದರೂ ಎಲ್ಲಾ ಸಹಕಾರ ಸಂಘಗಳೂ ಅಳವಡಿಸಿಕೊಳ್ಳದೇ ಇರುವುದು ಕಾನೂನಿನ ಉಲ್ಲಂಗನೆ ಎಂದು ನಿಬಂಧಕರಿಗೆ ತಿಳಿಸುವ ಜವಾಬ್ದಾರಿ ಕೇಂದ್ರ ಕಛೇರಿಯಲ್ಲಿರುವ ಹಿರಿಯ ಅಧಿಕಾರಿಗಳು ತಮ್ಮ ಕೆಲಸ ಮಾಡಿಲ್ಲವೇಕೆ.?

ಇದಕ್ಕೆ ಪರಿಹಾರದ ರೂಪದಲ್ಲಿ ಕ್ರಮ ಜರುಗಿಸಲು ಕಾಯ್ದೆಕಲಂ 12(5), ಮತ್ತು 12(6) ರಲ್ಲಿ ಇರುವ ಅಧಿಕಾರವನ್ನು ಚಲಾಯಿಸಿ ಜವಾಬ್ದಾರಿಯನ್ನು ನಿರ್ವಹಿಸಬೇಕು. ಈ ಹಿಂದೆ ಕೃಷಿಪತ್ತಿನ ಸಹಕಾರ ಸಂಘಗಳ ಆಡಳಿತ ಮಂಡಳಿ ರಚನೆ ಬಗ್ಗೆ ನಿಬಂಧಕರು ಕಲಂ.12(5) ಮತ್ತು(6) ರಡಿ ಅಧಿಕಾರ ಚಲಾಯಿಸಿ ಮಂಡಳಿ ಪುನರ್‌ರಚನೆ ಮಾಡಿದ್ದಾರೆ. ಇದಕ್ಕೆ ಬೇರೊಂದು ಆಯಾಮದಲ್ಲಿ ಚಿಂತಿಸಬೇಕಾದರೆ, ಸಂವಿದಾನ ಮತ್ತು 1959ರ ಕಾಯ್ದೆಯಲ್ಲಿ ಕನಿಷ್ಠ ಮಂಡಳಿಸಂಖ್ಯೆಯನ್ನು 13ಕ್ಕೆ ನಿಗದಿಪಡಿಸಿದೆ. ವಿಷಾದದ ಸಂಗತಿಯೆಂದರೆ ಈಗಲೂ 9 ಸದಸ್ಯರಿರುವ ಮಂಡಳಿಗಳು ಮುಂದುವರಿಯುತ್ತಿವೆ. ಅದಕ್ಕಾಗಿ ನಿಬಂಧಕರು ತನ್ನ ನಿಯಂತ್ರಣದಲ್ಲಿರುವ ಅಧಿಕಾರಿಗಳ ಮುಖಾಂತರ ಮಂಡಳಿ ರಚನೆಯಲ್ಲಿ ಕನಿಷ್ಠ ಸಂಖ್ಯೆ ನಿರ್ದೇಶಕರ ಬಗ್ಗೆ ಕ್ರಮ ಜರಿಗಿಸುವುದು ಅವಶ್ಯಕ.

ಇದರ ಜೊತೆಗೆ ಈ ಹಿಂದೆ 1959ರ ಕಾಯ್ದೆ ಕಲಂ.129ಎ ಅನ್ವಯ ನಿಬಂಧಕರೇ ಮಾದರಿ ಉಪನಿಯಮಗಳನ್ನು, ಗೃಹನಿರ್ಮಾಣ ಸಹಕಾರ ಸಂಘಗಳನ್ನು ಫಾರ್ಮಿಂಗ್ ಸಹಕಾರ ನಮೂನೆ ಮಾದರಿ ಉಪನಿಯಮ ರಚಿಸಿ ಜಾರಿ ಮಾಡಿದ್ದಾರೆ. ಆದರೆ ಎಲ್ಲಾ ವರ್ಗದ ಸಹಕಾರ ಸಂಘಗಳಿಗೆ ಮಹಾ ಮಂಡಳಿಗಳು ಮಾದರಿ ಉಪನಿಯಮ ರಚಿಸುತ್ತಿದ್ದಾರೆ ಅದನ್ನು ಶಾಸನಬದ್ಧವಾಗಿ ನಿಬಂಧಕರ ಒಪ್ಪಿಗೆ ಪಡೆದು ನೀಡುವುದು ಅವಶ್ಯಕ, ಅಂದರೆ ಹೈನುಗಾರಿಕೆ ಸಹಕಾರ ಸಾಮಾನ್ಯ ಕೃಷಿಪತ್ತಿನ ಸಹಕಾರಿ ಸಂಸ್ಥೆಗಳಿಗೆ ನಿಬಂಧಕರು – ಮಾದರಿಯಲ್ಲಿ ರೂಪಿಸಿದಲ್ಲಿ ಅದನ್ನು ಶಾಸನಬದ್ಧ ನಿರ್ದೇಶನದ ಮೂಲಕ ಜಾರಿ ಮಾಡಿದಾಗ ಮಾತ್ರ (ಅದಂದರೆ ಕಲಂ.129ಎ ಅಡಿ) ಅದನ್ನು ಪ್ರತಿಯೊಂದು ಸಂಘದಲ್ಲಿ ಅನ್ವಯಿಸಲೇಬೇಕು, ಮತ್ತು ಅದು ಕಾಯಿದೆಯಡಿ ರಚನೆಯಾದಂತೆ ಭಾವಿಸಬಹುದು.

## ಉಪಸಂಹಾರ :

ಪ್ರತಿಯೊಂದು ಸಹಕಾರ ಸಂಘಗಳು ಗರಿಷ್ಠ ಇಬ್ಬರು ವೃತ್ತಿಪರ ನಿರ್ದೇಶಕರನ್ನು ಸೇರಿಸಿಕೊಳ್ಳಲು ಕಲಂ.129ಎ ಅಡಿ ನಿಬಂಧಕರು ನಿರ್ದೇಶನ ನೀಡುವುದು ಅವಶ್ಯಕ ಇದರ ಜೊತೆಗೆ ಮಂಡಳಿಯಲ್ಲಿ ಕನಿಷ್ಠ 13 ಸಂಖ್ಯೆ ಇರುವಂತೆ ನಿರ್ದೇಶಿಸತಕ್ಕದ್ದು ಹಾಗೂ ಮೀಸಲಾತಿ ಬಗ್ಗೆ ಸ್ಪಷ್ಟ ನಿರ್ದೇಶನ ನೀಡಬೇಕು.

**ಕೇಂದ್ರ ಕಛೇರಿ :** "ಸೌಹಾರ್ದ ಸಹಕಾರಿ ಸೌಧ" ನಂ.68, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಕೇಂದ್ರ ಕಛೇರಿ, ಒಂದನೇ ಮಹಡಿ, 17 & 18ನೇ ಅಡ್ಡರಸ್ತೆ ಮಧ್ಯೆ, ಮಾರ್ಗೋಸಾ ರಸ್ತೆ, ಮಲ್ಲೇಶ್ವರಂ, ಬೆಂಗಳೂರು – 560055 ದೂ : 080–23378375–80, 23474408, 23573291
**ಸೌಹಾರ್ದ ಸಹಕಾರಿಗಳ ದಾವಾ ಪಂಚಾಯತಿ ನ್ಯಾಯಾಲಯ :** "ಸೌಹಾರ್ದ ಸಹಕಾರಿ ಸೌಧ", ನಂ.68, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಕೇಂದ್ರ ಕಛೇರಿ, ಒಂದನೇ ಮಹಡಿ, 17 & 18ನೇ ಅಡ್ಡರಸ್ತೆ ಮಧ್ಯೆ, ಮಾರ್ಗೋಸಾ ರಸ್ತೆ, ಮಲ್ಲೇಶ್ವರಂ, ಬೆಂಗಳೂರು ದೂ: 080–23449933/34
**ಇ–ಸ್ಟಾಂಪಿಂಗ್ ವಿಭಾಗ :** "ಸೌಹಾರ್ದ ಸಹಕಾರಿ ಸೌಧ", ನಂ.68, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಇ–ಸ್ಟಾಂಪಿಂಗ ವಿಭಾಗ, ನೆಲ ಮಹಡಿ, 17 & 18ನೇ ಅಡ್ಡರಸ್ತೆ ಮಧ್ಯೆ, ಮಾರ್ಗೋಸಾ ರಸ್ತೆ, ಮಲ್ಲೇಶ್ವರಂ, ಬೆಂಗಳೂರು – 560055
**ಬೆಂಗಳೂರು ಪ್ರಾಂತೀಯ ಕಛೇರಿ :** "ಸೌಹಾರ್ದ ಸಹಕಾರಿ ಸೌಧ", ನಂ.68, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು ಪ್ರಾಂತೀಯ ಕಛೇರಿ, ನೆಲ ಮಹಡಿ, 17 & 18ನೇ ಅಡ್ಡರಸ್ತೆ ಮಧ್ಯೆ, ಮಾರ್ಗೋಸಾ ರಸ್ತೆ, ಮಲ್ಲೇಶ್ವರಂ, ಬೆಂಗಳೂರು – 560055 ದೂ: 080–23525546.
**ಮೈಸೂರು ಪ್ರಾಂತೀಯ ಕಛೇರಿ :** ಶಂಕರ ಮಠ ರಸ್ತೆ, 2ನೇ ಕ್ರಾಸ್, ನಟರಾಜ ಸಭಾಭವನದ ಹತ್ತಿರ, ಮೈಸೂರು–570004, ದೂ: 0821–2332299
**ಬೆಳಗಾವಿ ಪ್ರಾಂತೀಯ ಕಛೇರಿ :** 1119/ಬಿ, ಕಣಬರ್ಗಿ ಇಂಡಸ್ಟ್ರಿಯಲ್ ಏರಿಯಾ, ರೂರಲ್ ಆಯುರ್ವೇದಿಕ ಕಾಲೇಜ ಹತ್ತಿರ, ಆಟೋ ನಗರ, ಬೆಳಗಾವಿ–590015 ದೂರವಾಣಿ: 0831–2401551.
**ಕಲಬುರಗಿ ಪಾಂತೀಯ ಕಛೇರಿ :** ಶಿವಶರಣ ನಿಲಯ, ದೇವತಾ ಆಸ್ಪತ್ರೆ ಎದುರುಗಡೆ, ಖೂಬಾ ಪ್ಲಾಟ್, ಕಲಬುರಗಿ – 585102 ದೂ: 08472–270222

Edited, Printed and Published by Sharangouda G. Patil - Managing Director, on behalf of karnataka state Souharda Federal Co operative Ltd., Nirman Bhavan complex, Dr. Rajkumar Road, 1st Black, Rajajinagar, Bengaluru-560 010